2249-2429 Volume : 10, Issue : 3, Pages 52, 7th December. 2020 Annual Subscription ₹.750/-

RNI REG.NO.KARKAN/2011/38712

# ಶಿಕ್ಷಣ ಸೌಧ

ತ್ರೈಮಾಸಿಕ ಶಿಕ್ಷಣ ಮತ್ತು ಸಂಶೋಧನಾ ಪತ್ರಿಕೆ

**SHIKSHAN SOUDHA** *A Quarterly Education and Research Journal*

APPROVED BY UGC CARE

Listed in U.G.C. Care List



## ಉನ್ನತ ಶಿಕ್ಷಣದಲ್ಲಿ ಪ್ರಾಜೆಕ್ಟ್‌ವರ್ಕ್, ದತ್ತಾಂಶಕಾರ್ಯ ಹೇಗಿರಬೇಕು?

## ಯುವಕರಲ್ಲಿ ದೇಶಭಕ್ತಿ ಬೆಳೆಸುವಲ್ಲಿ ಶಿಕ್ಷಕರ ಪಾತ್ರ



## ಗೂಗಲ್ ಕ್ಲಾಸ್‌ರೂಮ್ ಕಲಿಕಾ ನಿರ್ವಹಣಾ ವ್ಯವಸ್ಥೆಯಲ್ಲಿ ಬೋಧನಾ–ಕಲಿಕಾ ಪ್ರಕ್ರಿಯೆ

# ಶಿಕ್ಷಣ ಸೌಧ

ತ್ರೈಮಾಸಿಕ ಶಿಕ್ಷಣ ಮತ್ತು ಸಂಶೋಧನ ಪತ್ರಿಕೆ

U.G.C. Care Listed Journal

7ನೇ ಡಿಸೆಂಬರ 2020 ಸಂಪುಟ : 10 ಸಂಚಿಕೆ : 3

ಪ್ರಕಾಶಕರು :

**ಜಯದೇವ ಮೈ. ಮೆಣಸಗಿ**

ವಿದ್ಯಾನಿಧಿ ಪ್ರಕಾಶನ, ಗದಗ

ಮಾಜಿ ಸಿಂಡಿಕೇಟ್ ಸದಸ್ಯರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಸಂಪಾದಕರು :

**ಡಾ. ಎಸ್. ಬಿ. ಯಾದವಾಡ**

ಸಹಸಂಪಾದಕರು :

**ಡಾ. ಪ್ರಕಾಶ ಕೆ. ಬಡಿಗೇರ**

ಸಂಪಾದಕ ಮಂಡಳಿ

- **ಪ್ರೊ. ಎಸ್.ಎಸ್. ಪಾಟೀಲ**
  ಪ್ರಾಧ್ಯಾಪಕರು, ಶಿಕ್ಷಣ ಅಧ್ಯಯನ ವಿಭಾಗ,
  ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ.
- **ಪ್ರೊ. ಬಿ.ಎಲ್. ಲಕ್ಕಣ್ಣವರ**
  ಪ್ರಾಧ್ಯಾಪಕರು, ಶಿಕ್ಷಣ ಅಧ್ಯಯನ ವಿಭಾಗ,
  ಕ.ರಾ.ಅ.ಮ.ವಿ,ವಿಜಯಪುರ ಮತ್ತು ಕುಲಸಚಿವರು, ಕ.ರಾ.ಗ್ರಾ.ಅ.
  ಮತ್ತು ಪಂ.ರಾ. ವಿಶ್ವವಿದ್ಯಾಲಯ, ಗದಗ.
- **ಪ್ರೊ. ಕೆ.ಎಂ. ಮೇತ್ರಿ**
  ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ಬುಡಕಟ್ಟು ಅಧ್ಯಯನ ವಿಭಾಗ,
  ಕನ್ನಡ ವಿಶ್ವವಿದ್ಯಾಲಯ, ಹಂಪಿ.
- **ಡಾ. ಎನ್. ಲಕ್ಷ್ಮೀ**
  ಸಹ ಪ್ರಾಧ್ಯಾಪಕರು, ಶಿಕ್ಷಣ ಅಧ್ಯಯನ ವಿಭಾಗ,
  ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಮೈಸೂರು.
- **ಡಾ. ಜಗನ್ನಾಥ ಕೆ. ಡಾಂಗೆ**
  ಮುಖ್ಯಸ್ಥರು ಮತ್ತು ಸಹ ಪ್ರಾಧ್ಯಾಪಕರು, ಶಿಕ್ಷಣ ಅಧ್ಯಯನ ವಿಭಾಗ,
  ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ.
- **ಡಾ. ರಾಜಪ್ಪ ದಳವಾಯಿ**
  ಸಹಾಯಕ ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಕೇಂದ್ರ,
  ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.
- **ಡಾ. ಅನಿಲ ವಿ. ಬಮಗೊಂಡ**
  ಸಹಾಯಕ ಪ್ರಾಧ್ಯಾಪಕರು, ಬಿ.ಎಲ್.ಡಿ.ಇ. ಸಂಸ್ಥೆಯ
  ಜೆ.ಎಸ್.ಎಸ್. ಶಿಕ್ಷಣ ಮಹಾವಿದ್ಯಾಲಯ, ವಿಜಯಪುರ.

**Shikshan Soudha**

*A Quarterly Education and Research Journal*

VIDYANIDHI PRAKASHANA® Since:1973

SRI SIVAKUMAR AGENCY®

Station Road, Near Mahendrakar Circle,
GADAG-582 101 Dist. : Gadag
Karnataka State (India)
Phone : 08372-237527, 277527
email : shikshansoudha@gmail.com

The views expressed in the articles side are the individual opinions of the authors and they in no way represent or reflect the opinion of SHIKSHAN SOUDHA nor does SHIKSHAN SOUDHA subscribe to these views in no way. All disputes are subject to the jurisdiction of Gadag court only.

# ಶಿಕ್ಷಣ ಸೌಧ

ಯು.ಜಿ.ಸಿ. ಕೇರ್‌ನ ಮಾನ್ಯತೆ ಪಡೆದಿರುವ ಪತ್ರಿಕೆ

## ಅಂತರಂಗ Inside

### ಸೈದ್ಧಾಂತಿಕ (Articles)

05 ಕೊರೋನ (ಕೋವಿಡ್–19) ಸೋಂಕಿನ ಜೊತೆಗಿನ ಪ್ರಸ್ತುತ ಜನಜೀವನ : ಒಂದು ಅವಲೋಕನ – ಡಾ. ರವಿ ಹೆಚ್.

07 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಗಂಡು–ಹೆಣ್ಣಿನ ಸಂಬಂಧಗಳ ವೈಶಿಷ್ಟ್ಯತೆ – ಡಾ. ನಟರಾಜು ಜೆ.ಆರ್.

09 ಉನ್ನತ ಶಿಕ್ಷಣದಲ್ಲಿ ಪ್ರಾಜೆಕ್ಟ್‌ವರ್ಕ, ದತ್ತಾಂಶಕಾರ್ಯ ಹೇಗಿರಬೇಕು? – ಡಾ. ಬಿ.ಜಿ. ಧಾರವಾಡ

11 ಗುಬ್ಬಿ ತಾಲೂಕು ನವಶೋಧಿತ ಪ್ರಾಗೈತಿಹಾಸಿಕ ಕುರುಹುಗಳು – ಶ್ರೀನಿವಾಸ ಎ.ಜೆ.

15 ಕರ್ನಾಟಕದಲ್ಲಿ ಕನ್ನಡ ಜಾನಪದ ಸಂಶೋಧನೆಯ ಅಧ್ಯಯನದ ಮಾದರಿಗಳು – ಸೋಮಣ್ಣ ಹೊಂಗಳ್ಳಿ

19 ಸ್ಟುವರ್ಟ್ ಹಾಲ್ ಹಾಗೂ ಆತನ ಜೋಡಣೆ ಸಿದ್ಧಾಂತ – ಡಾ. ಜ್ಯೋತಿ ಕೆ.ಬಿ.

20 ಯುವಕರಲ್ಲಿ ದೇಶಭಕ್ತಿ ಬೆಳೆಸುವಲ್ಲಿ ಶಿಕ್ಷಕರ ಪಾತ್ರ – ಡಾ. ಎಸ್.ಎಸ್. ಭೂಮಣ್ಣವರ

21 ಯಲುರಾಜನ ಮಡದಿ : ಮಾನವತಾವಾದಿ ಸ್ತ್ರೀ ದೃಷ್ಟಿಕೋನ – ಲಕ್ಷ್ಮೀಕಾಂತ

23 ಮನುಸ್ಮೃತಿ ಮತ್ತು ಮಹಿಳೆ – ರಮ್ಯ ಕೆ.ಆರ್.

26 ವಿಠಲಾಪುರದ ಬೂದಿ ದಿಬ್ಬ ಶೋಧ – ಗೀತಾ ಪಾಟೀಲ

29 ಮಹಾರಾತ್ರಿ : ಬುದ್ಧನೆಂಬ ಮನುಕುಲದ ಮಹಾಬೆಳಕು – ಮಂಜುನಾಥ ಪಾಟೀಲ

34 ಮಹಿಳಾ ಮೀಸಲಾತಿ ಮತ್ತು ರಾಷ್ಟ್ರಾಭಿವೃದ್ಧಿ – ಡಾ. ಸುಮಂಗಲ ಆರ್.ಕೆ.

### ಸಂಶೋಧನೆಗಳು (Research Articles)

38 ಗೂಗಲ್ ಕ್ಲಾಸ್‌ರೂಮ್ ಕಲಿಕಾ ನಿರ್ವಹಣಾ ವ್ಯವಸ್ಥೆಯಲ್ಲಿ (LMS) ಬೋಧನಾ–ಕಲಿಕಾ ಪ್ರಕ್ರಿಯೆ – ಡಾ. ಪಿ.ಎಸ್. ಹೆಗಡಿ

42 ಬಳ್ಳಾರಿ ಜಿಲ್ಲೆಯ ಬೀದಿ ತರಕಾರಿ ಮಾರಾಟಗಾರರ ಸಾಮಾಜಿಕ–ಆರ್ಥಿಕ ಅಧ್ಯಯನ – ವೀರೇಂದ್ರ ಕುಮಾರ್

### ಶಿಕ್ಷಣ ತಜ್ಞರು (Educationists)

49 ಲಿಯೋ ಟಾಲಸ್ಟಾಯ್ – ಜಯದೇವ ಎಂ. ಮೆಣಸಗಿ

**ಶಿಕ್ಷಣ ಸೌಧ**

# ಸಂಪಾದಕೀಯ

## ತಂತ್ರಜ್ಞಾನ ಆಧಾರಿತ ಬೋಧನೆ – ಕಲಿಕೆ

ಶಿಕ್ಷಣ ವ್ಯವಸ್ಥೆ ಎನ್ನುವುದು ಸಮಾಜದ ಪ್ರಾಮುಖ್ಯವಾದ ಅಂಗ. ಇದರಲ್ಲಿ ಸವಲತ್ತುಗ್ಗಳ ಜೊತೆ ಸಮಸ್ಯೆಗಳು ಉಂಟು. ಅದರಲ್ಲೂ ಈ 'ಕರೋನಾ' ಎಂಬ ಮಹಾಮಾರಿ ಜಗತ್ತಿನಲ್ಲಿ ಹರಡಿರುವ ಸಮಸ್ಯೆ ಹೇಳತೀರದು. ಇದು ಜೀವನದ ಎಲ್ಲ ಆಯಾಮಗಳಿಗೂ ಕುಂದನ್ನು ಉಂಟು ಮಾಡಿದೆ. ಅದರಲ್ಲೂ ಶಿಕ್ಷಣ ಕ್ಷೇತ್ರದಲ್ಲಿ ಇದರ ಪಾತ್ರ ವರ ಮತ್ತು ಶಾಪ ಎರಡೂ ರೀತಿಯಿಂದಲೂ ಪ್ರಭಾವಿಯಾಗಿದೆ. ಕರೋನಾ ಸಂಕಷ್ಟದಲ್ಲಿ ಐಸಿಟಿ ಆಧಾರಿತ ಶಿಕ್ಷಣ ಪ್ರಧಾನವಾಗಿದೆ. ಮೊದಲು ಕೆಲವೇ ಶಿಕ್ಷಣ ಸಂಸ್ಥೆ ಮತ್ತು ಶಿಕ್ಷಕರಿಂದ ಇದನ್ನು ಬಳಸಲಾಗುತ್ತಿತ್ತು, ಆದರೆ ಈಗ ಎಲ್ಲರೂ ಬಳಸಲೇಬೇಕಾದ ಅನಿವಾರ್ಯತೆ ಬಂದೊದಗಿದೆ. ಇದರಿಂದ ಹೊಸ ತಂತ್ರಜ್ಞಾನ ಆಧಾರಿತ ಬೋಧನೆ–ಕಲಿಕೆ ಸಾಧ್ಯವಾಗಿದೆ. ಕೆಲವೊಮ್ಮೆ ಸಮಸ್ಯೆಗಳೂ ಸಹ ಹೊಸದನ್ನು ಕಲಿಯಲು ಪ್ರೇರೇಪಿಸುತ್ತವೆ. ಈ ಪ್ರೇರೇಪಣೆ ಇಂದು ಪ್ರಾಥಮಿಕ ಶಾಲಾ ಶಿಕ್ಷಕರಿಂದ ಹಿಡಿದು ವಿಶ್ವವಿದ್ಯಾಲಯದ ಅಧ್ಯಾಪಕರವರೆಗೆ ಹೊಸ ಕಲಿಕೆಗೆ ನಾಂದಿಯಾಗಿದೆ.

**– ಡಾ. ಎಸ್.ಬಿ. ಯಾದವಾಡ**
ಸಂಪಾದಕರು

ಸೈದ್ಧಾಂತಿಕ

# ಕೊರೋನ (ಕೋವಿಡ್–19) ಸೋಂಕಿನ ಜೊತೆಗಿನ ಪ್ರಸ್ತುತ ಜನಜೀವನ : ಒಂದು ಅವಲೋಕನ

✍ ಡಾ. ರವಿ ಹೆಚ್., ಸಹಾಯಕ ಪ್ರಾಧ್ಯಾಪಕರು, ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ, ಶಿಕಾರಿಪುರ.

**ಭಾ**ರತ ದೇಶದ ಜನತೆ ವಿವಿಧ ಭೌಗೋಳಿಕ ವ್ಯತ್ಯಾಸದೊಂದಿಗೆ ಅನೇಕ ಸಂಸ್ಕೃತಿ, ಭಾಷೆ, ಜನಾಂಗಗಳ ವೈವಿಧ್ಯತೆಯಿಂದ ತಮ್ಮದೇ ಆದ ವೈಭವಯುತ ರೀತಿ–ನೀತಿಯೊಂದಿಗೆ ಜೀವನಶೈಲಿಯನ್ನು ರೂಢಿಸಿಕೊಂಡು ಪ್ರಶಾಂತವಾದ ಬದುಕನ್ನು ಕಟ್ಟಿಕೊಂಡು ಜೀವಿಸುತ್ತಿರುವ ಸಂದರ್ಭದಲ್ಲಿ ಚೀನಾ ದೇಶದ ವೂಹಾನ್ ನಗರದಿಂದ ಪ್ರಪಂಚಕ್ಕೆ ಬಳುವಳಿಯಂಬಂತೆ ಹರಡಿಕೊಂಡ ಕೊರೋನ ಎಂಬ ವೈರಸ್ ಇಡೀ ಗಜತ್ತನ್ನೇ ಮುಷ್ಠಿಯಲ್ಲಿ ಹಿಡಿದುಕೊಂಡು ಮಹಾಮಾರಿಯಾಗಿ ತನ್ನ ಅತಿಕ್ರಮಣವನ್ನು ತೋರಿಬಿಟ್ಟಿದೆ. ಜನರು ಯಾವುದೇ ಆತಂಕದ ಅರಿವಿಲ್ಲದೇ ತಮ್ಮ ಅಗತ್ಯತೆಗೆ ತಕ್ಕಂತೆ ಜೀವನ ನಡೆಸುತ್ತಿರುವಾಗಲೇ ಈ ಮಹಾಮಾರಿ ಸೊಂಕು ವಕ್ಕರಿಸಿಕೊಂಡು ಹಲವರ ಬದುಕನ್ನು ಕಿತ್ತುಕೊಂಡಿದೆ ಮತ್ತು ಅಪಾರ ಸಾವು ನೋವಿಗೆ ಕಾರಣವಾಗಿದೆ ಎಂಬುದು ತುಂಬಾ ಶೋಚನಿಯ ಸಂಗತಿಯಾಗಿದೆ.

## ಇಂತಹ ಶೋಚನೀಯ ಪರಿಸ್ಥಿತಿ ತಂದಿರುವ ವೈರಸ್‌ನ ಪಾತ್ರವಾದರೂ ಏನು ?

ಕೊರೋನಾ ವೈರಸ್ ಎಂದರೆ ಸಾಮಾನ್ಯ ವೈರಸ್‌ಗಳ ಒಂದು ಗುಂಪು. ವೈರಸ್‌ಗಳ ಮೇಲ್ಮೈಯಲ್ಲಿ ಕಿರೀಟದಂತಹ ವಿನ್ಯಾಸವಿರುವ ಕಾರಣದಿಂದಾಗಿ ಹೀಗೆ ಅದಕ್ಕೆ ಹೆಸರಿಸಲಾಗಿದೆ. ಇದು ಒಂದು ಬಗೆಯ ಪ್ರಾಣಹಾನಿಯನ್ನುಂಟು ಮಾಡುವಂತಹ ವೈರಸ್ ಆಗಿದ್ದು, ಇದು ಮನುಷ್ಯ ಸಹಿತ ಸಸ್ತನಿಗಳ ಉಸಿರಾಟದ ವ್ಯವಸ್ಥೆ ಮೇಲೆ ಪರಿಣಾಮ ಬೀರುತ್ತದೆ. ಈ ವೈರಸ್‌ನಿಂದಾಗಿ ಸಾಮಾನ್ಯ ಶೀತ, ನ್ಯುಮೋನಿಯಾ ಮತ್ತು ತೀವ್ರ ರೀತಿಯ ಶ್ವಾಸಕೋಶದ ಸಮಸ್ಯೆ ಕಾಣಿಸಿಕೊಳ್ಳುವುದು ಮತ್ತು ಇದು ಉದರದ ಮೇಲೆಯೂ ಪರಿಣಾಮ ಬೀರುತ್ತದೆಂದು ಹೇಳುತ್ತಾರೆ.

## ಕೊರೋನಾ ವೈರಸ್ ಸೋಂಕು ಎಂದರೇನು?

ಇದು ಸಾಮಾನ್ಯ ಶೀತದಂತಹ ಲಘು ಪ್ರಮಾಣದಿಂದ ಮಧ್ಯಮ ಪ್ರಮಾಣದ ಮೇಲ್ಭಾಗದ ಶ್ವಾಸಕೋಶದ ಸೋಂಕನ್ನು ಉಂಟು ಮಾಡುತ್ತದೆ. ಮನುಷ್ಯರನ್ನು ಕಾಡುವಂತಹ ಕೊರೊನಾ ವೈರಸ್‌ನಲ್ಲಿ ಹಲವು ವಿಧಗಳಿವೆ. ಇದರಲ್ಲಿ ಪ್ರಮುಖವಾಗಿ ಮಾರ್ಸ್ ಮತ್ತು ಸಾರ್ಸ್ ವೈರಸ್ ಸೇರಿವೆ ಎಂದು ಅಧ್ಯಯನಗಳಿಂದ ದೃಢಪಟ್ಟಿದೆ.

## ಕೊರೋನಾ ಸೋಂಕು ಹರಡುವ ಸ್ವರೂಪ

- ಸಾಮಾನ್ಯವಾಗಿ ಕೊರೊನಾ ಸೋಂಕು ಒಬ್ಬ ಮನುಷ್ಯನಿಂದ ಮತ್ತೊಬ್ಬನಿಗೆ ಹಬ್ಬುವುದು.
- ವ್ಯಕ್ತಿಯ ಶೀನು ಮತ್ತು ಕೆಮ್ಮಿನ ಗಾಳಿಯಿಂದ ಹರಡುತ್ತದೆ.
- ತುಂಬಾ ಹತ್ತಿರದ ದೈಹಿಕ ಸಂಪರ್ಕದಿಂದ. ಉದಾಹರಣೆಗೆ ಸ್ಪರ್ಶ ಮತ್ತು ಹಸ್ತಲಾಘವ ಮಾಡುವುದರಿಂದ ಬರುತ್ತದೆ.
- ಸೋಂಕು ಇರುವ ವಸ್ತುವನ್ನು ಮುಟ್ಟಿದ ಬಳಿಕ ಬಾಯಿ, ಮೂಗು ಮತ್ತು ಕಣ್ಣುಗಳನ್ನು ಕೈ ತೊಳೆಯದೆ ಮುಟ್ಟುವುದರಿಂದ ಬರಬಹುದು.

## ಕೊರೋನಾ ಸೋಂಕಿನಿಂದ ಆಗುವ ಅಪಾಯಗಳು

ಇಂತಹವರಿಗೆ ಕೊರೊನಾ ವೈರಸ್ ಬರಬಹುದು ಎಂದು ಹೇಳಲಾಗುವುದಿಲ್ಲ ವಯಸ್ಸಿನ ಮಿತಿಯಿಲ್ಲದೆ ಎಲ್ಲರಿಗೂ ವಕ್ಕರಿಸಿಕೊಳ್ಳುತ್ತದೆ. ಮೇಲಾಗಿ ಸಣ್ಣ ಮಕ್ಕಳಿಗೆ ಮತ್ತು ವೃದ್ಧರಿಗೆ ಇದು ಬಹು ಬೇಗನೆ ಹರಡುವುದೆಂದು ಹೇಳಲಾಗಿದೆ.

## ಕೊರೋನಾ ಸೊಂಕಿನ ಲಕ್ಷಣಗಳು

ಕೊರೊನಾ ವೈರಸ್ ಯಾವ ರೀತಿಯದ್ದು ಮತ್ತು ಸೋಂಕು ಎಷ್ಟು ಗಂಭೀರವಾಗಿದೆ ಎನ್ನುವುದರ ಮೇಲೆ ಇದರ ಲಕ್ಷಣವು ಅವಲಂಬಿಸಿದೆ. ಅಂದರೆ ಶೀತದಂತಹ ಶ್ವಾಸಕೋಶದ ಮೇಲ್ಭಾಗದ ಸೋಂಕಿಗೆ ಒಳಗಾಗಿದ್ದರೆ ಕೆಲವು ಲಕ್ಷಣಗಳೂ ಕಾಣಿಸಿಕೊಳ್ಳುವುದು – ಅವುಗಳೆಂದರೆ, ಮೂಗು ಸೋರುವುದು, ತಲೆನೋವು, ಕೆಮ್ಮು, ಗಂಟಲು ನೋವು, ಜ್ವರ, ಸಂಪೂರ್ಣವಾಗಿ ಅನಾರೋಗ್ಯ ಕಾಡುವುದು ಮುಂತಾದ ಲಕ್ಷಣಗಳಿವೆ ಎಂದು ವೈದ್ಯರು ಹೇಳುತ್ತಾರೆ. ಅಲ್ಲದೆ ಕಫದೊಂದಿಗೆ ಕೆಮ್ಮು, ಉಸಿರು ಕಟ್ಟುವಿಕೆ, ಎದೆ ನೋವು ಅಥವಾ ಕೆಮ್ಮು ಅಥವಾ ಉಸಿರಾಟದ ವೇಳೆ ಬಿಗಿ ಹಿಡಿತ, ಹೃದಯ ಮತ್ತು ಶ್ವಾಸಕೋಶದ ಕಾಯಿಲೆ ಇರುವವರಲ್ಲಿ ಮತ್ತು ದುರ್ಬಲ ಪ್ರತಿರೋಧಕ ವ್ಯವಸ್ಥೆ ಹೊಂದಿರುವಂತಹ ಶಿಶುಗಳು ಮತ್ತು ವಯಸ್ಸಾದವರಲ್ಲಿ ಇದು ಸಾಮಾನ್ಯವಾಗಿರುತ್ತದೆ ಎನ್ನಲಾಗಿದೆ.

## ಕೊರೋನಾ ಸೋಂಕಿನ ಪತ್ತೆ ಮಾಡುವ ವಿಧಾನ

ಕೊರೋನಾ ವೈರಸ್ ಪತ್ತೆ ಮಾಡಲು ವೈದ್ಯರು, ವೈದ್ಯಕೀಯ ಇತಿಹಾಸ ತಿಳಿದವರಿಂದ ದೈಹಿಕ ಪರೀಕ್ಷೆ ಮಾಡುವುದು, ರಕ್ತ ಪರೀಕ್ಷೆ ಮಾಡುವುದು, ಕಫ, ಗಂಟಲಿನ ಸ್ವಾಬ್‌ನ ಮಾದರಿ ಮತ್ತು ಇತರ ಉಸಿರಾಟದ ಪರೀಕ್ಷೆ ಮಾಡುವುದರ ಮೂಲಕ ವೈರಸ್ ಪತ್ತೆ ಮಾಡಲಾಗುತ್ತಿದೆ.

## ಕೊರೋನಾ ಸೋಂಕಿಗೆ ಚಿಕಿತ್ಸೆ / ಲಸಿಕೆಗಳು

ಕೊರೋನಾ ವೈರಸ್ ಸೋಂಕಿಗೆ ಯಾವುದೇ ರೀತಿಯ ನಿರ್ದಿಷ್ಟ ಚಿಕಿತ್ಸೆಗಳಿಲ್ಲ. ಕೆಲವು ಜನರು ಅವರಾಗಿಯೇ ಚೇತರಿಸಿಕೊಳ್ಳುವರು, ಮತ್ತೆ ಕೆಲವರು ಚಿಕಿತ್ಸೆ ಫಲಕಾರಿಯಾಗದೆ ಉಸಿರು ಚೆಲ್ಲುವರು. ಆದರೆ ಇದರ ಲಕ್ಷಣಗಳನ್ನು ಕಡಿಮೆ ಮಾಡಲು ಮತ್ತು ಸಂಪೂರ್ಣ ಗುಣಪಡಿಸಲು ವೈದ್ಯಕೀಯ ಕ್ಷೇತ್ರದಲ್ಲಿ ಸಾಕಷ್ಟು ಆವಿಷ್ಕಾರಗಳು ಹಾಗೂ ಪ್ರಯತ್ನಗಳು ನಡೆಯುತ್ತಿವೆ.

- ನೋವು, ಜ್ವರ ಮತ್ತು ಕೆಮ್ಮಿಗೆ ವೈದ್ಯರ ಸಲಹೆಯಂತೆ ಔಷಧಿ ಮತ್ತು ಮಾತ್ರೆಗಳನ್ನು ತೆಗೆದುಕೊಳ್ಳುವುದು ಉತ್ತಮ.
- ಕೆಮ್ಮು ಮತ್ತು ಗಂಟಲು ನೋವು ಕಡಿಮೆ ಮಾಡಲು ಬಿಸಿ ನೀರನ್ನು ಕುಡಿಯುವುದು ಮತ್ತು ಸ್ನಾನ ಮಾಡುವುದು ಒಳ್ಳೆಯದು.
- ಸಾಕಷ್ಟು ವಿಶ್ರಾಂತಿ ಪಡೆಯಬೇಕು ಮತ್ತು ನೀರಿನಾಂಶ ಪದಾರ್ಥಗಳನ್ನು ಹೆಚ್ಚು ಸೇವಿಸುವುದು.
- ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸಿಕೊಳ್ಳಬಹುದಾದ ಆಹಾರ ಮತ್ತು ಪಾನೀಯ ಸೇವನೆ ಮಾಡುವುದರೊಂದಿಗೆ ಸೋಂಕಿನಿಂದ

ISSN : 2249-2429

RNI REG.NO.KARKAN/2011/38712

ರಕ್ಷಣೆ ಪಡೆಯಬಹುದೆಂದು ಸರ್ಕಾರಗಳಿಂದ ಮತ್ತು ಇತರ ಸಂಸ್ಥೆಗಳಿಂದ ಸಾಕಷ್ಟು ಜಾಹಿರಾತುಗಳ ಮೂಲಕ ಜನರಲ್ಲಿ ಜಾಗೃತಿ ಮೂಡಿಸುವ ಪ್ರಯತ್ನ ಮಾಡಲಾಗುತ್ತಿದೆ.

## ಕೊರೋನಾ ಸೋಂಕಿನಿಂದ ನಮಗೆ ನಾವು ಕಾಪಾಡಿಕೊಳ್ಳುವ ವಿಧಾನ

ಮನುಕುಲಕ್ಕೆ ಕಾಡುವ ಈ ಮಹಾಮಾರಿ ಕೊರೊನಾ ಸೋಂಕಿಗೆ ಯಾವುದೇ ರೀತಿಯ ಔಷಧಿಯಿಲ್ಲ. ಔಷಧಿಗಾಗಿ ಜಗತ್ತಿನಾದ್ಯಂತ ಅನೇಕ ಕಂಪನಿಗಳು ಲಸಿಕೆ ಕಂಡುಹಿಡಿಯುವ ಪ್ರಯತ್ನ ಮಾಡಲಾಗುತ್ತಿದೆ. ಆದರೆ ಇದು ಹರಡದಂತೆ ತಡೆಯುವ ಮೂಲಕ ಅಪಾಯವನ್ನು ಕಡಿಮೆ ಮಾಡಲು ಕೆಲವು ಸಲಹೆಗಳನ್ನು ನೀಡಲಾಗುತ್ತಿದೆ.

- ಸಾಬೂನು ಮತ್ತು ನೀರು ಹಾಕಿ 20 ಸೆಕೆಂಡು ಕಾಲ ಕೈ ತೊಳೆಯುವುದು.
- ಕೈ ತೊಳೆಯದೆ ಮುಖ, ಮೂಗು ಮತ್ತು ಬಾಯಿಯನ್ನು ಮುಟ್ಟದೇ ಇರುವುದು.
- ಅಗತ್ಯದಲ್ಲಿ ಸ್ಯಾನಿಟೈಜರ್ ಬಳಸುವುದು.
- ಅನಾರೋಗ್ಯದಲ್ಲಿರುವ ಜನರೊಂದಿಗೆ ಹತ್ತಿರದ ಸಂಪರ್ಕವಿಟ್ಟುಕೊಳ್ಳದಿರುವುದು.
- ಪದೇ ಪದೇ ಮುಟ್ಟುತ್ತಲಿರುವ ಜಾಗವನ್ನು ಆಗಾಗ ಚೆನ್ನಾಗಿ ಸ್ವಚ್ಛ ಮಾಡಿಟ್ಟುಕೊಳ್ಳುವುದು.
- ಕೆಮ್ಮು ಮತ್ತು ಶೀನು ಬಂದ ವೇಳೆ ಟಿಶ್ಯೂ ಇಲ್ಲವೆ ವಸ್ತ್ರ ಅಡ್ಡ ಹಿಡಿಯುವುದು. ಇದರ ಬಳಿಕ ಟಿಶ್ಯೂ ಎಲ್ಲೆಂದರಲ್ಲಿ ಬಿಸಾಡದೇ ಮುಚ್ಚಿದ ಡಬ್ಬಿಯಲ್ಲಿ ಬಿಸಾಕಿ, ಕೈಗಳನ್ನು ತೊಳೆಯುವುದು. ಕೈ ವಸ್ತ್ರವನ್ನು ಸಾಬೂನಿನಿಂದ ತೊಳೆದು ಬಿಸಿಲಿನಲ್ಲಿ ಒಣಗಿಸಿ ಬಳಸುವುದು.
- ಅನಾರೋಗ್ಯವಿದ್ದರೆ ಮನೆಯಲ್ಲೇ ಉಳಿಯುವುದು.
- ದೈಹಿಕ ಅಂತರ ಮತ್ತು ಅಗತ್ಯದಲ್ಲಿ ಸಾಮಾಜಿಕ ಅಂತರವನ್ನು ಕಾಪಾಡಿಕೊಂಡು ದೈನಂದಿನ ವ್ಯವಹಾರ ನಡೆಸುವುದು.
- ಮನೆಯಲ್ಲಿಯೇ ತಯಾರಿಸಿಕೊಂಡ ಮುಖ ಕವಚದಿಂದ ಬಾಯಿ ಮತ್ತು ಮೂಗನ್ನು ಸುರಕ್ಷಿತವಾಗಿ ಮುಚ್ಚಿಕೊಳ್ಳುವುದು ಹಾಗೂ ಆ ಮುಖ ಕವಚವನ್ನು ಆಗಾಗ ಸಾಬೂನಿನಿಂದ ತೊಳೆದು ಬಿಸಿಲಿನಲ್ಲಿ ಒಣಗಿಸಿ ಬಳಸುವುದು.(ಮುಖ ಕವಚವನ್ನು ನಿರಂತರವಾಗಿ ಬಳಸುವುದು ಅನೇಕ ತೊಂದರೆಗಳನ್ನುಂಟು ಮಾಡುತ್ತದೆ ಎಂದು ಹೇಳಲಾಗುತ್ತಿದೆ.)
- ಅನಗತ್ಯವಾಗಿ ಮನೆಗಳಿಂದ ಹೊರ ಹೋಗದಿರುವುದರಿಂದ ನಮ್ಮ ನಮ್ಮ ರಕ್ಷಣೆ ಮತ್ತು ಸುರಕ್ಷತೆಯನ್ನು ಮಾಡಿಕೊಳ್ಳಬಹುದಾಗಿದೆ.

## ಕರೋನ ಸೋಂಕನ್ನು ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳು

ಭಾರತದಲ್ಲಿ ಕರೋನಾ ವೈರಸ್ ಕಾಣಿಸಿಕೊಂಡಾಗಿನಿಂದ ಅಂದರೆ ಮಾರ್ಚ್ ತಿಂಗಳ ಮೊದಲ ವಾರದಿಂದ ಅನೇಕ ಐಟಿ ಕಂಪನಿಗಳ ಸಿಬ್ಬಂದಿಯವರಿಗೆ ಮನೆಯಿಂದಲೇ ತಮ್ಮ ಕಾರ್ಯ ನಿರ್ವಹಿಸಲು ಅನುವುಮಾಡಿಕೊಟ್ಟು ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳಲು ಬುನಾದಿ ಹಾಕಿತು. ನಂತರ ಮಾನ್ಯ ಪ್ರಧಾನಮಂತ್ರಿಗಳ ಆದೇಶದೊಂದಿಗೆ ಈ ವೈರಸ್‌ನಿಂದ ಮುಂದಾಗಬಹುದಾದ ಪರಿಣಾಮಗಳನ್ನು ಎದುರಿಸಲು ಲಾಕ್‌ಡೌನ್ ಅಸ್ತ್ರವನ್ನು ಪ್ರಯೋಗಿಸಿ ಶಾಲಾ ಕಾಲೇಜುಗಳಿಗೆ ರಜೆ ನೀಡುವುದರೊಂದಿಗೆ ಭಾರಿ ಅನಾಹುತಕ್ಕೆ ತಡೆಹಾಕಲಾಯಿತು. ಅಲ್ಲದೇ ಸಾರಿಗೆ ವ್ಯವಸ್ಥೆಯನ್ನು ಸ್ಥಗಿತಗೊಳಿಸಿ ಪ್ರದೇಶದಿಂದ ಪ್ರದೇಶಗಳಿಗೆ (ದೇಶದಿಂದ ವಿದೇಶಕ್ಕೆ – ವಿದೇಶದಿಂದ ದೇಶಕ್ಕೆ, ರಾಜ್ಯದಿಂದ ರಾಜ್ಯಕ್ಕೆ ಜಿಲ್ಲೆಗಳ ನಡುವಿನ ಸಂಚಾರ ಮತ್ತು ಸ್ಥಳೀಯ ಸಂಚಾರದಿಂದ) ಹರಡಬಹುದಾದ ಸೋಂಕಿಗೆ ಕಡಿವಾಣ ಹಾಕುವ ಪ್ರಯತ್ನ ಮಾಡಲಾಯಿತು. ಇದು ಸಹಜವಾಗಿದ್ದ ಜನಜೀವನದ ಮೇಲೆ ಅಪಾರವಾದ ಪರಿಣಾಮ ಬೀರಿದ್ದಂತೂ ಸತ್ಯ, ಅದನ್ನು ಸರಿದೂಗಿಸಲು ಸಾಕಷ್ಟು ವರ್ಷಗಳೇ ಬೇಕಾಗಬಹುದು.

ಈ ಸೊಂಕು ನಮ್ಮ ದೇಶದಲ್ಲಿ ಮೊದಲು ಕೇರಳ ರಾಜ್ಯದಲ್ಲಿ ಕಂಡು ಬಂದಿತು, ಅಲ್ಲದೆ ಕರ್ನಾಟಕ ರಾಜ್ಯದ ಕಲ್ಬುರ್ಗಿಯಲ್ಲಿ ಮೊದಲ ಜೀವವನ್ನು ತೆಗೆಯುವುದರೊಂದಿಗೆ ತನ್ನ ಪ್ರಾಬಲ್ಯಕ್ಕೆ ಅಡಿಪಾಯ ಹಾಕಿ ಲಕ್ಷಾಂತರ ಜನಸಮೂಹವನ್ನು ಆವರಿಸಿಕೊಂಡು ಸಾವಿರಾರು ಜನರ ಪ್ರಾಣವನ್ನು ನುಂಗಿ ಹಾಕಿದ್ದಲ್ಲದೆ ಪ್ರತಿದಿನ ಜನರು ಭಯದ ವಾತಾವರಣದಲ್ಲಿ ಕಾಲ ಕಳೆಯುವಂತೆ ಮಾಡಿದೆ.

24–07–2020ರ ಅಂಕಿಅಂಶಗಳ ಪ್ರಕಾರ ಕೊರೋನ ಸೊಂಕಿತರು, ಅದರಿಂದ ಗುಣಮುಖರಾದವರು ಮತ್ತು ಸೊಂಕಿಗೆ ಬಲಿಯಾದವರ ಪ್ರಮಾಣವನ್ನು ಈ ಕೆಳಗಿನ ಕೋಷ್ಟಕದಿಂದ ತಿಳಿಯಬಹುದು.

| | ಸೋಂಕಿತರು | ಚೇತರಿಸಿಕೊಂಡವರು | ಸಾವಿಗೀಡಾದವರು |
|---|---|---|---|
| ಭಾರತದಲ್ಲಿ | 1287945 | 817209 | 30601 |
| ಕರ್ನಾಟಕದಲ್ಲಿ | 80863 | 29310 | 1616 |

(ಮಾಹಿತಿ: ಆರೋಗ್ಯ ಸೇತು ಆಪ್)

ಈ ಅಂಕಿ ಸಂಖ್ಯೆಗಳು ದಿನೇದಿನೆ ಏರಿಕೆಯಾಗುತ್ತಿದೆಯೇ ವಿನಹ, ಅದು ಯಾವಾಗ ಇಳಿಕೆಯಾಗುವುದೋ ? ಗೊತ್ತಿಲ್ಲ.

## ಸೋಂಕು ಹರಡುವಿಕೆಯಿಂದ ಜನಜೀವನದಲ್ಲಾದ ವ್ಯತ್ಯಾಸಗಳು

ಮಾರ್ಚ್ ಮತ್ತು ಏಪ್ರಿಲ್ ತಿಂಗಳಿನಲ್ಲಿ ದೇಶದ ಬೆನ್ನೆಲುಬಾದ ರೈತರು ಬೆಳೆದ ಬೆಳೆಗಳಿಗೆ ಸರಿಯಾದ ಸಾರಿಗೆ ವ್ಯವಸ್ಥೆ ಮತ್ತು ಮಾರುಕಟ್ಟೆ ಸಿಗದೇ ಕಟಾವಿಗೆ ಬಂದ ಬೆಳೆಯನ್ನು ನಾಶಪಡಿಸಿ ಅಪಾರ ನಷ್ಟವನ್ನು ಅನುಭವಿಸುವಂತಾಯಿತು. ಕೂಲಿ ಕಾರ್ಮಿಕರು, ಕಟ್ಟಡ ಕಾರ್ಮಿಕರಿಗೆ ಕೆಲಸವಿಲ್ಲದೇ ಹಸಿವಿನಿಂದ ಪರದಾಡುವಂತಾಯಿತು. ಅನಾರೋಗ್ಯ ಪೀಡಿತರಿಗೆ ಸರಿಯಾದ ಸಮಯದಲ್ಲಿ ಅಗತ್ಯದ ಚಿಕಿತ್ಸೆ ಮತ್ತು ಔಷಧಿ ಸಿಗದೆ ಕಷ್ಟಪಡುವಂತಾಯಿತು. ಬಾಡಿಗೆ ವಾಹನಗಳನ್ನು ಚಲಾಯಿಸಿ ಜೀವನ ನಿರ್ವಹಿಸುವ ವರ್ಗವಂತೂ ಪಟ್ಟ ಕಷ್ಟ ಅಷ್ಟಿಷ್ಟಲ್ಲ. ಸಣ್ಣ ಪುಟ್ಟ ವ್ಯಾಪಾರಿಗಳು ಮತ್ತು ಬೀದಿ ವ್ಯಾಪಾರವನ್ನು ನಂಬಿಕೊಂಡ ಅನೇಕ ಕುಟುಂಬಗಳು ಏಕಾಏಕಿ ಈ ವೈರಸ್‌ನ ಪರಿಣಾಮದಿಂದ ಸಾಕಷ್ಟು ನೋವನ್ನು ನಿಭಾಯಿಸಬೇಕಾಯಿತು. ಯಾವುದೇ ವ್ಯಾಪಾರ ವಹಿವಾಟುಗಳಿಲ್ಲದೇ ದೇಶ ಮತ್ತು ರಾಜ್ಯಗಳ ಆದಾಯದ ಮೇಲೆ ಬರಿ ಬಿದ್ದಂತಾಯಿತು. ಆ ಕಾರಣದಿಂದ ಸಾಕಷ್ಟು ಆರ್ಥಿಕ ಮುಗ್ಗಟ್ಟು ಮತ್ತು ಕುಸಿತದ ನಡುವೆಯೂ ಸರ್ಕಾರಗಳು ಜನಸಾಮಾನ್ಯರ ಜೀವ ಮತ್ತು ಜೀವನವನ್ನು ಸುಧಾರಿಸುವ ನಿಟ್ಟಿನಲ್ಲಿ ನಿರಂತರ ಹಲವಾರು ಯೋಜನೆಗಳ ಮೂಲಕ ಲಕ್ಷಾಂತರ ಕೋಟಿ ರೂಪಾಯಿಗಳನ್ನು ವ್ಯಯಮಾಡಿ ಸಹಾಯಹಸ್ತ ಚಾಚಿರುವುದು ಸ್ಮರಣೀಯ.

ಇನ್ನೂ ಶೈಕ್ಷಣಿಕವಾಗಿ ಶಾಲಾ ಕಾಲೇಜುಗಳು ತೆರೆಯದೇ ಇದ್ದುದ್ದರಿಂದ ಶೈಕ್ಷಣಿಕ ವರ್ಷದ ಮುಕ್ತಾಯ ಮತ್ತು ಪ್ರಾರಂಭಗಳ ಗೊಂದಲವುಂಟಾಗಿ ವಿದ್ಯಾರ್ಥಿಗಳು ಮನೆಯಲ್ಲಿಯೇ ಕಾಲ ಕಳೆಯುವಂತಾಗಿದೆ. ಹೊಸ ದಾಖಲಾತಿ, ತರಗತಿಗಳ ಪ್ರಾರಂಭ ಅಲ್ಲದೆ ಆನ್‌ಲೈನ್ ತರಗತಿಗಳು ನಿರ್ವಹಿಸುವ ಕುರಿತು ಹಲವಾರು ಚರ್ಚೆಗಳು ನಡೆದು ಸರಿಯಾದ ನಿರ್ಧಾರಕ್ಕೆ ಬರಲು ಸಾಧ್ಯವಾಗುತ್ತಿಲ್ಲ. ಭಾರತವು ಹೇಳಿ ಕೇಳಿ ಹಳ್ಳಿಗಳ ದೇಶ, ಅನೇಕ ಗ್ರಾಮಾಂತರ ಪ್ರದೇಶಗಳಲ್ಲಿ ಆನ್‌ಲೈನ್

– 10ನೇ ಪುಟಕ್ಕೆ ಮುಂದುವರೆದುದು

ಸೈದ್ಧಾಂತಿಕ

# 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಗಂಡು-ಹೆಣ್ಣಿನ ಸಂಬಂಧಗಳ ವೈಶಿಷ್ಟ್ಯತೆ

✍ **ಡಾ. ನಟರಾಜು ಜೆ. ಆರ್.,** ಅಧ್ಯಾಪಕರು, ಕನ್ನಡ ವಿಭಾಗ, ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.

**ಗಂ**ಡು ಹೆಣ್ಣಿನ ಸಂಬಂಧ ಎಂದ ತಕ್ಷಣವೇ ನಮ್ಮೆಲ್ಲರ ತಲೆಯೊಳಗೊ ಒಂದು ಅದರ್ಶ ಚಿತ್ರಣ ಬೇಕಿದ್ದೋ ಬೇಡದೆಯೋ ಕುಳಿತು ಬಿಡುತ್ತದೆ. ಕುವೆಂಪು ಬದುಕಿನುದ್ದಕ್ಕೂ ಧ್ಯಾನಿಸಿದ ಹಲವು ಸಂಗತಿಗಳಲ್ಲಿ, ಈ ಗಂಡು ಹೆಣ್ಣು ಸಂಬಂಧಗಳ ಇಕ್ಕಟ್ಟು ಮತ್ತು ಬಿಕ್ಕಟ್ಟುಗಳು ಬಹಳ ಪ್ರಧಾನವಾಗಿ ಕಂಡು ಬರುತ್ತದೆ.ಇವರ ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿ ಮುಖ್ಯವಾಗಿ ಗಂಡು ಹೆಣ್ಣಿನ ಪ್ರೀತಿ, ಪ್ರೇಮದ ಸಂಬಂಧಗಳ ಹಿನ್ನೆಲೆಯನ್ನು ಗಮನಿಸಬಹುದು.

ಅಕ್ಕಮಹಾದೇವಿ ಕಾಯಾದ ನುಂಪನೊಬ್ಬ ಬಯಸಿದರೆ ಅವನಿಗೆ ಮಾಂಸದ ಬೆಲೆ ಮಾಡಿ ಕೊಡುವೆನು ಎನ್ನುತ್ತಾಳೆ. ಆದರೆ ಎನ್ನ ಪ್ರಾಣದೊಡೆಯಂಗೆ ಎನ್ನ ಹೃದಯವ ಸೂರೆಗೊಡುವೆನು ಎಂದೂ ಹೇಳುತ್ತಾಳೆ. ಪುರುಷನನ್ನು ಪುರುಷ ರತ್ನಾ ಎಂದವಳು ಇವಳೆ, ಸಾವ ಕೆಡುವ ಗಂಡರನ್ನೊಯ್ದು ಒಲೆಯೊಳಗಿಕ್ಕ ಎಂದವಳೂ ಇವಳೇ, ಇವೆಲ್ಲವೂ ಒಂದು ಖಚಿತದ ರೂಪುಗೊಂಡ ಮಾತುಗಳೆ ಆಗಿವೆ. ಆ ನಿಲುವುಗಳು ಗಂಡು-ಹೆಣ್ಣಿನ ಸಂಬಂಧವನ್ನು ತಿಳಿಯುವ ಪ್ರಕ್ರಿಯೆಯೆ ಬೆಳಕಿನಂತೆ ಒದಗಿ ಬರುತ್ತವೆ. ಈ ನಿಲುವುಗಳು ಕುವೆಂಪು ಕಥನಗಳನ್ನು ನೋಡುವ ನೋಟವೊಂದನ್ನು ಒದಗಿಸುತ್ತವೆ. ಸಂಸ್ಕೃತ ಕಾವ್ಯ ಮೀಮಾಂಸೆಯ 'ಅವಿಚಾರತೆ ರಮಣೀಯ' ಮತ್ತು 'ವಿಚಾರಿತ ಸುಂದರವನ್ನು ಕೆ. ವಿ. ನಾರಾಯಣ ಅವರು ಕುವೆಂಪು ವೈಚಾರಿಕತೆಯ ಕುರಿತ ಲೇಖನದಲ್ಲಿ ನೆನಪಿಸುತ್ತಾರೆ. ಅವಿಚಾರಿತ ರಮಣೀಯ ಲೋಕದೊಳಗಿಂದ ಹೊಮ್ಮಿದ ಕುವೆಂಪು ಅವರನ್ನು ಎದುರುಗೊಳ್ಳುವುದು ಹೇಗೆ ಎಂಬುದನ್ನು ಗಂಬೀರವಾಗಿ ಚಿಂತಿಸುತ್ತಾ ಹೋದುದರ ಫಲವಾಗಿ ವಿಚಾರಿತ ಸುಂದರ ಹೂವಯ್ಯ ಉದಿಸುತ್ತಾನೆ. ಹೆಣ್ಣು ಗಂಡಿನ ಸಾಂಗತ್ಯದ ಬಿರುಕಗಳನ್ನೆಲ್ಲ ಸೀತೆ-ಹೂವಯ್ಯರು ಮನಸ್ಸು ದೇಹಗಳನ್ನು ಬೇರೆ ಮಾಡಿ ರೂಪಿಸಿಕೊಂಡ ಆದರ್ಶೀಕೃತ ಪಾತಳಿಯಲ್ಲಿ ಸಮಾಧಿ ಮಾಡಿ ಗೆದ್ದುಕೊಳ್ಳಬಲ್ಲರು ಎಂದು ನಂಬಿದ ಕುವೆಂಪು ಮಲೆಗಳಲ್ಲಿ ಮದುಮಗಳು ಕಾದಂಬರಿಯನ್ನು ಬರೆದ ಹೊತ್ತಿಗೆ ಅದನ್ನು ಪುನರ್ ಪರೀಶಿಲಿಸಲು ತೊಡುಗುತ್ತಾರೆ. ಆಗ ಅವರಿಗೆ ಆ ಅವಿಚಾರಿತ ರಮಣೀಯ ಲೋಕದೊಳಗೆ ಹರಿಯುತ್ತಿರುವ ತಿಳಿಜಲದಧಾರೆ ಗೋಚರಿಸುತ್ತದೆ. ಅಂದರೆ ಅದೇ ಲೋಕದೊಳಗೆ ಅದೇ ಲೋಕದ ಬಿರುಕುಗಳನ್ನು ಮೀರಿದ ಆದರೆ ನಮ್ಮ ಕಣ್ಣು ಕಾಣದಿದ್ದ ಸಂಗತಿಗಳು ಕಾಣತೋಡಗುತ್ತವೆ.

ಈ ಕಾರಣಕ್ಕೆ ಇಲ್ಲಿ ಯಾವುದೂ ಮುಖ್ಯವಲ್ಲ ಯಾವುದು ಅಮುಖ್ಯವಲ್ಲ ನೀರೆಲ್ಲವೂ ತೀರ್ಥ ಎಂಬ ಹೊಳಹು ತಿಳಿಹು ಆಗಿ ಎದುರು ನಿಲ್ಲುತ್ತದೆ. ಇದರ ಪರಿಣಾಮವೇ ನಾನು ನಿನಗೆ ಏನನ್ನೋ ಹೇಳುತ್ತೇನೆ ಎಂಬುದು ಬದಿಗೆ ಸರಿದು ನಾವೆಲ್ಲರೂ ನಮಗಾಗಿ ಏನನ್ನೊ ಹೇಳಿಕೊಳ್ಳೋಣ ಎಂಬ ನಡೆ ಶುರುವಾಗುತ್ತದೆ. ಮಲೆಗಳಲ್ಲಿ ಮದುಮಗಳು ಕಾದಂಬರಿಯೊದ್ದಕ್ಕೂ ಹೆಣ್ಣು-ಗಂಡುಗಳ ನಡುವಿನ ದೈಹಿಕ ವ್ಯಾಪಾರಗಳ ವಿವರಗಳು ಯಾವ ಕೊಂಕು ಕೊಸರು ಇಲ್ಲದೆ ತೆರೆಯುತ್ತಾ ಹೋಗುತ್ತದೆ. ಹೀಗೆ ತೆರೆಯುವುದರ ಹಿಂದೆ ಹೆಣ್ಣು ಗಂಡು ಸಂಬಂಧಗಳನ್ನು ನಿರ್ಧರಿಸುತ್ತಿರುವ ಸಂಗತಿಗಳು ಯಾವುವು ಎಂಬುದನ್ನು ಅರಿಯುವ ಕೂತಹಲದ ಕಣ್ಣುಗಳೆ ಅದು ಮನೋ ವ್ಯಾಪಾರವೇ ? ದೇಹ ವ್ಯಾಪಾರವೇ? ಅಥವಾ ಇವೆರಡೂ ಬೇರೆ ಬೇರೆಯದೆ ಎಂದು ಯೋಚಿಸುತ್ತ ಹೋದಂತೆ ದೇಹವು ಮನಸ್ಸು ಆವರಿಸಿಕೊಳ್ಳುವ ಪರಿಯಿಂದ ಬಿಡುಗಡೆ ಹೊಂದುತ್ತದೆ.

ಶ್ರೇಷ್ಠ ಸಂಗತಿಯೇ ಇದನ್ನು ಯಾರ್‍ಯಾರು ಹೇಗೆಗೆ ಎದುರುಗೊಳ್ಳು ತ್ತಾರೆ ? ಈ ಚೌಕಟ್ಟುಗಳನ್ನೆಲ್ಲಾ ಯಾರು ಯಾಕೆ ಹಾಕುತ್ತಾರೆ? ಚೌಕಟ್ಟುಗಳನ್ನು ಶಿರಸಾವಹಿಸಿ ಪಾಲಿಸಿಕೊಂಡು ಜನರು ಸದಾ ವ್ಯವಹಾರಿಸುತ್ತಾರೆಯೇ ? ಎಂಬೆಲ್ಲಾ ಪ್ರಶ್ನೆಗಳು ಇಲ್ಲಿದೆ. ಆದರೆ ಈ ಕಾದಂಬರಿಯಲ್ಲಿ ಸ್ಪಷ್ಟವಾಗುವ ಒಂದು ನಿಲುವು ಏನೆಂದರೆ ದೇಹ ಮನಸ್ಸುಗಳ ಬೇಸುಗೆಯೇ ಒಂದು ಘನತರ ಸಾಧನೆ. ಈ ಘನತರ ಸಾಧನೆಗಾಗಿ ದೈಹಿಕ ಒಡನಾಟದ ಅನುಭವಗಳನ್ನು ನಿರಾಕರಿಸಬೇಕಿಲ್ಲ ಎಂಬುದು ಅದಕ್ಕಾಗಿ ಎಲ್ಲಾ ಚೌಕಟ್ಟುಗಳನ್ನು ದಾಟಿ ನೋಡುವ ಮಹತ್ತು ಮಲೆಗಳಲ್ಲಿ ಮದುವೆಗಳು ಕಾದಂಬರಿಯಲ್ಲಿದೆ. ಇವರು ಇಲ್ಲಿ ಹೆಣ್ಣು ಗಂಡಿನ ಸಂಬಂಧ ಎಂಬುದು ಸಹ ಜೀವನದ ಸಹಭಾಗಿತ್ವ, ಸಮನ್ವಯ, ಸಮ್ಮಿಲನ ಮತ್ತು ಆ ಮೂಲಕ ಒಂದು ಪೂರ್ಣದೃಷ್ಟಿ. ಹೆಣ್ಣು ಗಂಡನನ್ನು ಅನುಸರಿಸುವ ಸಹವರ್ತಿ ಎಂಬ ನೆಲೆಯನ್ನು ದಾಟುವ ಕುವೆಂಪು ಇದನ್ನೆಲ್ಲಾ ಕಾದಂಬರಿಯ ನೆಲೆಯಲ್ಲಿ ಕಂಡುಕೊಳ್ಳುತ್ತಾ ಹೋಗುತ್ತಾರೆ. ಕಾದಂಬರಿಯಲ್ಲಿ ಹೆಣ್ಣು ಗಂಡಗಳ ಮನೋ ನೆಲೆ ವಿಸ್ತರಿಸಿದಂತೆಲ್ಲಾ ಅವರ ಅನುಭವದ ಅನುಭೂತಿಯಲ್ಲಿ ವ್ಯತ್ಯಾಸವಾಗುತ್ತಾ ಹೋಗುವುದನ್ನು ಹೇಳುತ್ತದೆ.

ಕಾದಂಬರಿಯ ಓದುಗರಿಗೆ ತಿಮ್ಮಪ್ಪ ಹೆಗ್ಗಡೆಯನ್ನು ಪೂರ್ತಿ ಪರಿಚಯಿಸುವ ಪೂರ್ವದಲ್ಲಿ ಕಾದಂಬರಿಕಾರರು ತರುವ ಹಂದಿದೊಡ್ಡಿಯ ವರ್ಣನೆಯನ್ನು ಈ ಹಿನ್ನೆಲೆಯಲ್ಲಿ ಗಮನಿಸಬೇಕು.ಅಲ್ಲಿನ ಪ್ರಾಯದ ಸಲಗದ ವರ್ತನೆಯು ತಿಮ್ಮಪ್ಪ ಹೆಗ್ಗಡೆಯ ವ್ಯಕ್ತಿತ್ವವೂ ಒಂದರೊಡನೊಂದು ಬೆರೆತು ಹೋಗುತ್ತದೆ. ಪಶುತನ ಮನುಷ್ಯರಲ್ಲಿಲ್ಲವೆಂದಲ್ಲ ಎಂಬುದಕ್ಕೆ ಅವನ ವರ್ತನೆಗಳು ನಿದರ್ಶನಗಳಾಗುತ್ತವೆ. ಇದರಲ್ಲೊಂದು ಹೊರಟು ಮುಗ್ದ ತನವು ಇರುವಂತಿದೆ.

ಇಲ್ಲಿ ಅವನ ಸಮಸ್ಯೆ ಏನೆಂದರೆ ಹಂದಿಗಳಿಗೆ ಸಾಮಾಜಿಕತೆ ಎಂಬುವುದಿಲ್ಲ; ತಿಮ್ಮಪ್ಪನಿಗೆ ಅದಿದೆ. ಹೀಗಾಗಿ ಅವನೊಂದು ಮದುವೆಯಾಗಬೇಕಾಗಿದೆ. ಆದರೆ ಅವನನ್ನು ಮದುವೆಯಾಗುವವಳು ಸಿಗುವುದಕ್ಕೆ ತೊಡಕಿದೆ. ಈಗಿದ್ದು ಕೊನೆಯಲ್ಲಿ ಅವನನ್ನು ಮೆಚ್ಚಿಸುವ ಹಂತ ತಲುಪುವ ಲಕ್ಕಮ್ಮನನ್ನು ಗಮನಿಸಿದರೆ ಆಕೆಯ ಬಗ್ಗೆ ಮರಕು ಎನಿಸಿದರೂ ದೈಹಿಕ ಹೊಟ್ಟೆ ಮತ್ತು ಕಾಮಗಳೆಂಬ ಹಸಿವುಗಾಳಚೆಗೆ ಯೋಚಿಸುವ ಮನೋನೆಲೆಯನ್ನು ಆತ ತಲುಪಿಲ್ಲವಾದ್ದರಿಂದ ಅವರಿಗೆ ಅದೊಂದು ಮಹತ್ ಸಮಸ್ಯೆ ಆಗಿರಲಿಲ್ಲ ಎಂಬ ಸೂಚನೆಯನ್ನು ಕಾದಂಬರಿಯ ಮೂಲಕ ಗ್ರಹಿಸಬಹುದಾಗಿದೆ.

ಕಾದಂಬರಿಯಲ್ಲಿ ಬರುವ ವೆಂಕಟಣ್ಣನ ಮಗಳು ಚಿನ್ನಮ್ಮ ಸಿಂಭಾವಿ ಭರಮೈ ಹೆಗ್ಗಡೆಯವರನ್ನು ವಿವಾಹವಾಗಲು ತಯಾರಿರುವುದಿಲ್ಲ. ಏಕೆಂದರೆ ಅವಳು ಮುಕಂದಯ್ಯನನ್ನು ತನ್ನ ಬಾಳಸಂಗಾತಿಯಾಗಿ ಸ್ವೀಕರಿಸಬೇಕೆಂಬ ಮಹದಾಸೆಯಿಂದ ಸಿಂಭಾವಿ ಹೆಗ್ಗಡೆಯವರ ಜೊತೆ ವಿವಾಹವನ್ನು ನಿರಾಕರಿಸುತ್ತಾಳೆ.

ಅವಳ ಮನಸ್ಸು ಬರಿ ಸ್ಥಿರಜೀವನವನ್ನು ಬಯಸುವುದಿಲ್ಲ ಬದಲಿಗೆ ಸಹಜೀವನವನ್ನು ಬಯಸಿರುತ್ತದೆ.

ಮುಕಂದಯ್ಯನನ್ನು ವರಿಸಲು ಸಾಧ್ಯವಾಗದಿದ್ದಾಗ ಆಕೆ ಸಿಂಭಾವಿ ಹೆಗ್ಗಡೆಯನ್ನು ಮದುವೆಯಾಗಬೇಕೆಂದರೆ ಅವಳು ಸಾವಿಗೂ ತಯಾರು.

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಆದರೆ ಅದೇ ಸಿಂಬಾವಿ ಹೆಗ್ಗಡೆಯನ್ನು ವಿವಾಹವಾಗಲು ತಯಾರಿರುವ ಮಂಜಮ್ಮನಿಗೆ ಅದೊಂದು ಸಮಸ್ಯೆಯಲ್ಲ, ಅವಳಿಗೆ ಅದೊಂದು ಜೀವಾನೋಪಾಯ ಏಕೆಂದರೆ ಸಿಂಬಾವಿ ಹೆಗ್ಗಡೆಯವರು ಹಣವಂತರು ಆಸ್ತಿವಂತರು ಅವಳು ಸುಖವಾಗಿರುತ್ತಾಳೊ, ಬಿಡುತ್ತಾಳೊ ಎಂಬುದು ಬೇರೆ ವಿಚಾರ. ಆಸ್ತಿವಂತ ಸಿಕ್ಕರೆ ಜೀವನ ಸುಧಾರಿಸುತ್ತದೆ ಎಂಬ ಚೌಕಟ್ಟಿಗೆ ಎಲ್ಲಾ ಸಹಜ ಹೆಂಗಸರಂತೆ ಅವಳು ಸಹ ಬಂದಿತಳಾಗುತ್ತಾಳೆ.

ಕಾದಂಬರಿಯಲ್ಲಿ ಕೆದಕಿದಂತೆಲ್ಲಾ ಇನ್ನು ಹಲವು ಗಂಡು ಹೆಣ್ಣುಗಳ ಸಂಬಂಧವನ್ನು ನಾವು ಕಾಣಬಹುದಾಗಿದೆ. ಕಾದಂಬರಿಯಲ್ಲಿ ಮತ್ತೊಂದು ನೆಲೆ ಅದು ರಂಗಮ್ಮನದು. ಅವಳು ಸತಿಪತಿ ಸಂಬಂಧ ದೈವಿಕವಾದುದು ಎಂದು ಭಾವಿಸುತ್ತಾಳೆ. ಹೀಗಾಗಿ ಅವಳಿಗೊಂದು ಜನ್ಮ ಜನ್ಮಾಂತರದ ಸಂಬಂಧವಾಗಿ ವಿಚಿತ್ರ ಅನುಭವಗಳಾಗಿ ಅಪರೂಪದ ಸಾವು ಸಂಭವಿಸುತ್ತದೆ. ಕಾದಂಬರಿಯಲ್ಲಿ ಉಳಿದವರಿಗೆ ಅವಳ ಸಾವು ಅದೊಂದು ಪುಣ್ಯ ಸಂಬಂಧವಾಗಿ ಕಾಣುತ್ತಿರುತ್ತದೆ.

ಕುವೆಂಪು ಅವರು ಕಾದಂಬರಿಯಲ್ಲಿ ಗಂಡು ಹೆಣ್ಣು ಸಂಬಂಧ ಎಂಬುದು ಮನೋ ದೈಹಿಕ ಸಮ್ಮಿಲನದ ಅನುಭೂತಿ ಎಂದು ಗ್ರಹಿಸುತ್ತಾ ಹೋಗಿದ್ದಾರೆ. ಅದೊಂದು ಆಗುವಿಕೆಯೆ ಹೊರತು ಕೇವಲ ಇರುವಿಕೆಯಲ್ಲ ಈ ಕಾರಣದಿಂದಲೇ ಇದನ್ನು ತಮ್ಮ ಅರಿವಿಲ್ಲದೆ ಸಾಧಿಸಿದ ಐತ–ಪಿಂಚಲು ಮುಕುಂದಯ್ಯನ ಕಣ್ಣಿಗೆ ಶಿವ–ಶಿವಾಣಿಯರಾಗಿ ಕಾಣುತ್ತಾರೆ. ಅಹಂ ಹಳಿದು ಪರಸ್ಪರತೆಯಲ್ಲಿ ಬೆಸೆದು ಕೊಂಡಿರುವ ಇವರ ಇರುವಿಕೆಯಲ್ಲೂ ಒಂದು ಮಹತ್ ಇದೆ. ಆದ್ದರಿಂದ ಅದು ಆಗುವಿಕೆಯಾಗಿ ಪರಿವರ್ತನೆ ಯಾಗುತ್ತದೆ ಎಂದು ಹೇಳಬಹುದು.

ಐತ ಕಾದಂಬರಿಯಲ್ಲಿ ಬಹಳ ಮುಖ್ಯವಾದ ಪಾತ್ರವನ್ನು ವಹಿಸಿದ್ದಾನೆ.ಪಿಂಚಲು ತನ್ನ ಜೀವನದ ಒಂದು ಭಾಗವೇ ಅದ ಮತ್ತು ತನ್ನ ಬಾಳಸಂಗಾತಿಯಾದ ಐತನನ್ನು ಎಂದೂ ವಂಚಿಸುವುದಿಲ್ಲ, ಒಂದು ವೇಳೆ ಅವಳನ್ನು ಮುಕುಂದಯ್ಯ ಬಯಸಿ ಅದನ್ನು ಒಪ್ಪಿಕೊಂಡರೂ ಎಂಬ ಅಪರೂಪದ ಚಿತ್ರಣವೊಂದನ್ನು ಕುವೆಂಪುರವರು ಇದೊಂದು ದೇಹ ವ್ಯಾಪಾರ ಮೀರಿದ ಸಂಗತಿ ಎಂಬಂತೆ ಹೇಳುತ್ತಾರೆ. ನಂತರ ಕಾದಂಬರಿಯನ್ನು ಮುಂದುವರೆಸುತ್ತ ಹೋದರೆ ಅತ್ಯಂತ ಸಾಮಾನ್ಯಳಾಗಿ ಬದುಕುವ ಪ್ರಕೃತಿಯ ಒಂದಂಗವೊ ಎಂಬಂತೆ ಇರುವ ತಿಮ್ಮಿಗೂ ಕೂಡ ಸೂರ್ಯೋದಯದ ದೃಶ್ಯದ ಸೌಂದರ್ಯಾನುಭವ ಆಗ ಬಲ್ಲದು ಎಂದು ಚಿತ್ರಿಸುವ ಕುವೆಂಪು ಗುತ್ತಿ ತಿಮ್ಮಿಯರಲ್ಲೂ ಅವರ ವ್ಯಕ್ತಿತ್ವದ ಸಾಮಾನ್ಯತೆಯಾಚೆಗಿನ ಸಂಗತಿಯನ್ನು ಗುರ್ತಿಸುತ್ತಾರೆ. ಇದು ಗುತ್ತಿ ಮತ್ತು ತಿಮ್ಮಿಯರ ಸಂಬಂಧವನ್ನು ಬೆಸೆಯುತ್ತದೆ. ವಿವಾಹದ ಪೂರ್ವದ ಕಾಡಿನ ಏಕಾಂತದಲ್ಲಿ ಗುತ್ತಿಯೊಂದಿಗಿದ್ದಾಗ ಅವಳು ಪೂರ್ವ ಸ್ಮರಣೆಯೊಂದಕ್ಕೆ ಹೋಗುತ್ತಾಳೆ. ಈ ಹಿಂದೆ ಬಚ್ಚ ತನಗೆ ಮಾಡಿದ್ದನ್ನೇ ಈಗ ಇವನು ಮಾಡಿಯಾನೋ ಎಂದು ನಿರೀಕ್ಷಿಸುವ ತಿಮ್ಮಿ ಬಚ್ಚನನ್ನು ಮದುವೆಯಾಗಲು ಬಯಸುವುದಿಲ್ಲ. ತಿಮ್ಮಿಗಾಗಿ ಎಲ್ಲಾ ಅಪಾಯಗಳನ್ನು ಎದುರು ಹಾಕಿಕೊಳ್ಳುವ ಗುತ್ತಿ ಎಂತಹ ಅಪಾಯವೊಂದರ ವಿಷಮ ಸ್ಥಿತಿಯಲ್ಲಿರುವಾಗಲೂ ಗುಡಿಸಲಿನ ಏಕಾಂತದಲ್ಲಿ ಕೇಳಿಸುವ ಹೆಜ್ಜೆ ಸಪ್ಪಳ ಪುಟ್ಟಿಯದ್ದಿರಬಹುದು ಎಂದು ಊಹಿಸುತ್ತಾ ಅವಳನ್ನು ಬಯಸುತ್ತಾನೆ! ಇವರಿಬ್ಬರು ಒಬ್ಬರಿಂದ ಇನ್ನೊಬ್ಬರು ಪಡೆಯುವ ಸಾಂಗತ್ಯಗಾಳಚೆಯ ಸಹಜೀವನವೊಂದನ್ನು ದಂಪತಿಗಳಾಗಿ ಪಡೆಯು ಬೇಕೆಂಬ ಉತ್ಕಟೇಚ್ಛೆಯಿಂದ ಬಂದಿತರು ಎಂಬುದನ್ನು ತಿಮ್ಮಿ ಒಂಟಿಯಾಗಿ ಮನೆ ಬಿಟ್ಟು ಬರುವ ಸಂದರ್ಭದಲ್ಲಿ ರುದ್ರ ಭೀಕರ ಸನ್ನಿವೇಶದ ತೀವ್ರತೆಯನ್ನು ಕಾಣಬಹುದಾಗಿದೆ.

ಮುಕಂದಯ್ಯ ಚಿನ್ನಮ್ಮರು ಕೂಡ ಚೌಕಟ್ಟುಗಳನ್ನು ಮೀರಿ ವರ್ತಿಸುವ, ಎದುರಿಸುವ ಸಂದರ್ಭದಲ್ಲಿಯೂ ಇದನ್ನು ಗಮನಿಸಬಹುದಾಗಿದೆ. ಆಗಿದ್ದು ಇವೆಲ್ಲವನ್ನು ಸಾಧಿಸಲು ವಿಶೇಷವಾದ ಜ್ಞಾನಬೇಕಿಲ್ಲ ತಮ್ಮ ಸಹ ಜೀವನಗಳೊಂದಿಗೆ ಮಾನವಿಯ ತುಡಿತ ಇದ್ದರೆ ಸಾಕು, ಸುಖ ಅರಸುವುದಕ್ಕಿಂತ ಅನುಭವಿಸುವ ಅರಳಿದ ಮನಸ್ಸು ಸಾಕು ಎಂಬ ಸೂಚನೆಯನ್ನು ಕುವೆಂಪು ನೀಡಿದಂತೆ ಬಾಸವಾಗುತ್ತದೆ. ಏಕೆಂದರೆ ಇವರು ಯಾರು ಬಾಹ್ಯ ಜ್ಞಾನದಿಂದ ವಿಶೇಷವಾಗಿ ಪ್ರವಾವಿತರಲ್ಲ. ಆದರೆ ಇಲ್ಲೊಂದು ಆಗುವಿಕೆ ಸಂಭವಿಸಿದೆ. ಇದನ್ನು ಸ್ಪಷ್ಟಪಡಿಸಿಕೊಳ್ಳಬೇಕೆಂದರೆ ಈ ಕಾದಂಬರಿಯಲ್ಲಿ ಹೆಣ್ಣು–ಗಂಡಿನ ಸಂಬಂಧವನ್ನು ಕೇವಲ ಇರುವಿಕೆಯಷ್ಟೆ ಆದಾಗ ಏನಾಗುತ್ತದೆ ಎಂಬುದನ್ನು ಗಮನಿಸಬೇಕು. ಕೆಲವರಿಗೆ ಅದು ಬದುಕಿಗೆ ಒಂದು ಸಾಧನವಾಗಿರುತ್ತದೆ. ಅಂತಕ್ಕ, ನಾಗತ್ತೆ, ಕಾವೇರಿ ಮೊದಲಾದವುರಲ್ಲಿ ಇದನ್ನು ಕಾಣಬಹುದು. ಇವರೆಲ್ಲರೂ ನಂಬಿಕೆ ದ್ರೋಹದ ಮಹಾಪರ್ವವೊಂದನ್ನು ಸೂಚಿಸುತ್ತಾರೆ. ಹಾಗೇಯೆ ಕೇವಲ ಇರುವಿಕೆಯಾದಾಗ ಅದೊಂದು ವ್ಯಸನವಾಗಿರುತ್ತದೆ. ಚೀಂಕ್ರ, ತಿಮ್ಮಪ್ಪ, ಭರಮೈ ಹೆಗ್ಗಡೆ ಮೊದಲಾದವರಲ್ಲಿ ಇದನ್ನು ಕಾಣಬಹುದು. ಇನ್ನು ಕೆಲವರಿಗೆ ಅದೊಂದು ಜೀವನ ಅಷ್ಟೆ. ಶಂಕರ ಹೆಗ್ಗಡೆಯನ್ನು ಈ ಹಿನ್ನೆಲೆಯಲ್ಲಿ ನೋಡಬಹುದು. ಅವರ ಜೀವನದಲ್ಲಿ ಯಾವುದೇ ಏರುಪೇರು ಇಲ್ಲ. ಸ್ವಾಥವೂ ಇಲ್ಲ. ಗಂಡು ಹೆಣ್ಣಿನ ಸಂಬಂಧ ಎಂಬುದು ಕಾದಂಬರಿಯಲ್ಲಿ ಅದು ಕೊನೆಯಿಲ್ಲದ ರೋಮಾಂಚನವೆನಿಸಿಕೊಳ್ಳುತ್ತದೆ.

ಪೀಂಚಲು ಮತ್ತು ಐತರಲ್ಲಿ ಇದನ್ನು ನಾವು ಕಾಣಬಹುದು. ಅವರ ಸಂಬಂಧ ಇನ್ನು ಬಹುವಚನಕ್ಕೆ ಏರುವಷ್ಟು ಕೃತಕವೊ ದೂರವೊ ಆಗಿರಲಿಲ್ಲ ಎನ್ನುತ್ತಾರೆ ಕುವೆಂಪು.

ಗುತ್ತಿ ತಿಮ್ಮಿಯರದ್ದು ಇಂತದ್ದೆ ಆಗುವಿಕೆ ಹುಲಿಕಲ್ಲು ನೆತ್ತಿಯಲ್ಲಿ ಕುರ್ಕನೊಂದಿಗೆ ಕಾದಾಡಿ ಹುಲಿಯ ಗಾಯಗೊಂಡಾಗ ಗಾಬರಿಗೊಂಡ ಗುತ್ತಿ ತಿಮ್ಮಿಯನ್ನು 'ಎಲ್ಲಾ ನಿನ್ನಿಂದಲೇ ಆಗಿದ್ದು ಸನಿಮುಂಡೆ' ಎಂದು ಆ ಕಾರಣವಾಗಿ ತಿಮ್ಮಿಯನ್ನು ಬಯ್ಯುತ್ತಾನೆ. ಮೊದಲಿಗೆ ಆಘಾತಗೊಂಡರು ಚೇತರಿಸಿಕೊಂಡ ತಿಮ್ಮಿ ತಟ್ಟನೆ 'ನಾನಲ್ಲ ಸನಿಮುಂಡೆ ನೀನೆ ಸನಿಮುಂಡೆ ಗಂಡ' ಎಂದು ತಿರುಗೇಟು ಕೊಡುತ್ತಾಳೆ. ಅವಳು ಅಂದ ಮಾತಿಗೆ ದಿಗ್ಭ್ರಮೆಗೊಂಡ ಗುತ್ತಿ ನಾನು ಇವಳಿಗೆ ಅಧೀನಾಗಿದ್ದರೆ ಇವಳು ನನಗೆ ಅಧೀನಾವಗುವ ಚೇತನವಲ್ಲ ಎಂಬುದನ್ನು ಕಂಡುಕೊಳ್ಳುತ್ತಾನೆ. ಇಷ್ಟಾಗಿಯು ಇದು ಚೌಕಟ್ಟಿನೊಳಗಿನ ಲೋಕಕ್ಕೆ ಪುರಸ್ಕೃತ ಎಂದು ಹೇಳುವಂತಿಲ್ಲ. ಕಂಡುಕೊಳ್ಳುವಿಕೆ ಎಲ್ಲರಿಗೂ ಸಾಧ್ಯ ಎನ್ನುವಂತಿಲ್ಲ. ಐತ ಪೀಂಚಲುವಿನ ಜೊತೆ ಸದಾ ಇರುವುದು ದೊಡ್ಡವರಿಗೆ ಮಾತ್ರವಲ್ಲ ಕಾಡು ತಿಮ್ಮುವಿನಂತಹ ಚಿಕ್ಕ ಹುಡಗರಿಗೂ ತವಾಷೆಯು ಸಂಗತಿಯಾಗುವುದನ್ನು ನೆನಪಿಸಿಕೊಳ್ಳಬಹುದು.

ಈ ರೀತಿಯಾಗಿ ಪ್ರಸ್ತುತ ಕಾದಂಬರಿಯಲ್ಲಿ ಗಂಡು–ಹೆಣ್ಣಿನ ಸಂಬಂಧವು ಹಲವು ಆಯಾಮಗಳಿಂದ ಕೂಡಿದ್ದು, ಪ್ರಮುಖವಾಗಿ ಗಂಡು–ಹೆಣ್ಣಿನ ಬಹುಮುಖ್ಯ ಭಾಗವಾದ ದಾಂಪತ್ಯಜೀವನದಲ್ಲಿ ಕಂಡುಬರುವ ವೈಶಿಷ್ಟತೆಗಳನ್ನು ಇಲ್ಲಿ ಗುರುತಿಸಲಾಗಿದೆ.

## ಆಕರ ಗ್ರಂಥಗಳು


- **ಕುವೆಂಪು.,** (2014) : ನೆನಪಿನ ದೋಣಿ, ಉದಯರವಿ ಪ್ರಕಾಶನ
- **ಜವರೇಗೌಡ ದೇ.,** (1999) : ರಾಷ್ಟಕವಿ ಕುವೆಂಪು, ಕನ್ನಡ ಪುಸ್ತಕ ಪ್ರಾಧಿಕಾರ.
- **ತಾರಿಣಿಚಿದಾನಂದ.,** (2018) : ಮಗಳು ಕಂಡ ಕುವೆಂಪು, ಪುಸ್ತಕ ಪ್ರಕಾಶನ.
- **ಪೂರ್ಣಚಂದ್ರ ತೇಜಸ್ವಿ** (1997): ಅಣ್ಣನ ನೆನಪು, ಪುಸ್ತಕ ಪ್ರಕಾಶನ
- **ಪ್ರಾಧನ್ ಗುರುದತ್ತ,** (2009) : ಕುವೆಂಪು ಸಂಚಯ, ಕುವೆಂಪು ಭಾಷಭಾರತಿ ಪ್ರಾಧಿಕಾರ.
- **ರಾಜೇಶ್ವರಿ.,** (2018) : ನನ್ನ ತೇಜಸ್ವಿ, ಪುಸ್ತಕ ಪ್ರಕಾಶನ.
- **ಕುವೆಂಪು ಸಮಗ್ರ ಗದ್ಯ ಸಂಪುಟ–1,** (2017) : ಕುಪ್ಪಳ್ಳಿ ಪಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ.
- **ಸಮರಸವೇ ದಾಂಪತ್ಯ** (ಲೇ).


■■

ಸೈದ್ಧಾಂತಿಕ

# ಉನ್ನತ ಶಿಕ್ಷಣದಲ್ಲಿ ಪ್ರಾಜೆಕ್ಟ್‌ವರ್ಕ, ದತ್ತಾಂಶಕಾರ್ಯ ಹೇಗಿರಬೇಕು?

✍ **ಡಾ. ಬಿ. ಜಿ. ಧಾರವಾಡ,** ಸಹಾಯಕ ಪ್ರಾಧ್ಯಾಪಕರು, ಕೆ.ಎಸ್.ಆರ್. ಶಿಕ್ಷಣ ಮಹಾವಿದ್ಯಾಲಯ, ಬೆಳಗಾವಿ–10.

'ಪ್ರಾಜೆಕ್ಟ್‌ವರ್ಕ್' ಹಾಗೂ 'ದತ್ತಕಾರ್ಯ' ಎಂಬುದು ಈಗ ವಿದ್ಯಾರ್ಥಿದೆಸೆಯಲ್ಲಿ ಸಾಮಾನ್ಯ ಎಂಬಂತಾಗಿಬಿಟ್ಟಿದೆ. ಇದು ಗುರುಕುಲ ಶಿಕ್ಷಣ ಅಂದರೆ ಪ್ರಾಚೀನ ಕಾಲದಿಂದಲೂ ನಡೆದುಕೊಂಡು ಬಂದ ಪದ್ಧತಿ ಹಾಗೂ ಪರಂಪರೆಯಾಗಿದೆ. ಅದುವೇ ಮಕ್ಕಳಿಗೆ ಮನೆಗೆಲಸವನ್ನು ಶೈಕ್ಷಣಿಕವಾಗಿ ನೀಡುವ, ಅವಲೋಕಿಸುವ ಹಾಗೂ ಮೌಲ್ಯಮಾಪನ ಮಾಡುವ ಪ್ರಕ್ರಿಯೆಯಾಗಿದೆ. ಆದರೆ ಸದ್ಯ ಉನ್ನತ ಶಿಕ್ಷಣದಲ್ಲಿ ಇದು ವಿದ್ಯಾರ್ಥಿಗಳ ಮುಂದಿನ ಉದ್ಯೋಗಕ್ಕೆ ದಿಕ್ಸೂಚಿಯಾಗಬಹುದು.

ಈ ಕುರಿತಾಗಿ ವಿಶಾಲ ದೃಷ್ಟಿಕೋನದಿಂದ ಪರಿಗಣಿಸಬಹುದಾದರೆ "ಸಂಶೋಧನೆ" ಎನ್ನುವುದು ಶೈಕ್ಷಣಿಕ ಕ್ಷೇತ್ರದಲ್ಲಿ ನಿರಂತರವಾದ ಪ್ರಕ್ರಿಯೆಯಷ್ಟೇ ಅಲ್ಲ, ಇದೊಂದು ಸಾಧನೆಯ ಮೈಲುಗಲ್ಲು ಕೂಡ. ಆದರೆ ಸಂಶೋಧನೆಗೆ ಸಂಕಲ್ಪ ಮಾಡಿದರಷ್ಟೆ ಸಾಲದು, ಅದಕ್ಕೆ ಬೇಕಾದ ಸಮಗ್ರ ಸಿದ್ಧತೆ ಮಾಡಿಕೊಳ್ಳುವುದು ಅವಶ್ಯಕ.

"ಸಂಶೋಧನೆ" ಒಂದು ರೀತಿಯಾದರೆ, ಕಿರುಸಂಶೋಧನೆ, ಪ್ರಾಜೆಕ್ಟ್‌ವರ್ಕ್ ಅಥವಾ ದತ್ತಕಾರ್ಯ ಇನ್ನೊಂದು ರೀತಿಯಾಗಿದೆ. ಇದು ವಿದ್ಯಾರ್ಥಿಗಳಿಗೆ ತರಗತಿಯ ಆಚೆಯೂ ಯೋಚಿಸುವ, 21ನೇ ಶತಮಾನದಲ್ಲಿ ಸವಾಲುಗಳನ್ನು ಎದುರಿಸಲು ಅಗತ್ಯವಿರುವ ಕೌಶಲ್ಯ, ನಡುವಳಿಕೆ, ಆತ್ಮವಿಶ್ವಾಸವನ್ನು ತುಂಬುವಂತಹ 'ಟೂಲ್' ಎನ್ನಬಹುದು. ಇದು ವಿದ್ಯಾರ್ಥಿಗೆ ಪ್ರಶ್ನಿಸುವ, ವಿಶ್ಲೇಷಿಸುವ, ಮಾಹಿತಿ ಸಂಗ್ರಹಿಸುವ, ಮೌಲ್ಯಮಾಪನ ಮಾಡುವ ಹೊಸ ಮಾರ್ಗಗಳನ್ನು ಅನ್ವೇಷಿಸುವ ಸಾಮರ್ಥ್ಯವನ್ನು ತುಂಬುತ್ತದೆ. ಇದು ವಿದ್ಯಾರ್ಥಿಯ ಯೋಚನಾ ಶಕ್ತಿಯನ್ನು ಮೇಲಿನ ಸ್ತರಕ್ಕೆ ಕೊಂಡೊಯ್ಯಬಲ್ಲದು; ಜ್ಞಾನದ ವಿಸ್ತಾರದ ಜೊತೆಗೆ ಹೆಚ್ಚುವರಿ ಕೌಶಲ್ಯಗಳಾದ ಸೃಜನಶೀಲತೆ, ಸಮಸ್ಯೆಯನ್ನು ಪರಿಹರಿಸುವ ಚಾಣಾಕ್ಷ ಹಾಗೂ ಸಂಶೋಧನಾತ್ಮಕ ದೃಷ್ಟಿಯನ್ನು ಹೆಚ್ಚಿಸುತ್ತದೆ. ವಿದ್ಯಾರ್ಥಿಯು ಪ್ರಾಜೆಕ್ಟ್‌ವರ್ಕ್ ಹಾಗೂ ದತ್ತಕಾರ್ಯ ಶುರುಮಾಡುತ್ತಿದ್ದಂತೆ ನಿರ್ಧಾರಗಳನ್ನು ಕೈಗೊಳ್ಳುವ, ಸಂವಹನ ನಡೆಸುವ ಚಾಕಚಕ್ಯತೆಯನ್ನು ಬೆಳೆಸಿಕೊಳ್ಳುತ್ತಾನೆ.

## ನಿರಂತರ ಕಲಿಕೆಗೆ ಅಡಿಪಾಯ

ಪ್ರಾಜೆಕ್ಟ್‌ವರ್ಕ್ ಹಾಗೂ ದತ್ತಕಾರ್ಯಕ್ಕೆ ಅಗತ್ಯವಿರುವ ದಾಖಲೆಗಳನ್ನು ಸಂಗ್ರಹಿಸುವುದು, ಕ್ರೋಢೀಕರಿಸುವುದು, ಅದನ್ನು ವಿಶ್ಲೇಷಿಸುವುದು, ಇತರರ ಜೊತೆ ಚರ್ಚಿಸಿ ಅಂತಿಮ ನಿಲುವನ್ನು ಪಡೆಯುವುದು. ಕೊನೆಗೊಂದು ತೀರ್ಮಾನವನ್ನು ಪ್ರಸ್ತುತಪಡಿಸುವುದು. ಇವೆಲ್ಲವನ್ನು ಈ ಹಂತದಲ್ಲಿ ವಿದ್ಯಾರ್ಥಿಗಳು ಕಲಿಯಬಹುದು. ಮಾಹಿತಿಯನ್ನು ಅವರವರಿಗೆ ಬೇಕಾದಂತೆ ವಿಮರ್ಶಿಸುವ ಬುದ್ಧಿವಂತಿಕೆಯೂ ಅತ್ಯಂತ ಅವಶ್ಯಕ.

## ಅಂತಿಮ ರೂಪಕ್ಕೆ ಮೊದಲೇ ಯೋಜನೆ

ಒಂದು ಪ್ರೊಜೆಕ್ಟ್ ಅಥವಾ ದತ್ತಕಾರ್ಯವನ್ನು ವಿದ್ಯಾರ್ಥಿ ವಿನ್ಯಾಸಗೊಳಿಸಿದಾಗ, ಅದರ ಅಂತಿಮ ರೂಪ ಹೇಗಿರುತ್ತದೆ ಎಂಬುದನ್ನು ವಿದ್ಯಾರ್ಥಿಯು ಆರಂಭದಲ್ಲೇ ಮೂಡಿಸಿಕೊಂಡಿರಬೇಕು. ನಂತರ ಪ್ರತಿಯೊಂದು ಹಂತವನ್ನು ಪ್ರಚಾರಪಡಿಸುತ್ತ ಹೋಗಬೇಕು.

ಉನ್ನತ ಶಿಕ್ಷಣ ಹಂತದಲ್ಲಿ ವಿದ್ಯಾರ್ಥಿಗಳಿಗೆ ಪದವಿ ಪೂರ್ಣಗೊಳಿಸಲು ಕಿರು ಸಂಶೋಧನೆ ಕೈಗೊಳ್ಳುವುದನ್ನು ಹಲವು ಕಡೆ ಕಡ್ಡಾಯಗೊಳಿಸಲಾಗಿದೆ. ಕೆಲವು ಕಡೆ ಐಚ್ಛಿಕಗೊಳಿಸಲಾಗಿದೆ, ಹೀಗಾಗಿ ವಿದ್ಯಾರ್ಥಿಗಳು ಈ ಬಗ್ಗೆ ಮೊದಲೇ ಆತಂಕಗೊಳ್ಳುವುದು ಸಹಜ. ಆದರೆ ಸರಿಯಾಗಿ ಅರ್ಥಮಾಡಿಕೊಂಡರೆ ಸಂಶೋಧನೆ ಎಂಬುದು ಕಬ್ಬಿಣದ ಕಡಲೆಯೇನಲ್ಲ, ಸುಲಿದ ಬಾಳೆ ಹಣ್ಣಿನಂತೆ ಸುಲಭ.

ಸಂಶೋಧನೆ ಎನ್ನುವುದು ಜ್ಞಾನವನ್ನು ಒರೆಗೆ ಹಚ್ಚುವ ಒಂದು ವಿಧ. ಇದರಲ್ಲಿ ಒಮ್ಮೆ ಆಸಕ್ತಿ ಬೆಳೆಸಿಕೊಂಡರೆ, ಸಂಶೋಧನಾತ್ಮಕ ವಸ್ತುವನ್ನು ಹುಡುಕುವುದು ಸಲಿಸು. ಡಾಕ್ಟರೇಟ್ ಪದವಿಗಾಗಿ ಮಾಡುವ ಸಂಶೋಧನೆ ಪರಿಣಾಮಕಾರಿ ಹಾಗೂ ಹೊಸ ಆಯಾಮಗಳಿಗೆ ಅಡಿಪಾಯ ಹಾಕಿಕೊಡುವ ಮಾರ್ಗಸೂಚಿಯಾದರೆ, ವಿದ್ಯಾರ್ಥಿದೆಸೆಯ ಕಿರು ಅಥವಾ ಕ್ರಿಯಾಸಂಶೋಧನೆ ವಿದ್ಯಾರ್ಥಿಗಳ ಸಂಶೋಧನಾ ಕೌಶಲ್ಯ ಹೆಚ್ಚಿಸುವುದರ ಜೊತೆಗೆ ವಿದ್ಯಾರ್ಥಿಗಳ ಭವಿಷ್ಯದ ಉದ್ಯೋಗಕ್ಕೆ ಅಡಿಪಾಯ ಹಾಕಬಹುದು.

## ವಿಷಯ ಆಯ್ಕೆಗೆ ಮುನ್ನ

- ವಿದ್ಯಾರ್ಥಿಗಳ ಶಿಕ್ಷಣ ಹಾಗೂ ಭವಿಷ್ಯದ ದೃಷ್ಟಿಯಿಂದ ಉದ್ಯೋಗಕ್ಕೆ ನೆರವಾಗುವಂತಹ ವಿಷಯವಿರಲಿ.
- ವಿದ್ಯಾರ್ಥಿಗಳು ಓದುತ್ತಿರುವ ವಿಭಾಗಗಳಲ್ಲಿ ಅಭ್ಯಸಿಸುತ್ತಿರುವ ವಿಷಯಗಳಿಗೆ ಸಂಬಂಧಿಸಿದಂತೆ ವಸ್ತುವನ್ನು ಆಯ್ಕೆ ಮಾಡಿಕೊಳ್ಳುವುದು.

  ***ಉದಾಹರಣೆಗೆ :*** ಬಿ.ಎಡ್ ಶಿಕ್ಷಣದಲ್ಲಿ ವಿಷಯವಾರು ಪತ್ರಿಕೆ, ದೃಶ್ಯಮಾಧ್ಯಮ, ಪ್ರಚಲಿತ ವಿದ್ಯಮಾನಕ್ಕೆ ಸಂಬಂಧಿಸಿದ ವಿಷಯಾಧಾರಿತ ಹಾಗೂ ಮಾಹಿತಿ ಸಂಗ್ರಹಕ್ಕೆ ಅವಕಾಶವಿರಲಿ.
- ವಿದ್ಯಾರ್ಥಿಗಳ ಆಸಕ್ತಿಗೆ ಅನುಗುಣವಾಗಿ ವಿಷಯದ ಆಯ್ಕೆ ಇರಲಿ.

  ***ಉದಾಹರಣೆಗೆ :*** ಪಠ್ಯೇತರ ಹಾಗೂ ಪಠ್ಯಪೂರಕ ರೀತಿಯ ಮನರಂಜನೆ, ಕ್ರೀಡೆ, ವಿ.ವಿ ಕಾರ್ಯಕ್ರಮಗಳು ಇತ್ಯಾದಿ.
- ಕಿರು ಸಂಶೋಧನೆ ಅಥವಾ ಕ್ರಿಯಾಸಂಶೋಧನೆ, ಪ್ರಾಜೆಕ್ಟ ಹಾಗೂ ದತ್ತಕಾರ್ಯಗಳ ವ್ಯಾಪ್ತಿಯನ್ನು ಮೊದಲೇ ನಿರ್ಧರಿಸಬೇಕು.
- ವಿಷಯದ ಆಯ್ಕೆ ಹಾಗೂ ವಿದ್ಯಾರ್ಥಿಗಳಿಗೆ ವಿಷಯವಾರು ಹಂಚಿಕೆ ಮಾಹಿತಿ ಸಂಗ್ರಹಣೆಗೆ ಲಭ್ಯವಾಗುವಂತಿರಬೇಕು.
- ವೀಕ್ಷಣೆ, ಸಂದರ್ಶನ, ಪ್ರವಾಸಗಳು ಕ್ಷೇತ್ರಾಧ್ಯಯನದಂತಹ ವಿಷಯಗಳಿಗೆ ಆದ್ಯತೆ ಇರಬೇಕು.
- ನಿಖರ ಹಾಗೂ ನಿರ್ದಿಷ್ಟ ಕಾಲಮಿತಿ ಅಥವಾ ಅವಧಿಗೆ ಒಪ್ಪಿಸುವಂತಿರಬೇಕು.
- ಪ್ರಾಜೆಕ್ಟ್‌ವರ್ಕ ಹಾಗೂ ದತ್ತಕಾರ್ಯ ಕುರಿತು ಮಾಹಿತಿ ಸಂಗ್ರಹಣೆ ಸಂಬಂಧದ ಸೂಕ್ತ, ಆಕರ, ಆಧಾರಾಂಶಗಳನ್ನು ಸೂಚಿಸಿರಬೇಕು.

ಇದಾದ ನಂತರ ಸಂಬಂಧಿಸಿದ ವಿಷಯಕ್ಕೆ ಅನುಗುಣವಾಗಿ ಸಿದ್ಧಪಡಿಸಿ, ಸಂಶೋಧನೆ ಕೈಗೊಳ್ಳಲು ಬೇಕಾಗಿರುವ ಸಲಕರಣೆಗಳ ಪಟ್ಟಿ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ತಯಾರಿಸಿ, ವಿದ್ಯಾರ್ಥಿಗಳು ಆಯ್ಕೆ ಮಾಡಿಕೊಂಡಿರುವ ವಿಷಯ ಪ್ರಸ್ತುತ ವಿದ್ಯಮಾನಗಳಿಗೆ ಹೋಲಿಕೆಯಾಗುವಂತಿದ್ದರೆ ಇನ್ನೂ ಉತ್ತಮ ಪ್ರಸ್ತಾಪಿತ ಅಧ್ಯಯನದ ಕುರಿತಾಗಿ ಮಾಹಿತಿ ಸಂಗ್ರಹಣೆಗೆ ತೆರಳಬೇಕಾಗಿರುವ ಸ್ಥಳಗಳು, ತಗಲುವ ವೆಚ್ಚ ಹಾಗೂ ಸಮಯದ ಕುರಿತು ಅಚ್ಚುಕಟ್ಟಾಗಿ ಪಟ್ಟಿ ಮಾಡಿಕೊಳ್ಳಬೇಕು.

ಹೀಗೆ ನಡೆಸುವ ಅಧ್ಯಯನಗಳನ್ನು ಪೀಠಿಕೆಯಿಂದ ಹಿಡಿದು ಅಂತ್ಯದವರೆಗೂ ಇರುವ ಸಂಶೋಧನಾ ವಿನ್ಯಾಸದಂತೆ ರೂಪಿಸಬೇಕು. ಇವುಗಳಲ್ಲಿ ವಿದ್ಯಾರ್ಥಿಗಳು ಭೇಟಿ ನೀಡಿದ ಸ್ಥಳ, ಚಿತ್ರಗಳು, ವ್ಯಕ್ತಿಗಳು, ಮಾದರಿಗಳು, ಆಕರಗಳು ಸೇರಿದಂತೆ ಎಲ್ಲ ರೀತಿಯಲ್ಲಿ ಸಹಕರಿಸಿದ ಆತ್ಮೀಯರ ಹೆಸರನ್ನು ಉಲ್ಲೇಖಿಸಿದರೆ ಅದೊಂದು ಯಶಸ್ವಿ ಕಿರು ಪ್ರಬಂಧವಾಗುವುದರಲ್ಲಿ ಎರಡು ಮಾತಿಲ್ಲ. ಇಷ್ಟೇ ಅಲ್ಲದೆ, ಮುಂದೊಂದು ದಿನ ವಿದ್ಯಾರ್ಥಿಗಳೇ ನೀವು ಖುದ್ದು ಪಿ.ಎಚ್.ಡಿ ಪದವಿ ಮಾಡುವ ಸಂದರ್ಭ ಬಂದೊದಗಿದರೆ ಇದೇ ಕಿರು ಪ್ರಬಂಧವನ್ನು ಮಹಾ ಪ್ರಬಂಧವನ್ನಾಗಿ ಆಯ್ಕೆ ಮಾಡಿಕೊಂಡು ಸಂಶೋಧನೆ ನಡೆಸಲು ಸಹಕಾರಿಯಾಗುತ್ತದೆ.

ಸೂಕ್ತ ವಿಷಯ ಆಯ್ದು ಶುದ್ಧ ಸಂಶೋಧನೆ ನಡೆಸಿದರೆ ಮುಂದೆ ಸಂಶೋಧನೆಯಲ್ಲೇ ವಿಭಿನ್ನ ಅವಕಾಶಗಳು ದೊರೆಯುವ ಎಲ್ಲ ಸಾಧ್ಯತೆಗಳಿವೆ.

## ಆಕರ ಗ್ರಂಥಗಳು


- **ಗೂಗಲ್ ಜಾಲತಾನ :** ಮೌಲ್ಯಮಾಪನ ಮತ್ತು ದತ್ತಕಾರ್ಯ.
- **ಎಸ್.ಕೆ ಕೊಚ್ಚಾರ :** ಸಮಾಜ ವಿಜ್ಞಾನ ಬೋಧನೆ.
- **ಪ್ರಜಾವಾಣಿ ದಿನಪತ್ರಿಕೆ.**


■■

– 6ನೇ ಪುಟದಿಂದ ಮುಂದುವರೆದುದು

ಲಭ್ಯತೆಯ ಕೊರತೆ ಮತ್ತು ಬಡತನದ ಬದುಕನ್ನು ನಿರ್ವಹಿಸುತ್ತಿರುವ ಕುಟುಂಬಗಳು ಅಗತ್ಯದ ತಂತ್ರಜ್ಞಾನ ಅಳವಡಿಕೆ ಹಾಗೂ ಖರೀದಿಯಲ್ಲಿ ಉಂಟಾದ ತೊಡಕುಗಳು. ಜೀವನ ನಿರ್ವಹಣೆಯ ದುರ್ಬಲವಾದ ಸಂದರ್ಭದಲ್ಲಿ ದುಬಾರಿ ಮೊಬೈಲ್, ಕಂಪ್ಯೂಟರ್ ಕೊಳ್ಳಲು ಹೇಗೆ ಸಾಧ್ಯ ಎಂದು ಅನೇಕರು ತಮ್ಮ ಅಳಲನ್ನು ತೋಡಿಕೊಳ್ಳುತ್ತಿರುವುದೂ ಉಂಟು.

ಅಷ್ಟೇ ಅಲ್ಲ ದಿನನಿತ್ಯ ಹಾಗೂ ವಾರಾಧಿಗಳಲ್ಲಿ ಭಕ್ತಾಧಿಗಳಿಂದ ಜಿನಗುಡುತ್ತಿರುವ ದೇವಾಲಯ, ಮಸೀದಿ ಮತ್ತು ಚರ್ಚುಗಳು ಲಾಕ್‌ಡೌನ್‌ನಿಂದಾಗಿ ಸ್ತಬ್ಧಗೊಂಡಿವೆ. ಅತ್ಯಾನುಅತಿ ವೈಭವ ಮತ್ತು ವಿಜೃಂಭಣೆಯಿಂದ ಜರಗುತ್ತಿರುವ ಮದುವೆ, ಮುಂಜಿ, ಸಮಾರಂಭಗಳು, ಜಾತ್ರೆ, ಹಬ್ಬ ಹರಿದಿನಗಳು ಜನಜಂಗುಳಿಯಿಲ್ಲದೆ ಭಣಗುಡುವಂತಾಗಿ ಸೀಮಿತ ಜನರಿಂದ ಮಾತ್ರ ನಡೆಯುವಂತಾಗಿದೆ. ಪ್ರಸ್ತುತ ಶವಸಂಸ್ಕಾರ ಪ್ರಕ್ರಿಯೆಯನ್ನು ಗಮನಿಸಿದಾಗ ಜೀವನ ಎಷ್ಟು ಕ್ಷಣಿಕವೆಂಬುದರ ಅರಿವು ನಮಗಾಗಿ ಬಿಟ್ಟಿದೆ. ಮನೆಯವರು ಮುಖ ನೋಡುವಂತಿಲ್ಲ, ಸಂಬಂಧಿಕರಿಗೆ ಅವಕಾಶವಿಲ್ಲ, ಸಾಂತ್ವಾನದ ಪರಿಸ್ಥಿತಿಯಿಲ್ಲದೆ ಮನಸ್ಸು ಕಲ್ಲು ಮಾಡಿಕೊಳ್ಳಲೇಬೇಕೆಂಬ ಅನಿವಾರ್ಯ ಉಂಟಾಗಿದೆ.

ಹಾಗೆಯೇ ಈ ಕೊರೋನಾ ವೈರಸ್ ವಿರುದ್ಧ ಹಾಗೂ ಸೋಂಕಿತರ ಆರೋಗ್ಯವನ್ನು ಕಾಪಾಡುವ ದೃಷ್ಟಿಯಿಂದ ಹೋರಾಡುತ್ತಿರುವ ಕೇಂದ್ರ, ರಾಜ್ಯ ಸರ್ಕಾರಗಳ ಮಂತ್ರಿಗಳು, ಜನಪ್ರತಿನಿಧಿಗಳು, ವಿವಿಧ ಇಲಾಖೆಯ ಅಧಿಕಾರಿಗಳು, ವೈದ್ಯರು, ಪೋಲೀಸ್ ಸಿಬ್ಬಂದಿ, ಶುಶ್ರೂಶಕರು, ದಾದಿಯರು, ಆಶಾ ಕಾರ್ಯಕರ್ತೆಯರು, ಅಂಗನವಾಡಿ ಕಾರ್ಯಕರ್ತೆಯರು, ಅಂಬುಲೈನ್ಸ್ ಚಾಲಕರು, ಕೆಲವು ಸರ್ಕಾರೇತರ ಸಂಘಸಂಸ್ಥೆಗಳ ಪ್ರತಿನಿಧಿಗಳು ಮತ್ತು ಮಾಧ್ಯಮ ಪ್ರತಿನಿಧಿಗಳು ಪಡುತ್ತಿರುವ ಪಾಡಂತೂ ಹೇಳತೀರದು, ಪ್ರಾಣವನ್ನು ಪಣಕ್ಕಿಟ್ಟು ರಾತ್ರಿ ಹಗಲೆನ್ನದೇ ದಿನದ 24 ಗಂಟೆಗಳ ಕಾಲ ದೇವರ ಸ್ವರೂಪದಲ್ಲಿ ತಮ್ಮ ಸೇವಾಕಾರ್ಯವನ್ನು ಮಾಡುತ್ತಿದ್ದಾರಲ್ಲದೆ ಹಲವರು ತಮ್ಮ ಪ್ರಾಣವನ್ನು ಕೂಡ ಕಳೆದುಕೊಂಡಿದ್ದಾರೆ. ಅವರಿಗೆ ಎಷ್ಟು ಕೃತಜ್ಞತೆಗಳನ್ನು ಸಲ್ಲಿಸಿದರೂ ಕಡಿಮೆಯೇ.

ಇಂತಹ ಅನಾಹುತವನ್ನು ಸೃಷ್ಟಿಸಿದ ಈ ಮಹಾಮಾರಿ ಸೋಂಕು ತನ್ನ ಹರವನ್ನು ಹೆಚ್ಚಿಸಿಕೊಂಡು ಅಪಾರ ಸಾವು ನೋವಿಗೆ ಕಾರಣವಾಗಿದೆ. ಕ್ಷಣ ಕ್ಷಣ ಆತಂಕವನ್ನು ಹೆಚ್ಚಿಸುತ್ತಾ ಜನಜೀವನದಲ್ಲಿ ಅಲ್ಲೋಲ ಕಲ್ಲೋಲ ಸೃಷ್ಟಿಸಿದ್ದಂತೂ ಸತ್ಯ. ಈ ಸೋಂಕಿಗೆ ಕಡಿವಾಣ ಹಾಕಲು ಔಷಧಿ ಕಂಡಹಿಡಿಯುವ ಪ್ರಯತ್ನ ಫಲಿಸಬೇಕು. ಅಲ್ಲಿಯವರೆಗೆ ಪ್ರತಿಯೊಬ್ಬ ಜನಸಮೂಹವು ಸರ್ಕಾರಗಳು ಕಾಲ–ಕಾಲಕ್ಕೆ ಹೊರಡಿಸುವ ಸೂಚನೆ ಮತ್ತು ಆದೇಶಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಜನಸಾಮಾನ್ಯರೆಲ್ಲರು ದೈಹಿಕ ಅಂತರ ಹಾಗೂ ಅಗತ್ಯದಲ್ಲಿ ಸಾಮಾಜಿಕ ಅಂತರವನ್ನು ಕಾಪಾಡಿಕೊಳ್ಳಬೇಕು ಮತ್ತು ಪ್ರತಿಯೊಬ್ಬರೂ ಮುಖ ಕವಚವನ್ನು ಅನಿವಾರ್ಯವಾಗಿ ಧರಿಸಲೇಬೇಕು.

ಜನಜೀವನದಲ್ಲಿ ಅಸ್ತವ್ಯಸ್ಥವಾಗಿದ್ದಂತೂ ನಿಜ. ಈ ಸೋಂಕು ಯಾವುದೇ ತಾರಾತಮ್ಯವಿಲ್ಲದೇ ಎಲ್ಲರನ್ನು ತನ್ನಡೆಗೆ ಸೆಳೆಯುತ್ತಿದೆ. ಆದರೆ ಮಾನ್ಯ ಪ್ರಧಾನಮಂತ್ರಿಗಳ ಚಿಂತನೆಯನ್ನು ಆಧರಿಸಿ ಅರ್ಥೈಸುವುದಾದರೆ "ಜೀವ ಇದ್ದರೆ ತಾನೆ ಜೀವನ" ಹಾಗಾಗಿ ನಾವುಗಳು ನಮ್ಮ ಜೀವವನ್ನು ಮೊದಲು ಉಳಿಸಿಕೊಳ್ಳಲು ಸೂಕ್ತ ಕ್ರಮಗಳನ್ನು ಅನುಸರಿಸಬೇಕು. ಆ ಮೂಲಕ ಸೋಂಕು ಹರಡುವ ಕೊಂಡಿಯನ್ನು ಕಳಚಬೇಕು. ಮುಂದೊಂದು ದಿನ ಇದಕ್ಕೆ ಸೂಕ್ತ ಚಿಕಿತ್ಸೆ ಸಿಕ್ಕೇ ಸಿಗುತ್ತದೆ ಎಂಬ ಆಶಾಭಾವನೆಯೊಂದಿಗೆ ಭಯಮುಕ್ತರಾಗಿ ಸರ್ಕಾರಗಳ ಜೊತೆಗೆ ಕೈ ಜೋಡಿಸುತ್ತಾ ಜೀವನ ನಿರ್ವಹಣೆಯ ಧೈರ್ಯ ಮಾಡೋಣ.

## ಮಾಹಿತಿ ಆಧಾರ


- ಭಾರತ ಸರ್ಕಾರದ ಆರೋಗ್ಯ ಸೇತು ಆಪ್‌ನ ಮಾಹಿತಿಗಳು.
- ಕನ್ನಡ ದಿನಪತ್ರಿಕೆಗಳ ವರದಿಗಳ ಅವಲೋಕನ.
- ಸುದ್ದಿ ವಾಹಿನಿಗಳಲ್ಲಿ ಬಿತ್ತರಿತ ವರದಿಗಳ ಅವಲೋಕನ.


ವಿದ್ಯಾನಿಧಿ ಪ್ರಕಾಶನ ®
ಶ್ರೀ ಶಿವಕುಮಾರ ಏಜನ್ಸಿ®
ಶೈಕ್ಷಣಿಕ ಪುಸ್ತಕಗಳ ಪ್ರಕಾಶಕರು ಮತ್ತು ಮಾರಾಟಗಾರರು
ಸ್ಟೇಶನ್ ರೋಡ ಮತ್ತು 'ನನಸು' ಜೆ. ಟಿ. ಮಠ ರೋಡ, ಗದಗ
ದೂರವಾಣಿ : 08372–237527, 277527
e-mail : vidyanidhiprakashana@gmail.com.

ಸೈದ್ಧಾಂತಿಕ

# ಗುಬ್ಬಿ ತಾಲೂಕು ನವಶೋಧಿತ ಪ್ರಾಗೈತಿಹಾಸಿಕ ಕುರುಹುಗಳು

✍ ಶ್ರೀನಿವಾಸ ಎ. ಜಿ., ಸಂಶೋಧನಾ ವಿದ್ಯಾರ್ಥಿ, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ, ಹಂಪಿ.

## ಪೀಠಿಕೆ

ಕರ್ನಾಟಕ ಸಾಂಸ್ಕೃತಿಕವಾಗಿ, ಭೌಗೋಳಿಕವಾಗಿ ಆಯಕಟ್ಟಿನ ಭಾಗದಲ್ಲಿ ಇರುವುದರಿಂದ ಮತ್ತು ಉತ್ತಮ ಪರಿಸರ ಹೊಂದಿರುವುದ ರಿಂದಾಗಿ ಪ್ರಾಗೈತಿಹಾಸಿಕ ಕಾಲದಿಂದಲೂ ಮಾನವನ ಜೀವನೋಪಾಯದ ಚಟುವಟಿಕೆಗಳಿಗೆ ಮತ್ತು ಸಂಸ್ಕೃತಿಯ ತೀವ್ರ ಪ್ರಗತಿಗೆ ಬಹಳ ಅನುಕೂಲವಾಗಿತ್ತೆಂದು ತೋರುತ್ತದೆ. ತುಮಕೂರು ಜಿಲ್ಲೆಯ ಗುಬ್ಬಿ ತಾಲೂಕು ಇದರಿಂದ ಹೊರತಾಗಿರಲಿಲ್ಲ. ಮಾನವನ ಸುಧೀರ್ಘವಾದ ಜೀವನ ವ್ಯವಸ್ಥೆಯಲ್ಲಿ ಪ್ರಾಗಿತಿಹಾಸಕಾಲ, ಪೂರ್ವಭಾವಿ ಇತಿಹಾಸ ಕಾಲ ಮತ್ತು ಇತಿಹಾಸ ಕಾಲ ಎಂದು ಮೂರು ಹಂತಗಳನ್ನು ಗುರುತಿಸಲಾಗಿದೆ. ಲೇಖನ ಕಲೆ ಪ್ರಾರಂಭವಾಗುವ ಮುಂಚಿನ ಕಾಲವನ್ನು ಪ್ರಾಗಿತಿಹಾಸ ಕಾಲ ಎನ್ನುತ್ತೇವೆ. ಪ್ರಾಗಿತಿಹಾಸ ಕಾಲದ ಬಹುಭಾಗ ಶಿಲಾಯುಗಕ್ಕೆ ಸೇರಿದೆ. ಮಾನವ ತನ್ನ ದೈನಂದಿನ ಕಾರ್ಯ ಚಟುವಟಿಕೆಗಳಿಗೆ ಕಲ್ಲಿನಿಂದ ಮಾಡಿದ ಉಪಕರಣಗಳನ್ನು ಬಳಸುತ್ತಿದ್ದರು. ಎಲುಬು ಮತ್ತು ಕಟ್ಟಿಗೆಯಿಂದ ತಯಾರಿಸಿದ ಉಪಕರಣಗಳ ಬಳಕೆಯಿದ್ದಿತೆಂದು ತಿಳಿದರೂ ಕಾಲಕ್ರಮೇಣ ಅವು ನಶಿಸಿ ಹೋಗಿವೆ. ಶಿಲಾಯುಗವು ವೈಶಿಷ್ಟ್ಯ ಪೂರ್ಣವಾಗಿದ್ದು ಈ ಕಾಲದಲ್ಲಿ ಮಾನವನ ವಿಕಾಸದ ಬಗ್ಗೆ ಸ್ಪಷ್ಟ ಮಾಹಿತಿ ದೊರೆಯುತ್ತದೆ.

ಶಿಲಾಯುಗ ಸಂಸ್ಕೃತಿಯ ಹಂತ ಅತ್ಯಂತ ಧೀರ್ಘವಾದ ಯುಗ, ಈ ಹಂತಗಳಲ್ಲಿನ ಅವಶೇಷ ಅವುಗಳ ಬೆಳವಣಿಗೆ ಮತ್ತು ತಂತ್ರಜ್ಞಾನ, ಕುಶಲತೆಯನ್ನಾದರಿಸಿ ಹಳೆ ಶಿಲಾಯುಗ, ಸೂಕ್ಷ್ಮ ಶಿಲಾಯುಗ, ನೂತನ ಶಿಲಾಯುಗ ಎಂದು ವಿಂಗಡಿಸಲಾಗಿದೆ. ಪ್ರತಿಯೊಂದು ಹಂತದಲ್ಲಿ ಉಪಯೋಗಿಸಿದ ಉಪಕರಣಗಳನ್ನು ಸಿದ್ಧಪಡಿಸುವಲ್ಲಿ ಬಳಸಿದ ತಂತ್ರಗಳು ಮತ್ತು ಉಪಕರಣಗಳಿಂದ ಸಂಸ್ಕೃತಿಯ ಹಂತಗಳನ್ನು ನಿರ್ದೇಶಿಸುತ್ತಾ ಮಾನವ ಸಂಸ್ಕೃತಿ ಬೆಳವಣಿಗೆಯ ವಿವಿಧ ಘಟ್ಟಗಳನ್ನು ಸ್ಪಷ್ಟಗೊಳಿಸುತ್ತವೆ. ಕರ್ನಾಟಕದಲ್ಲಿ ಪ್ರಾಗಿತಿಹಾಸದ ಅಧ್ಯಯನ ಬ್ರಿಟೀಷ್ ಅಧಿಕಾರಿ ಕ್ಯಾಪ್ಟನ್ ಕೋಬೋಲ್ಡ್‌ನಿಂದ 1836 ರಲ್ಲಿ ಕುಡತಿನಿ ಮತ್ತು ಕುಪ್ಪಗಲ್ ಬೂದಿದಿಬ್ಬ ನೆಲೆಗಳು ಪ್ರಥಮ ಶೋಧನೆಯಾಗಿವೆ. (ಕೆ.ಬಿ. ಶಿವತಾರಕ್ 2001, ಪು.ಸಂ. 04) ಒಂದು ಪ್ರದೇಶದಲ್ಲಿ ದೊರೆಯುವ ಪ್ರಾಗೈತಿಹಾಸಿಕ ಆ ಪ್ರದೇಶದ ವಿಶಿಷ್ಟವಾದ ಸಾಂಸ್ಕೃತಿಕ ಚರಿತ್ರೆಗೆ ನಿರ್ಧಿಷ್ಟ ಚೌಕಟ್ಟನ್ನು ಸೃಷ್ಟಿಸುತ್ತವೆ. ಜಾಗತೀಕರಣದ ನೆಪದಲ್ಲಿ ಪ್ರಾಗೈತಿಹಾಸಿಕ ಕುರುಹುಗಳು ತನ್ನ ಮಹತ್ವ ಕಳೆದುಕೊಳ್ಳುತ್ತಿರುವಾಗ ಗುಬ್ಬಿ ತಾಲೂಕಿನ ಕೆಲವು ಗ್ರಾಮಗಳು ತನ್ನ ಒಡಲಲ್ಲಿ ತುಂಬಿಕೊಂಡಿರುವುದನ್ನು ಗಮನಿಸಿದರೆ ಕುತೂಹಲವೆನಿಸುತ್ತದೆ. ಪ್ರಸ್ತುತ ಗುಬ್ಬಿ ತಾಲೂಕಿನಲ್ಲಿ ಕ್ಷೇತ್ರ ಕಾರ್ಯ ಕೈಗೊಳ್ಳುವುದರ ಮೂಲಕ ವಿವಿಧ ಗ್ರಾಮಗಳಲ್ಲಿ ಅನೇಕ ಪ್ರಾಗೈತಿಹಾಸಿಕ ಕುರುಹುಗಳನ್ನು ಪತ್ತೆ ಹಚ್ಚಿ ಪ್ರಾಗೈತಿಹಾಸಿಕ ಕುರುಹುಗಳನ್ನು ಪತ್ತೆ ಹಚ್ಚಿ ಪ್ರಾಗೈತಿಹಾಸಿಕ ಕಾಲದ ಮಾನವ ಸಂಸ್ಕೃತಿಯನ್ನು ವಿಶ್ಲೇಷಿಸುವ ಪ್ರಯತ್ನ ಮಾಡಲಾಗಿದೆ.

## ಅಮ್ಮನಘಟ್ಟ

ಅಮ್ಮನಘಟ್ಟ ಗ್ರಾಮವು ತುಮಕೂರು ಜಿಲ್ಲೆ ಗುಬ್ಬಿ ತಾಲೂಕಿನಲ್ಲಿ ಕಂಡುಬರುವ ಒಂದು ಗ್ರಾಮವಾಗಿದೆ. ತಾಲೂಕು ಕೇಂದ್ರವಾದ ಗುಬ್ಬಿಯಿಂದ ತೆಂಕಣಭಾಗಕ್ಕೆ 05 ಕಿ.ಮೀ. ದೂರದಲ್ಲಿದೆ. ಗುಬ್ಬಿ ಹೊಸಹಳ್ಳಿ ಪಾಳೆಯಪಟ್ಟಿನ ಲಿಂ. ಚನ್ನಬಸವರಾಧ್ಯರ ಮನೆಯಲ್ಲಿ ದೊರೆತಿರುವ ತಾಮ್ರಶಾಸನದಲ್ಲಿ ಅಮ್ಮನಘಟ್ಟದ ಉಲ್ಲೇಖವಿದೆ.[1]

ಅಮ್ಮನಘಟ್ಟ ಗ್ರಾಮವು ಪ್ರಾಗಿತಿಹಾಸ ಕಾಲದಿಂದಲೂ ಹೆಚ್ಚು ಮಹತ್ವ ಪಡೆದಿದೆ. ಭೂಭಾಗ ಬಯಲುನಾಡಿನಿಂದ ಕೂಡಿದ್ದು ಮರಳುಮಿಶ್ರಿತ ಫಲವತ್ತಾದ ಕೆಂಪು ಭೂಮಿಯನ್ನು ಹೊಂದಿದೆ. ಈ ಗ್ರಾಮದ ಪೂರ್ವದಿಕ್ಕಿನಲ್ಲಿ ಮತ್ತು ದಕ್ಷಿಣ ದಿಕ್ಕಿನಲ್ಲಿ ಎರಡು ಕೆರೆಗಳಿವೆ. ಚಿಕ್ಕ ಹಳ್ಳಗಳು ಮಳೆಗಾಲದಲ್ಲಿ ಹರಿಯುತ್ತವೆ. ಇತ್ತೀಚೆಗೆ ಕೈಗೊಂಡ ಕ್ಷೇತ್ರ ಕಾರ್ಯದಲ್ಲಿ ಸೂಕ್ಷ್ಮ ಶಿಲಾಯುಗ ಮತ್ತು ನೂತನ ಶಿಲಾಯುಗದ ಆಯುಧ ಮತ್ತು ಉಪಕರಣಗಳು ದೊರೆತಿರುವುದರಿಂದ ಅಮ್ಮನಘಟ್ಟ ಗ್ರಾಮದ ಸುತ್ತಮುತ್ತಲಿನ ಪರಸರವು ವಾಸಕ್ಕೆ ಯೋಗ್ಯವಾದ ನೆಲೆಗಳಾಗಿದ್ದವು ಎಂಬುದು ಸಂಶೋಧನೆಯಿಂದ ತಿಳಿದು ಬಂದಿದೆ.

ಸೂಕ್ಷ್ಮ ಶಿಲಾಯುಗ ಸಂಸ್ಕೃತಿ (ಕ್ರಿ.ಪೂ. 20,000–10,000) ಸೂಕ್ಷ್ಮಶಿಲಾಯುಗವು ಹಳೆ ಶಿಲಾಯುಗ ಮತ್ತು ನೂತನ ಶಿಲಾಯುಗಗಳ ನಡುವಿನ ಕಾಲಘಟ್ಟಕ್ಕೆ ಸೇರಿದ್ದಾಗಿದೆ. ಇದು ಹಳೆ ಶಿಲಾಯುಗಕ್ಕಿಂತ ಮುಂದುವರಿದಿತ್ತು. ಇದರ ಕಾಲಾವಧಿ ಅತ್ಯಲ್ಪದ್ದಾಗಿದೆ. ಬೇಟೆಗಾರಿಕೆ, ಮೀನು ಹಿಡಿಯುವುದು, ಆಹಾರ ಸಂಗ್ರಹಿಸುವುದು ಮತ್ತು ಆಹಾರ ಉತ್ಪಾದನೆಯ ಸ್ಪಷ್ಟತೆ ಇದ್ದುದರಿಂದ ಇದನ್ನು ಒಂದು ವಿಶಿಷ್ಟ ಸಂಪ್ರದಾಯ ಎಂದು ಕರೆಯಲಾಗಿದೆ.

ಈ ಸಂಸ್ಕೃತಿಯ ಜನರು ಮುಂಗಾರು ಹವಾಮಾನದ ಯೋಗ್ಯವಾದ ಭೂಸ್ತರ ರಚನೆ, ಸಮವಾಗಿ ಹಬ್ಬಿದ ಭೂಮಿಯುಳ್ಳ ಪ್ರದೇಶಗಳಲ್ಲಿ ವಾಸಿಸಲು ಇಚ್ಚಿಸುತ್ತಿದ್ದರು. ಇದನ್ನು ಗಮನಿಸಿದಾಗ ಈ ಪರಿಸರವು ಈ ಸಂಸ್ಕೃತಿಯ ಜನರ ವಾಸಕ್ಕೆ ಯೋಗ್ಯವಾಗಿತ್ತೆಂದು ತಿಳಿಯುತ್ತದೆ. ಗುಬ್ಬಿ ತಾಲೂಕಿನಲ್ಲಿ ಈಗಾಗಲೇ ಕೆ.ಬಿ. ಶಿವತಾರಕ್‌ರವರು 24 ಸ್ಥಳಗಳಲ್ಲಿ ಸೂಕ್ಷ್ಮ ಶಿಲಾಯುಗದ ಉಪಕರಣಗಳನ್ನು ಶೋಧಿಸಿದ್ದಾರೆ. ಅಮ್ಮನಘಟ್ಟದಲ್ಲಿ ದೊರೆತ ಉಪಕರಣಗಳನ್ನು ಗಮನಿಸಿದರೆ ನೂತನ ಶಿಲಾಯುಗ ಸಂಸ್ಕೃತಿಯೊಂದಿಗೆ ಹೊಂದಿರುವ ಸಂಬಂಧವೂ ತಿಳಿಯುತ್ತದೆ. ಅಂದಿನ ಮಾನವ ಈ ಪರಿಸರದಲ್ಲಿಯೂ ಮುಂದುವರಿದಿರುವುದನ್ನು ಕಾಣಬಹುದು. ಇಲ್ಲಿ ದೊರೆತಿರುವ ಸೂಕ್ಷ್ಮ ಶಿಲಾಯುಗದ ಆಯುಧಗಳನ್ನು (quartz) ಬೆಣಚುಕಲ್ಲು ಮತ್ತು (chert) ಸ್ಪಟಿಕ ಶಿಲೆಗಳನ್ನು ಬಳಸಿ ತಯಾರಿಸಲಾಗಿದೆ. ಇವುಗಳನ್ನು ಗಮನಿಸಿದಾಗ ಸುಮಾರು 06 ಕಿ.ಮೀ. ದೂರದಲ್ಲಿರುವ ಮೂಗನಾಯಕನ ಕೋಟೆ ಗುಡ್ಡವೂ ಆಯುಧದ ಉದ್ಯಮವಾಗಿದ್ದು ಅಲ್ಲಿಂದ ಆದಿ ಮಾನವ ಇಲ್ಲಿಗೆ ತಂದು ಬಳಸಿರುವಂತೆ ಗೋಚರಿಸುತ್ತದೆ.

ಇಲ್ಲಿ ದೊರೆತಿರುವ ವಿವಿಧ ಮಾದರಿಯ ಉಪಕರಣಗಳೆಂದರೆ ಮೂಲಶಿಲಾಗಟ್ಟಿ, ನೀಳಚಕ್ಕೆ, ಮೊನೆಮಾದರಿ, ಹೆರೆಚಕ್ಕೆ, ಬಾಣದ ಮೊನೆಗಳಂತಹ ಆಯುಧಗಳು ದೊರೆತಿವೆ. ಇಲ್ಲಿ ದೊರೆತಿರುವ ಆಯುಧಗಳಿಂದ ಜನರ ಆಯುಧ ತಯಾರಿಕಾ ತಾಂತ್ರಿಕತೆಯೂ ವಿಶಿಷ್ಟವಾಗಿತ್ತೆಂದು ತಿಳಿಯುವುದರೊಂದಿಗೆ ಈ ಪರಿಸರ ಶಿಲಾಯುಗದ ಮಾನವನ ಸಂಸ್ಕೃತಿಗೆ ಆಯಕಟ್ಟಿನ ಪ್ರದೇಶವಾಗಿತ್ತೆಂದು ತಿಳಿಯುತ್ತದೆ. ಇಲ್ಲಿ ದೊರೆತಿರುವ ವಿವಿಧ ಉಪಕರಣಗಳ ವೈಜ್ಞಾನಿಕ ಅಧ್ಯಯನ, ಉಪಕರಣಾ ತಯಾರಿಕಾ ವಿಧಾನ, ಅವುಗಳನ್ನು ಬಳಸಲು ಕೈಗೊಂಡ ಕಾರ್ಯತತ್ಪರತೆಗಳಿಂದ ಮನುಷ್ಯ ತನ್ನ ಜೀವನಕ್ಕೆ ಪೂರಕವಾಗುವಂತಹ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ವಿವಿಧ ಮಾದರಿಯ ಉಪಕರಣಗಳನ್ನು ತಯಾರಿಸಿಕೊಂಡು ತನ್ನ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಪ್ರಯತ್ನ ನಡೆಸಲಾಗಿದೆ. ಇದೇ ಪರಿಸರದಲ್ಲಿ ಮುಂದಿನ ಹಂತಕ್ಕೆ ಮಾರ್ಪಾಟುಗಳನ್ನು ಮಾಡುತ್ತಾ ಬಂದಿರುವ ಅಂಶಗಳನ್ನು ಗಮನಿಸಬಹುದಾಗಿದೆ.

ನೂತನ ಶಿಲಾಯುಗ (ಕ್ರಿ.ಪೂ.10,000–3000) ನೂತನ ಶಿಲಾಯುಗ ಸಂಸ್ಕೃತಿಯನ್ನು ಶಿಲಾಯುಗ ಸಂಸ್ಕೃತಿಯ ಕ್ರಾಂತಿಯುಗ ಎಂದೇ ಪರಿಗಣಿಸಲಾಗಿದೆ. ಏಕೆಂದರೆ ಮಾನವ ಒಂದು ಕಡೆ ನೆಲೆ ನಿಂತು ಕೃಷಿ ಪಶುಸಂಗೋಪನೆಯಲ್ಲಿ ತೊಡಗಿ ಉಜ್ಜಿ ನಯಗೊಳಿಸಿದ ಉಪಕರಣಗಳನ್ನು ತಯಾರಿಸಿಕೊಂಡಂತಹ ಸಾಂಸ್ಕೃತಿಕ ಹಂತವಾಗಿದೆ. ಈ ಹಿಂದೆ ಕೆ.ಬಿ. ಶಿವತಾರಕ್‌ರವರು ಗುಬ್ಬಿ ತಾಲೂಕು ಪರಿಸರದಲ್ಲಿ ಕೈಮರ ಮತ್ತು ಹೂವಿನಕಟ್ಟೆ ಎರಡು ನೂತನ ಶಿಲಾಯುಗದ ನೆಲೆಗಳನ್ನು ಗುರುತಿಸಿದ್ದರು. ಇದನ್ನು ಹೊರತುಪಡಿಸಿದರೆ ನೂತನ ಶಿಲಾಯುಗದ ಉಪಕರಣ ಪತ್ತೆಯಾಗಿರುವ ಮತ್ತೊಂದು ನೆಲೆಯೇ ಅಮ್ಮನಘಟ್ಟ ಗ್ರಾಮವಾಗಿದೆ.

ನೂತನ ಶಿಲಾಯುಗ ಸಂಸ್ಕೃತಿಯ ಶಿಲೋಪಕರಣಗಳು ವೈವಿಧ್ಯತೆಯಿಂದ ಕೂಡಿವೆ. ದಿನನಿತ್ಯದ ಕೆಲಸಗಳಿಗೆ ಕಲ್ಲಿನ ಉಪಕರಣ ಬಳಸುತ್ತಿದ್ದರು. ತ್ರಿಕೋನಾಕಾರದ ಕೊಡಲಿ, ಬಾಚಿ, ಉಳಿ, ಸುತ್ತಿಗೆ, ಕೊಡಲಿ ಸುತ್ತಿಗೆ, ಅರೆಯುವಕಲ್ಲು ಅಥವಾ ಉಜ್ಜುಗ, ಕವಣೆಕಲ್ಲು, ಉಂಗುರಕಲ್ಲು ಮುಂತಾದವನ್ನು ಬಳಸುತ್ತಿದ್ದರು. ಇಂತಹ ಉಪಕರಣ ತಯಾರಿಸಲು ಡೈಕ್ ಮತ್ತು ಡೋಲರೈಟ್ ಕಣಶಿಲೆ ಬಳಸುತ್ತಿದ್ದರು. ವಿವಿಧ ತಾಂತ್ರಿಕ ವಿಧಾನಗಳನ್ನು ಬಳಸಿ ಉಪಕರಣಗಳನ್ನು ಸಿದ್ಧಗೊಳಿಸಲಾಗುತ್ತಿತ್ತು. ಆಯ್ದ ಕಲ್ಲಿನಿಂದ ದಪ್ಪವಾದ ಚಕ್ಕೆಗಳನ್ನೆಬ್ಬಿಸಿ ನಿಶ್ಚಿತ ರೂಪಕ್ಕೆ ತಂದು ಸಣ್ಣ ಚಕ್ಕೆಗಳನ್ನು ತೆಗೆದು ಸಮತಲ ಮಾಡುವುದು ಇದಕ್ಕೆ ಕಲ್ಲು ಸುತ್ತಿಗೆ ಮತ್ತು ಮರದ ಇಲ್ಲವೇ ಮೂಳೆಯ ಸುತ್ತಿಗೆಯನ್ನು ಬಳಸಿ ನಿಯಮಿತ ಕೇಂದ್ರೀಕೃತ ಬಲ ಪ್ರಯೋಗ ವಿಧಾನ ಉಪಯೋಗಿಸುತ್ತಿದ್ದರು. ನಿಶ್ಚಿತ ರೂಪಕ್ಕೆ ತಂದ ನಂತರ ಆಯುಧಗಳನ್ನು ತಿಕ್ಕಿ ತಿಕ್ಕಿ ಉಜ್ಜಿ ನಯಗೊಳಿಸುವುದು, ಇಂತಹ ಉಪಕರಣಗಳು ಸಾಮಾನ್ಯವಾಗಿ ತ್ರಿಭುಜಾಕಾರದಲ್ಲಿರುತ್ತವೆ. ಇವುಗಳ ಜೊತೆಗೆ ಸೂಕ್ಷ್ಮ ಚಕ್ಕೆ ಕಲ್ಲಿನ ಉಪಕರಣ ಬಳಕೆಯಲ್ಲಿತ್ತು. ಸೂಕ್ಷ್ಮ ಶಿಲಾಯುಗದ ಉಪಕರಣಗಳು, ಸೂಕ್ಷ್ಮ ಶಿಲಾ ಸಂಸ್ಕೃತಿಯ ಮುಂದುವರೆದ ಭಾಗವಾಗಿ ನೂತನ ಶಿಲಾ ಸಂಸ್ಕೃತಿಯ ಉಪಕರಣವು ಅಮ್ಮನಘಟ್ಟದಲ್ಲಿ ತಳವಾರಿಕೆ ಕೆಲಸ ನಿರ್ವಹಿಸುವ ಗೋವಿಂದಯ್ಯನವರಿಗೆ ನೀಡಿರುವ ಸರ್ವೇ ನಂ. 159ರ ಇನಾಂ ಭೂಮಿಯಲ್ಲಿ ನೂತನ ಶಿಲಾಯುಗದ ಕೈಗೊಡಲಿ ಪತ್ತೆಯಾಗಿದ್ದು ಡೋಲರೈಟ್ ಶಿಲೆಯಿಂದ ತಯಾರಿಸಲಾಗಿದ್ದು ಬೂದು ಬಣ್ಣದಿಂದ ಕೂಡಿದೆ. ಗಡುಸಾದ, ಭಾರವಾದ, ತ್ರಿಕೋನಾಕಾರದ ಕೊಡಲಿಯು 21 ಸೆಂ.ಮೀ. ಉದ್ದ ಮತ್ತು 7.5 ಸೆಂ.ಮೀ. ಅಗಲವಾಗಿದೆ. ಈ ಕೊಡಲಿಯ ಒಂದು ಭಾಗ ಚೂಪಾಗಿದ್ದರೆ ಮತ್ತೊಂದು ಭಾಗವನ್ನು ಉಜ್ಜಿ ನಯಗೊಳಿಸಿರುವುದರಿಂದ ಹರಿತವಾಗಿದೆ.[2]

ಈ ಕೊಡಲಿ ಪತ್ತೆಯಾದ ಸಮೀಪದಲ್ಲಿಯೇ ಶಿವರುದ್ರಯ್ಯನವರಿಗೆ ಸೇರಿರುವ ಜಮೀನಿನಲ್ಲಿ ಈ ಆಯುಧವನ್ನು ಉಜ್ಜಿ ನಯಗೊಳಿಸಲು ಬಳಸಿರುವ ಒಂದು ಸಾಣೆಕಲ್ಲು ಕೂಡ ಪತ್ತೆಯಾಗಿದೆ. ಶಿಲಾಕೊಡಲಿಯನ್ನು ಮರಗೆಲಸ, ಕೃಷಿ ಕೆಲಸಗಳಿಗೆ, ಸಣ್ಣ ಸಣ್ಣ ಗಿಡ ಮರ ಕತ್ತರಿಸಲು ಬಳಸಿರಬಹುದು ಎಂದು ತಿಳಿಯುತ್ತದೆ. ಈ ಅಂಶಗಳನ್ನು ಗಮನಿಸಿದಾಗ ಅಮ್ಮನಘಟ್ಟ ಗ್ರಾಮವು ಪ್ರಾಗೈತಿಹಾಸಿಕ ಸಂಸ್ಕೃತಿಯ ಜೊತೆ ಸಂಬಂಧ ಬೆಸೆದುಕೊಂಡಿರುವುದು ತಿಳಿಯುತ್ತದೆ.

## ಮೂಗನಾಯಕನ ಕೋಟೆ

ಮೂಗನಾಯಕನ ಕೋಟೆ ಗ್ರಾಮವು ಗುಬ್ಬಿ ತಾಲೂಕಿನ ನಿಟ್ಟೂರು ಹೋಬಳಿ ವ್ಯಾಪ್ತಿಯಲ್ಲಿದೆ. ಇದು ತಾಲೂಕು ಕೇಂದ್ರದಿಂದ 19 ಕಿ.ಮೀ. ದೂರದಲ್ಲಿದೆ. ಈ ಗ್ರಾಮದ ಪಶ್ಚಿಮ ಮತ್ತು ವಾಯುವ್ಯ ದಿಕ್ಕಿನ ಭಾಗ ಆದಿ ಮಾನವನ ವಾಸಸ್ಥಾನವಾಗಿತ್ತೆಂದು ತಿಳಿಯುತ್ತದೆ. ಭೂ ಭಾಗ ಬಯಲು ನಾಡಿನಿಂದ ಕೂಡಿದ್ದು ಮರಳು ಮಿಶ್ರಿತ ಕೆಂಪು ಭೂಮಿಯನ್ನು ಹೊಂದಿದೆ. ಭೂಮಿಯಲ್ಲಿ ಹೆಚ್ಚು ಸಣ್ಣ ಸಣ್ಣ ಕಲ್ಲುಗಳು ಕಂಡು ಬಂದರೆ ವಾಯುವ್ಯ ಭಾಗದಲ್ಲಿ ಉದ್ದವಾದ ಗುಡ್ಡದ ಸಾಲು ಇದೆ. ಇದನ್ನು ಕೋಟೆಗುಡ್ಡ ಎಂದೇ ಕರೆಯಲಾಗುತ್ತದೆ. ಗುಡ್ಡದ ಸಮೀಪದಲ್ಲಿ ನೀರು ಹರಿಯುವ ಹಳ್ಳಗಳಿವೆ. ಮಳೆಗಾಲದಲ್ಲಿ ಹೆಚ್ಚೆಚ್ಚು ನೀರು ತುಂಬಿ ಹರಿದು ಆ ಹಳ್ಳಗಳು ದೊಡ್ಡ ಹಳ್ಳಗಳಾಗಿ ಪರಿವರ್ತನೆ ಹೊಂದಿ ಬಳಪದ ಕಲ್ಲುಗಳು ಸವೆದು ಹೋಗಿವೆ. ಈ ಪರಿಸರದಲ್ಲಿ ಗುಡ್ಡದ ಪೂರ್ವ ದಿಕ್ಕಿನಲ್ಲಿ ಮತ್ತು ಪಶ್ಚಿಮ ದಿಕ್ಕಿನಲ್ಲಿ ಕೆರೆಗಳಿವೆ. ಇಂತಹ ಉದ್ದವಾದ ಗುಡ್ಡದ ಸಾಲಿನಲ್ಲಿ ಯಥೇಚ್ಛವಾಗಿ ಬಳಪದ ಕಲ್ಲು, ಹೆಚ್ಚು ಗಟ್ಟಿಯಾಗಿಲ್ಲದ ಕಪ್ಪುಕಲ್ಲು, ಬೆಣಚುಕಲ್ಲು ಸ್ಫಟಿಕಶಿಲೆ, ಮತ್ತು ಹಾಲು ಬಣ್ಣದ ಬೆಣಚುಕಲ್ಲು, ಅದಿರುಯುಕ್ತ ಕಪ್ಪುಶಿಲೆ ಹಾಗೂ ಡಾಲರೈಟ್ ಶಿಲಾ ಮಾದರಿಗಳು ದೊರೆಯುತ್ತವೆ. ಇಂತಹ ಉತ್ತಮವಾದ ಭೌಗೋಳಿಕ ಪರಿಸರ ಆದಿ ಮಾನವರ ವಾಸಸ್ಥಾನವಾಗಿತ್ತೆಂದು ತಿಳಿಯುತ್ತದೆ. ಇಲ್ಲಿ ಆಯುಧಗಳನ್ನು ತಯಾರಿಸಲು ಯೋಗ್ಯ ಮಾದರಿಯ ಶಿಲೆ ದೊರೆಯುತ್ತಿದ್ದರಿಂದ ಕೈಗಾರಿಕಾ ಉದ್ಯಮವನ್ನಾಗಿ ಮಾಡಿಕೊಂಡಿದ್ದರೆಂದು ತಿಳಿದು ಬರುತ್ತದೆ.

ಮೂಗನಾಯಕನ ಕೋಟೆ ಇತಿಹಾಸದಲ್ಲಿ ಹೆಚ್ಚು ಮಹತ್ವ ಪಡೆದಿದೆ. ಬಿದರೆ ಸೀಮೆಯ ಒಂದು ಗ್ರಾಮವಾಗಿದ್ದು ಮೂಗನಾಯಕ ಎಂಬ ಪಾಳೆಯಗಾರನ ಪಾಳೆಯಪಟ್ಟಾಗಿದ್ದಿತು. ಪ್ರಸಿದ್ಧ ವ್ಯಾಪಾರ ಕೇಂದ್ರವಾಗಿದ್ದು ಮೂಗನಾಯಕ ಸುತ್ತಲೂ ಕೋಟೆಯನ್ನು ಕಟ್ಟಿದಂತೆ ತಿಳಿದರೂ ಯಾವುದೇ ಕುರುಹುಗಳಿಲ್ಲ. ಇದು ಇತ್ತೀಚಿನ ವಸತಿ ನೆಲೆ ಮಾತ್ರವಾಗಿರದೆ ಆದಿ ಕಾಲದಿಂದಲೂ ಆವಾಸ ಸ್ಥಾನವಾಗಿತ್ತು.

ಶಿಲಾಯುಗ ಸಂಸ್ಕೃತಿಯಲ್ಲೇ ಕ್ರಾಂತಿಕಾರಿ ಯುಗ ಎಂದೇ ಪರಿಗಣಿಸಲ್ಪಟ್ಟಿರುವ ನೂತನ ಶಿಲಾಯುಗದ ಅವಶೇಷಗಳು ನನ್ನ ಕ್ಷೇತ್ರಕಾರ್ಯದಲ್ಲಿ ಪತ್ತೆಯಾಗಿವೆ. ಆದಿ ಶಿಲಾಯುಗದ ಜನರು ಉಪಯೋಗಿಸುತ್ತಿದ್ದ ಭಾರವಾದ ಆಯುಧಗಳಿಗಿಂತ ಭಿನ್ನವಾಗಿದ್ದು ಸಂಘಟಿತ ಸಮಾಜದ ಪ್ರಾರಂಭವನ್ನು ಕಾಣಬಹುದು. ಈ ಸಂಸ್ಕೃತಿಯಲ್ಲಿ ಸುಟ್ಟ ಜಿಗುಟು ಮಣ್ಣಿನ ಉಪಕರಣಗಳು ಸುಟ್ಟ ಅಥವಾ ಬಿಸಿಲಿನಿಂದ ಒಣಗಿದ ಇಟ್ಟಿಗೆಗಳ ಉಪಯೋಗ ಕಂಡುಬರುತ್ತವೆ. ಸೂಕ್ಷ್ಮ ಶಿಲಾಯುಧಗಳ ಜೊತೆಗೆ ಅಲಗಿನ ಉಪಯೋಗ ಮುಂದುವರಿದವು. ತಾಮ್ರ ಅಥವಾ ಕಂಚಿನ ಆಯುಧಗಳ ಉಪಯೋಗವು ಇದ್ದಿತು.

ಈ ಸಂಸ್ಕೃತಿಯ ಜನರನ್ನು ಅವರು ಉಪಯೋಗಿಸುತ್ತಿದ್ದ ವಸ್ತುಗಳ ಮೇಲೆ ಗುರುತಿಸಲಾಗಿದೆ. ನೂತನ ಶಿಲಾಯುಗ ಸಂಸ್ಕೃತಿಗೆ ಸಂಬಂಧಿಸಿದ ಶೋಧನೆಗಳು ಕರ್ನಾಟಕದಲ್ಲಿ 1832ರಲ್ಲಿ ಆರಂಭವಾದವು. ಫ್ರೇಸರ್‌ರವರು ಬಳ್ಳಾರಿ ಜಿಲ್ಲೆ ಕಪ್ಪಗಲ್ಲು ಬೆಟ್ಟದಲ್ಲಿ ನೂತನ ಶಿಲೋಪಕರಣ ಹಾಗೂ ವಾಸ್ತವ್ಯದ ನೆಲೆಯನ್ನು ಗುರುತಿಸಿದರು.[3] ರಾಬರ್ಟ್ ಬ್ರೂಸ್‌ಪೂಟ್‌ರವರು ಕೋಲಾರ ಜಿಲ್ಲೆ ಶ್ರೀನಿವಾಸಪುರ ಮತ್ತು ಬೀರಮಂಗಲ, ಮೈಸೂರು ಜಿಲ್ಲೆಯ ಲಕ್ಷ್ಮಾಪುರ ಮತ್ತು ತಿ.ನರಸೀಪುರ ಮುಂತಾದ ಕಡೆಗಳಲ್ಲಿ ನೂತನ ಶಿಲಾಯುಗದ ಕುರುಹುಗಳನ್ನು ಬೆಳಕಿಗೆ ತಂದರು. ತುಮಕೂರು ಜಿಲ್ಲೆಯಲ್ಲಿ 88 ನೂತನ ಶಿಲಾಯುಗದ ನೆಲೆಗಳನ್ನು ಗುರುತಿಸಲಾಗಿದೆ. ನೂತನ ಶಿಲಾಯುಗದ ನೆಲೆಗಳು ಮತ್ತು ಉಪಕರಣಗಳನ್ನು ಶೋಧಿಸುವಲ್ಲಿ ಕೆ.ಬಿ.ಶಿವತಾರಕ್‌ರವರ ಪಾತ್ರ ಪ್ರಮುಖವಾಗಿದೆ. ಇವರು ಗುಬ್ಬಿ ತಾಲೂಕಿನ ಕೈಮರ ಮತ್ತು ಹೂವಿನಕಟ್ಟೆ ಎಂಬ ಎರಡು ನೂತನ ಶಿಲಾಯುಗದ ನೆಲೆಗಳೆಂದು ಗುರುತಿಸಿದ್ದಾರೆ.

ಮೂಗನಾಯಕನ ಕೋಟೆ ಪ್ರದೇಶದಲ್ಲಿ 1992–93ರಲ್ಲಿ ನಡೆಸಿದ ಪುರಾತತ್ವ ಸರ್ವೇಕ್ಷಣೆಯ ಫಲವಾಗಿ ಹಳೇ ಶಿಲಾಯುಗ ಮತ್ತು ಸೂಕ್ಷ್ಮ ಶಿಲಾಯುಗದ ಅವಶೇಷಗಳು ದೊರೆತಿದ್ದು ಈ ಪ್ರದೇಶವೂ ಆದಿ



ಶಿಲಾಕೊಡಲಿ



ಸಾಣೆಕಲ್ಲು

ಅಮ್ಮನಘಟ್ಟದಲ್ಲಿ ನೂತನ ಶಿಲಾಯುಗದ ಶಿಲಾಕೊಡಲಿ ಮತ್ತು ಆಯುಧಗಳನ್ನು ಹರಿತಗೊಳಿಸಲು ಬಳಸಿರುವ ಸಾಣೆಕಲ್ಲು



ಶಿಲಾಕೊಡಲಿ



ಶಿಲಾಕೊಡಲಿ ಮತ್ತು ಕವಣೆಕಲ್ಲುಗಳು

ಮೂಗನಾಯಕನ ಕೋಟೆ ಗ್ರಾಮದಲ್ಲಿ ದೊರೆತ ನೂತನ ಶಿಲಾಯುಗದ ಶಿಲಾಕೊಡಲಿಗಳು ಮತ್ತು ಕವಣೆಕಲ್ಲುಗಳು

ಮಾನವನ ವಾಸಸ್ಥಾನವಾಗಿತ್ತೆಂದು ಮತ್ತು ಆಯುಧ ತಯಾರಿಕೆಯ ಉದ್ಯಮವಾಗಿತ್ತೆಂದು ತಿಳಿದು ಬರುತ್ತದೆ. ಬಹುಸಂಖ್ಯೆಯಲ್ಲಿ ಹೆಚ್ಚು ನಿರುಪಯುಕ್ತ ವಸ್ತುಗಳು ದೊರೆಯುತ್ತವೆ.[4]

ಸೂಕ್ಷ್ಮಶಿಲಾಯುಗದ ಮುಂದುವರಿದ ಭಾಗವಾಗಿ ನೂತನ ಶಿಲಾಯುಗದ ಅವಶೇಷಗಳು ಕ್ಷೇತ್ರಕಾರ್ಯದಲ್ಲಿ ದೊರೆತಿವೆ. ಇದರಿಂದ ಗುಬ್ಬಿ ತಾಲೂಕಿನ ನಾಲ್ಕನೇ ನೂತನ ಶಿಲಾಯುಗದ ನೆಲೆ ಮೂಗನಾಯಕನ ಕೋಟೆಯಾಗಿದೆ. ಇದೇ ಸಂಸ್ಕೃತಿಯ ಉಂಗುರಾಕಾರದ ಉಪಕರಣವನ್ನು ಹಿಂದೆ ಶಿವತಾರಕ್‌ರವರು ಗುರುತಿಸಿದ್ದರು.

ಮೂಗನಾಯಕನ ಕೋಟೆಯ ಸರ್ವೇ ನಂಬರ್5 ರಲ್ಲಿ ಗ್ರಾಮಠಾಣಾ ಪ್ರದೇಶದಲ್ಲಿರುವ ಚಿಕ್ಕದಾದ ಆಂಜನೇಯ ದೇವಾಲಯದ ಎದುರಿಗಿರುವ ಹುಣಸೆಮರದ ಅಡಿಯಲ್ಲಿ ನೂತನ ಶಿಲಾಯುಗದ ಕೊಡಲಿಯು ಪತ್ತೆಯಾಯಿತು. ಇದು 9 ಸೆಂ.ಮೀ. ಉದ್ದವಾಗಿದ್ದು 4.5 ಸೆಂ.ಮೀ. ಅಗಲವಾಗಿದೆ. ಗಡುಸಾದ ಈ ಉಪಕರಣದ ಒಂದು ಭಾಗ ಚೂಪಾಗಿದ್ದು ಮತ್ತೊಂದು ಭಾಗ ಉಜ್ಜಿ ನಯಗೊಳಿಸಿರುವುದರಿಂದ ಹರಿತವಾಗಿದೆ. ಈ ಉಪಕರಣದ ತಯಾರಿಕೆಗೆ ಬೂದು ಬಣ್ಣದ ಡಾಲರೈಟ್ ಶಿಲೆ ಬಳಸಲಾಗಿದ್ದು ತ್ರಿಕೋನಾಕಾರಾದಲ್ಲಿದೆ. ಆಯುಧ ತಯಾರಿಕೆಗೆ ಬಳಸಿರುವ ಕಲ್ಲಿನಲ್ಲಿ ಕಬ್ಬಿಣಾಂಶ ಒಳಗೊಂಡಿರುವ ಚಿಕ್ಕ ಚಿಕ್ಕ ಗುರುತುಗಳಿವೆ. ಆಯುಧದ ಒಂದು ಬದಿಯಲ್ಲಿ ಚಕ್ಕೆ ಎದ್ದಿರುವ ಗುರುತುಗಳನ್ನು ಗಮನಿಸಿದಾಗ ಆಯ್ದ ಕಲ್ಲಿನ ಮೇಲ್ಮೈನಿಂದ ದಪ್ಪ ಚಕ್ಕೆ ಎಬ್ಬಿಸಿ ನಿಶ್ಚಿತ ಆಕಾರಕ್ಕೆ ತಂದು ಸಣ್ಣ ಸಣ್ಣ ಚಕ್ಕೆಗಳನ್ನು ಎಬ್ಬಿಸಿ ಮೇಲ್ಮೈಯನ್ನು ಸಮತಲ ಮಾಡಲಾಗಿದೆ.

ಈ ಉಪಕರಣವನ್ನು (ಕೊಡಲಿಯನ್ನು) ಮರಗೆಲಸ ಮತ್ತು ಕೃಷಿ ಕೆಲಸಗಳಿಗೆ ಉಪಯೋಗಿಸಿರಬಹುದು. ಮರದ ಹಿಡಿಕೆಗೆ ಸೇರಿಸಿ ಸಣ್ಣ ಸಣ್ಣ ಗಿಡಮರಗಳನ್ನು ಕತ್ತರಿಸಲು ಬಳಸಿರಬಹುದು[5] ಎಂದು ತಿಳಿಯುತ್ತದೆ.

ಇದೇ ಸರ್ವೇ ನಂಬರ್ ಜಮೀನಿನಲ್ಲಿ ಮತ್ತೊಂದು ಶಿಲಾ ಕೈಗೊಡಲಿ ದೊರೆತಿದ್ದು 19 ಸೆಂ.ಮೀ. ಉದ್ದವಾಗಿದ್ದು 6.5 ಸೆಂ.ಮೀ. ಅಗಲವಾಗಿದೆ. ಗಡುಸಾದ ಈ ಉಪಕರಣದ ಒಂದು ಭಾಗ ಚೂಪಾಗಿದ್ದು ಮತ್ತೊಂದು ಭಾಗ ಉಜ್ಜಿ ನಯಗೊಳಿಸಿರುವುದರಿಂದ ಹರಿತವಾಗಿದೆ. ಹರಿತವಾಗಿರುವ ಭಾಗದಲ್ಲಿ ಸ್ವಲ್ಪ ಭಾಗ ತುಟಿತಗೊಂಡಿದೆ. ಈ ಉಪಕರಣದ ತಯಾರಿಕೆಗೆ ಬೂದು ಬಣ್ಣದ ಡಾಲರೈಟ್ ಶಿಲೆ ಬಳಸಲಾಗಿದ್ದು ತ್ರಿಕೋನಾಕಾರದಲ್ಲಿದೆ. ಇದೇ ಪರಿಸರದಲ್ಲಿ ಚರ್ಟ್ ಮತ್ತು ಕ್ವಾರ್ಟ್ಜೈಟ್ ಶಿಲೆಯಿಂದ ತಯಾರಿಸಿರುವ ದುಂಡಾಗಿರುವ ಕವಣೆ ಕಲ್ಲುಗಳು ದೊರೆತಿವೆ. ಇವುಗಳನ್ನು ತಾನು ಬೆಳೆದ ಬೆಳೆಗಳನ್ನು ಪಕ್ಷಿಗಳಿಂದ ರಕ್ಷಿಸಲು ಬಳಸಲಾಗುತ್ತಿತ್ತೆಂದು ತಿಳಿಯುತ್ತದೆ.

### ಜೋಗಿಹಳ್ಳಿ

ಜೋಗಿಹಳ್ಳಿ ಗ್ರಾಮವು ಗುಬ್ಬಿ ತಾಲೂಕು ಚೇಳೂರು ಹೋಬಳಿಯ ಚೇಳೂರು ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿದೆ. ಇದರ ಪಕ್ಕದಲ್ಲಿ ಗುಡ್ಡ ಪ್ರದೇಶ ಇರುವುದರಿಂದ ಗುಡ್ಡದ ಜೋಗಿಹಳ್ಳಿ ಎಂದು ಕರೆಯುವುದುಂಟು. ಜೋಗಿಹಳ್ಳಿ ಗ್ರಾಮದ ಪೂರ್ವ ದಿಕ್ಕಿಗೆ ಸುಮಾರು ಒಂದೂವರೆ ಕಿ.ಮೀ. ದೂರದಲ್ಲಿ ಕಲ್ಲು ಬಂಡೆ, ಗುಂಡುಗಳ ಸಮೂಹವಿದೆ ಮತ್ತು ನೀರು ಹರಿಯುವ ಹಳ್ಳಗಳಿವೆ. ಇಲ್ಲಿ ಕಂಡು ಬರುವ ಕಲ್ಲು ಬಂಡೆಗಳು ಗ್ರಾನೈಟ್ ಶಿಲಾವರ್ಗಕ್ಕೆ ಸೇರಿದ್ದು ಸುತ್ತಮುತ್ತಲ ಪ್ರದೇಶದಲ್ಲಿ ಅಲ್ಲಲ್ಲಿ ಚದುರಿದಂತೆ ಬಂಡೆಗಳ ಸಮೂಹವಿದೆ. ಸರ್ವೇ ನಂಬರ್ 5ರಲ್ಲಿ ಕಂಡುಬರುವ ಕಲ್ಲು ಬಂಡೆಯನ್ನು ಸ್ಥಳೀಯರು ದೊಡ್ಡ ಬಂಡೆ ಎನ್ನುತ್ತಾರೆ. ಸುಮಾರು 15 ಅಡಿ ಎತ್ತರದ ದೊಡ್ಡ ಬಂಡೆಯ ಮೇಲೆ ಸುಮಾರು 3 ಅಡಿ ಎತ್ತರದ ದುಂಡಾದ ಹಾಸು ಬಂಡೆಯಿದೆ. ಇದನ್ನು ಕುಟ್ಟಿದರೆ ಠಣ್, ಠಣ್ ಎಂಬ ಲೋಹದ ಶಬ್ದ ಬರುತ್ತದೆ. ಇದು ಪ್ರಕೃತಿಯ ವಿಶಿಷ್ಟ ರಚನೆಯಾಗಿದೆ.

ಈ ಅಂಡಾಕಾರದ ಬಂಡೆಯ ಮೇಲೆ ಆಳವಾಗಿ ಉಜ್ಜಿ ಮೂಡಿಸಲಾದ ಬಟ್ಟಲಾಕಾರದ 11 ಕಲ್ಲುಕುಳಿಗಳು (ಕಪ್ ಮಾರ್ಕ್ಸ್) ಕ್ಷೇತ್ರಕಾರ್ಯದಲ್ಲಿ ಕಂಡು ಬಂದಿವೆ. ಸಾಮಾನ್ಯವಾಗಿ ಪ್ರಾಗೈತಿಹಾಸಿಕ ನೆಲೆಗಳಲ್ಲಿ ಇಂತಹ ಕುಳಿಗಳು ಕಂಡು ಬರುವುದು ಸಾಮಾನ್ಯವಾಗಿದೆ. ಲಕ್ಷ್ಮಣ್ ತೆಲಗಾವಿಯವರು ಚಿತ್ರದುರ್ಗ ಪರಿಸರದಲ್ಲಿನ ಕುಳಿಭರಿತ ಭೀಮನಗುಂಡನ್ನು ಅಧ್ಯಯನ ನಡೆಸಿದ್ದಾರೆ. ಪ್ರಸನ್ನಕುಮಾರ್ ರವರು ಚೇಳೂರು ಹೋಬಳಿಯ ಸಣಬನಹಳ್ಳಿಯ ಜುಂಜಪ್ಪನ ಗುಡಿಯ ಮುಂದಿನ ಹಾಸುಬಂಡೆಯಲ್ಲಿ ಕುಳಿ ಕುರುಹುಗಳನ್ನು ಗುರುತಿಸಿದ್ದಾರೆ. ಇಂತಹ ಕಲ್ಲುಕುಳಿಗಳ ರಚನೆ ಹಿನ್ನೆಲೆಯನ್ನು ಗಮನಿಸಿದಾಗ ಶಿಲಾಯುಗ ಸಂಸ್ಕೃತಿಯಲ್ಲಿ ಶಿಲೋಪರಣಗಳು ಮುಖ್ಯವಾಗಿ ಕಲ್ಲು ಕೊಡಲಿಯ ತಯಾರಿಕೆಯ ಕೊನೆಯ ಹಂತವೇ ಹೊಳಪು ನೀಡುವುದು. ಹಾಗಾಗಿ ಬಂಡೆಯ ಮೇಲೆ ಉಜ್ಜಿ ನಯಗೊಳಿಸುವ ಪ್ರಕ್ರಿಯೆ ಎನ್ನಲಾಗುತ್ತದೆ. ಶಿಲೋಪಕರಣ ಮತ್ತು ಕಲ್ಲುಕೊಡಲಿಗಳನ್ನು ಉಜ್ಜಿ ಮಸೆದು ಹರಿತಗೊಳಿಸುವ ಕಾರಣವಾಗಿಯೇ ಬಂಡೆಗಳ ಮೇಲೆ ಕುಳಿಗಳು ಉಂಟಾಗಿವೆ.[6] ಒಟ್ಟಾರೆಯಾಗಿ ಗಟ್ಟಿವಸ್ತುಗಳನ್ನು ಬಲಪ್ರಯೋಗಿಸಿ ಉಜ್ಜಿ ನಯಗೊಳಿಸುವುದರೊಡನೆ ಅದಕ್ಕೆ ನಿರ್ದಿಷ್ಟ ಆಕಾರ ಕೊಡುವ ಪ್ರಕ್ರಿಯೆಯ ಪ್ರಭಾವದಿಂದ ಇಂತಹ ಕಲ್ಲುಕುಳಿಗಳು ಆಕೃತಿ ಪಡೆದಿವೆ. ಆದಿಶಿಲಾಯುಗದ ಮಾನವರು ಕಡಿಮೆ ಶ್ರಮದಿಂದ ಉತ್ತಮ ಆಯುಧ ಉಪಕರಣಗಳನ್ನು ತಯಾರಿಸಲು ಅನುಕೂಲವಾಗುವಂತಹ ಬಿಡಿಯಾದ ಕಲ್ಲು ಬಂಡೆಗಳನ್ನು ಆಯ್ದು ಸೂಕ್ತ ರೂಪ ಕೊಡುತ್ತಿದ್ದರು. ಅದಕ್ಕೆ ಜೋಗಿಹಳ್ಳಿ ಪರಿಸರವು ಅವರಿಗೆ ಸೂಕ್ತ ಪ್ರದೇಶವಾಗಿತ್ತೆಂದು ತಿಳಿಯುತ್ತದೆ.

ಇಂತಹ ಕಲ್ಲುಕುಳಿ ಆಕೃತಿಗಳು ಯಾವುದೋ ಒಂದು ಜನಾಂಗ ಅಥವಾ ಸಾಂಸ್ಕೃತಿಕ ವಲಯಕ್ಕೆ ಸಂಬಂಧಿಸಿದ್ದೆಂದು ಭಾವಿಸಲು ಸಾಧ್ಯವಿಲ್ಲ.



ಜೋಗಿಹಳ್ಳಿಯಲ್ಲಿ ಪತ್ತೆಯಾದ ಕಲ್ಲುಳಿಗಳು



ಕಲ್ಲುಳಿಯುಳ್ಳ ದೊಡ್ಡಬಂಡೆಯ ಕೆಳಗಿನ ಕಲ್ಲಿನಾಸರೆ

ಇದಕ್ಕೆ ಪರಿಸರದಲ್ಲಿ ಸಿಕ್ಕಿರುವ ಶಿಲಾಯುಗದ ಉಪಕರಣಗಳು ಸಾಬೀತು ಪಡಿಸುತ್ತವೆ. ಅಂತ್ಯ ಹಳೆ ಶಿಲಾಯುಗ ಮತ್ತು ಸೂಕ್ಷ್ಮ ಶಿಲಾಯುಗದ ಉಪಕರಣಗಳಾದ ನೀಳಚಕ್ಕೆ, ಹೆರೆಚಕ್ಕೆ, ಮೊನೆ, ಕೊರಗ, ಕೊರೆಯುಳಿಗಳು ಅರ್ಧ ಚಂದ್ರಾಕೃತಿ ಉಪಕರಣ ಮತ್ತು ಸೂಕ್ಷ್ಮಶಿಲಾಯುಗ ಸಂಸ್ಕೃತಿಗೆ ಸಂಬಂಧಿಸಿದಂತೆ ಅರ್ಧ ಚಂದ್ರಾಕೃತಿ, ದಬ್ಬಳಗಳನ್ನು ಅದಿರುಯುಕ್ತ ಜಾಸ್ಪರ್ ಮತ್ತು ಬೆಣಚುಕಲ್ಲಿನಲ್ಲಿ[7] ಸಿದ್ಧಗೊಳಿಸಿರುವುದನ್ನು ಕೆ.ಬಿ. ಶಿವತಾರಕ್‌ರವರು ಈ ಹಿಂದೆ ಗುರುತಿಸಿದ್ದಾರೆ. ಈ ಎರಡೂ ಅಂಶಗಳನ್ನು ಗಮನಿಸಿದಾಗ ಪ್ರಾಗೈತಿಹಾಸಿಕ ಕಾಲದಲ್ಲಿ ಶಿಲೋಪಕರಣಗಳನ್ನು ತಯಾರಿಸುವ ಜನರು ವಾಸಿಸುತ್ತಿದ್ದಾರೆಂಬುದರಲ್ಲಿ ಯಾವುದೇ ಸಂಶಯವಿಲ್ಲ. ಇಲ್ಲಿ ಸಿಕ್ಕಿರುವ ಶಿಲೋಪಕರಣಗಳು ಮತ್ತು ಕಲ್ಲುಕುಳಿಗಳು ಸಾಬೀತುಪಡಿಸುತ್ತವೆ. ಪ್ರಾಗೈತಿಹಾಸಿಕ ಕಾಲದ ಮಾನವ ನಿರಂತರವಾಗಿ ನೀರಿನ ಸೌಲಭ್ಯ, ಆಹಾರ ಮತ್ತು ತಮಗೆ ಅಗತ್ಯ ಉಪಕರಣ ಸಿದ್ಧಪಡಿಸಲು ಅವಶ್ಯವಿರುವ ಶಿಲೆಗಳು ಲಭ್ಯವಿರುವ ಸ್ಥಳದಲ್ಲಿ, ಗುಡ್ಡದ ತಪ್ಪಲಿನಲ್ಲಿ ನೆಲೆಸುತ್ತಿದ್ದರು. ಅಂತಹ ಎಲ್ಲಾ ಉತ್ತಮವಾದ ವಾತಾವರಣವನ್ನು ಜೋಗಿಹಳ್ಳಿ ಪರಿಸರವೂ ಒದಗಿಸಿಕೊಟ್ಟಿದೆ. ಬಂಡೆಗಳ ಸಮೂಹ, ದಟ್ಟವಾದ ಅರಣ್ಯ, ಗುಡ್ಡದ ತಪ್ಪಲು, ನೀರಿನ ಆಸರೆ ಇತರ ಸೌಲಭ್ಯಗಳಿಂದ ಕೂಡಿರುವುದು ಗೋಚರಿಸುತ್ತದೆ. ಇತ್ತೀಚಿಗೆ ಅರಣ್ಯವನ್ನು ನಾಶ ಮಾಡಿ ಕಲ್ಲು ಬಂಡೆಗಳನ್ನು ದೂರಮಾಡಿ ಜೀವನಾಧಾರಕ್ಕೆ ತೋಟಗಳನ್ನು ನಿರ್ಮಿಸಿಕೊಳ್ಳಲಾಗಿದೆ.

ಕಲ್ಲುಕುಳಿಗಳು ಇರುವ ಕಲ್ಲುಬಂಡೆಯ ಕೆಳಗಿನ ದೈತ್ಯಾಕಾರದ ಬಂಡೆಯ ಬುಡದಲ್ಲಿ ಆರಾಮವಾಗಿ ಕುಳಿತು ಬಿಸಿಲು, ಗಾಳಿ, ಮಳೆಯಿಂದ ರಕ್ಷಿಸಿಕೊಳ್ಳಲು ಮತ್ತು ಮಾನವ ವಾಸಿಸಲು ಬಳಸುತ್ತಿದ್ದ ಕಲ್ಲಾಸರೆಯಂತಿದೆ.

## ಹೂವಿನಕಟ್ಟೆ

ಜೋಗಿಹಳ್ಳಿ ಸಮೀಪದಲ್ಲೇ ಒಂದು ಕಿ.ಮೀ. ದೂರದಲ್ಲಿ ಹೂವಿನಕಟ್ಟೆ ಗ್ರಾಮವಿದ್ದು ಆ ಪರಿಸರದಲ್ಲಿ ಒಂದು ಎತ್ತರವಾದ ಗುಡ್ಡವಿದೆ. ಈ ಪ್ರದೇಶದಲ್ಲಿ ಅಂತ್ಯ ಹಳೆ ಶಿಲಾಯುಗದ ಮತ್ತು ಸೂಕ್ಷ್ಮ ಶಿಲಾಯುಗದ ಉಪಕರಣಗಳನ್ನು ಗುರುತಿಸಲಾಗಿತ್ತು. ಈ ಗುಡ್ಡ ಪ್ರದೇಶದಲ್ಲಿ ಕೈಗೊಂಡ ಕ್ಷೇತ್ರಕಾರ್ಯದಿಂದಾಗಿ ಆದಿ ಮಾನವನ ವಾಸದ ನೆಲೆಯಾದ ಪ್ರಕೃತಿದತ್ತವಾಗಿ ನಿರ್ಮಾಣಗೊಂಡಿರುವ ಗವಿಆಸರೆ ಗುರುತಿಸಲಾಗಿದೆ. ಯಾವುದೇ ಗೀರು ಚಿತ್ರಗಳಿಲ್ಲ. ಇದ್ದರೂ ಗುರುತಿಸಲು ಸಾಧ್ಯವಿಲ್ಲ. ಸಮೀಪದಲ್ಲೇ ರಂಗನಾಥಸ್ವಾಮಿ ದೇವಾಲಯವಿರುವುದರಿಂದ ದೇವಾಲಯಕ್ಕೆ ಬಂದ ಭಕ್ತರೆಲ್ಲರೂ ಆ ಗವಿಯಲ್ಲಿ ಕರ್ಪೂರ ಹಚ್ಚಿರುವುದರಿಂದ ಯಾವುದೇ ಅಂಶಗಳು ಕಂಡುಬರುವುದಿಲ್ಲ.



ಹೂವಿನಕಟ್ಟೆಯ ಗುಡ್ಡದಲ್ಲಿನ ನೈಸರ್ಗಿಕ ಗುಹೆ

## ಉಪಸಂಹಾರ

ಈ ಮೇಲಿನ ಗ್ರಾಮಗಳಲ್ಲಿ ದೊರೆತಿರುವ ಪ್ರಾಗೈತಿಹಾಸಕಾಲದ ಶಿಲಾ ಉಪಕರಣಗಳ ಪತ್ತೆಯಿಂದಾಗಿ 4 ನೆಲೆಗಳು ಪ್ರಾಗೈತಿಹಾಸ ಕಾಲದ ಮಾನವನ ವಸತಿ ನೆಲೆಗಳು ಮತ್ತು ಪ್ರಾಗೈತಿಹಾಸ ಸಂಸ್ಕೃತಿ ಉತ್ತಮ ಸಂಬಂಧ ಬೆಳೆಸಿತ್ತು ಎಂಬುದರಲ್ಲಿ ಯಾವುದೇ ಸಂಶಯವಿಲ್ಲ ಎಂಬುದನ್ನು ಶಿಲಾಯುಗದ ಉಪಕರಣಗಳು, ಕಲ್ಲುಕುಳಿಗಳು, ಗವಿಆಸರೆ, ಬಂಡೆಯಾಸರೆಗಳು ಸಾಬೀತುಪಡಿಸಿವೆ. ಹಿಂದಿನ ಆದಿ ಹಳೆ ಶಿಲಾಯುಗದಿಂದ ಇತ್ತೀಚಿನ ನವ ಶೋಧಿತ ಸೂಕ್ಷ್ಮ ಶಿಲಾಯುಗ ಮತ್ತು ನೂತನ ಶಿಲಾಯುಗದ ಸಂಸ್ಕೃತಿವರೆಗಿನ ಅಂಶಗಳನ್ನು ಗಮನಿಸಿದಾಗ ಒಂದು ಸಂಸ್ಕೃತಿ ಮತ್ತೊಂದು ಸಂಸ್ಕೃತಿಯೊಂದಿಗೆ ನಿರಂತರವಾಗಿ ಸಂಬಂಧ ಬೆಸೆದುಕೊಂಡಿರುವುದು ತಿಳಿಯುತ್ತದೆ.

(ಕ್ಷೇತ್ರಕಾರ್ಯದಲ್ಲಿ ಸಹಕರಿಸಿದ ಡಾ. ಕೆ. ಬಿ. ಶಿವತಾರಕ್, ಎಸ್. ಈ. ನವೀನ್, ರಂಗಸ್ವಾಮಿ (ಕಲಾವಿದ), ಡಾ. ನಟರಾಜು, ಜೆ. ಆರ್. ಕಾಂತನಾಯಕ, ಅಯ್ಯಣ್ಣಾಚಾರಿಯವರಿಗೆ ಧನ್ಯವಾದಗಳು).

## ಅಡಿಟಿಪ್ಪಣಿಗಳು

1. ನಂಜುಂಡಸ್ವಾಮಿ ಬಿ. (ಲೇ)ಗೋಸಲ ಚನ್ನಬಸವೇಶ್ವರರು, ಸಿದ್ಧಲಿಂಗಪ್ಪ, ಕೆ.ಎಸ್.(ಸಂ)ಚೆನ್ನುಡಿ. 4ನೇ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ ಸ್ಮರಣ ಸಂಚಿಕೆ. ಪು.05.
2. ನವಶಿಲಾಯುಗದ ಶಿಲಾ ಕೊಡಲಿ ಪತ್ತೆ ಪ್ರಜಾವಾಣಿ 14.10.2018
3. ಬಾಲಸುಬ್ರಮಣ್ಯಂ (ಲೇ) ಕರ್ನಾಟಕದ ಪ್ರಾಗೈತಿಹಾಸ ಪರಿಚಯ ಆದಿ ಹಳೆ ಶಿಲಾಯುಗದಿಂದ ಕಬ್ಬಿಣ ಯುಗದವರೆಗೆ, ಪು.ಸಂ. 12–15
4. ಶಿವತಾರಕ್ ಕೆ.ಬಿ. (ಲೇ) ತುಮಕೂರು ಜಿಲ್ಲಾ ಪ್ರದೇಶದ ನೂತನ ಶಿಲಾಯುಗದ ಸಂಸ್ಕೃತಿ ಪು.ಸಂ. 4–8
5. ಎಂ.ಎನ್.ಕೋಟೆಯಲ್ಲಿ ಶಿಲಾಯುಗದ ಅವಶೇಷ ಪತ್ತೆ – ವಿಜಯಕರ್ನಾಟಕ, 17.09.2019
6. ಲಕ್ಷ್ಮಣ್ ತೆಲಗಾವಿ (ಲೇ) ಚಿತ್ರದುರ್ಗ ಪರಿಸರದ ಕುಳಿಭರಿತ ಭೀಮನ ಗುಂಡು:ಪುರಾತಾತ್ವಿಕ ಅಧ್ಯಯನ. ಪು.ಸಂ. 1–13
7. ಶಿವತಾರಕ್ ಕೆ.ಬಿ. ಕರ್ನಾಟಕದ ಪುರಾತತ್ವ ನೆಲೆಗಳು ಪು.ಸಂ. 278
8. ಕ್ಷೇತ್ರಕಾರ್ಯ.

## ಆಕರ ಗ್ರಂಥಗಳು


- **ಶಿವತಾರಕ್ ಕೆ.ಬಿ. (ಲೇ.)**(1994) : ಶಿಲಾಯುಗದ ನೆಲೆ–ಮೂಗನಾಯಕನಕೋಟೆ ಇತಿಹಾಸ ದರ್ಶನ ಸಂ.09.
- **ಶಿವತಾರಕ್ ಕೆ.ಬಿ. (ಲೇ.)** (2000) : ತುಮಕೂರು ಜಿಲ್ಲಾ ಪ್ರದೇಶದ ಸೂಕ್ಷ್ಮ ಶಿಲಾಯುಗ ಸಂಸ್ಕೃತಿ ಇತಿಹಾಸ ದರ್ಶನ ಸಂ. 15.
- **ಶಿವತಾರಕ್ ಕೆ.ಬಿ. (ಲೇ.)** (2001) : ತುಮಕೂರು ಜಿಲ್ಲಾ ಪ್ರದೇಶದ ನೂತನ ಶಿಲಾಯುಗ ಸಂಸ್ಕೃತಿ ಇತಿಹಾಸ ದರ್ಶನ ಸಂ. 16.
- **ಶಿವತಾರಕ್ ಕೆ.ಬಿ.** (2001) : "ಕರ್ನಾಟಕದ ಪುರಾತತ್ವ ನೆಲೆಗಳು" ಹಂಪಿ ಕನ್ನಡ ವಿಶ್ವವಿದ್ಯಾಲಯ.
- **ಶಿವತಾರಕ್ ಕೆ.ಬಿ.** (2002) : ತುಮಕೂರು ಜಿಲ್ಲೆಯ ಪ್ರಾಗೈತಿಹಾಸ – ಒಂದು ನೋಟ, ಕಲ್ಪಸಿರಿ, ಸ್ಮರಣ ಸಂಪುಟ (ಸಂ) ಡಾ.ಬಿ.ನಂಜುಂಡಸ್ವಾಮಿ, ಬೆಂಗಳೂರು ಕನ್ನಡ ಸಾಹಿತ್ಯ ಪರಿಷತ್.
- **ಸುಂದರ.ಅ (ಲೇ.)** (1997) : ಪೂರ್ವಭಾವಿ ಇತಿಹಾಸ ಹಂತದ ಸಂಸ್ಕೃತಿಗಳು (ಪ್ರ. ಸಂ.) ಬಿ.ಷೇಕ್‌ಅಲಿ (ಸಂ) ಅ.ಸುಂದರ "ಕರ್ನಾಟಕ ಚರಿತ್ರೆ" ಸಂ. 01 ಹಂಪಿ ಕನ್ನಡ ವಿಶ್ವವಿದ್ಯಾಲಯ ಹಂಪಿ.
- **ನವಶಿಲಾಯುಗದ ಶಿಲಾ ಕೊಡಲಿ ಪತ್ತೆ** : ಪ್ರಜಾವಾಣಿ 24–10–2018.
- **ಎಂ. ಎನ್. ಕೋಟೆಯಲ್ಲಿ ಶಿಲಾಯುಗದ ಅವಶೇಷ ಪತ್ತೆ** : ವಿಜಯಕರ್ನಾಟಕ 17–09–2019.
- **ಬಾಲಸುಬ್ರಹ್ಮಣ್ಯ (ಲೇ.)** (2002) : ಕರ್ನಾಟಕದ ಪ್ರಾಗೈತಿಹಾಸ ಪರಿಚಯ ಆದಿ ಹಳೆಶಿಲಾಯುಗದಿಂದ ಕಬ್ಬಿಣ ಯುಗದವರೆಗೆ, ದೂರ ಶಿಕ್ಷಣ ಪಾಠಗಳು, ಹಂಪಿ ಕನ್ನಡ ವಿಶ್ವವಿದ್ಯಾಲಯ, ಹಂಪಿ.
- **ಶರಣಬಸಪ್ಪ ಕೋಲಾರ** (2010) : ಶಿಲಾಯುಗದ ಗವಿ ಚಿತ್ರಗಳು, ಗುಲ್ಬರ್ಗಾ ಬಸವ ಪ್ರಕಾಶನ.
- **ಮೋಹನ್ ಆರ್.** (2019) : ಕರ್ನಾಟಕದ ಆದಿಮ ಚಿತ್ರಕಲೆ, ಇತಿಹಾಸ, ಬೆಂಗಳೂರು ಇತಿಹಾಸ ದರ್ಪಣ ಪ್ರಕಾಶನ.

ಸೈದ್ಧಾಂತಿಕ

# ಕರ್ನಾಟಕದಲ್ಲಿ ಕನ್ನಡ ಜಾನಪದ ಸಂಶೋಧನೆಯ ಅಧ್ಯಯನದ ಮಾದರಿಗಳು

✍ **ಸೋಮಣ್ಣ ಹೊಂಗಳ್ಳಿ,** ಕನ್ನಡ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ, ಕೊಣಾಜೆ–574199.

**ಆ**ರಂಭ ಕಾಲದ ಜಾನಪದ ಕ್ಷೇತ್ರ ಕಾರ್ಯದಲ್ಲಿ ತೊಡಗಿದ್ದ ಜಾನಪದ ವಿದ್ವಾಂಸರು ಜಾನಪದ ಸಂಗ್ರಹ, ಸಂಪಾದನೆ, ಅಧ್ಯಯನ ಈ ಮೂರು ಕ್ಷೇತ್ರದಲ್ಲಿ ಸಾಕಷ್ಟು ಕೆಲಸ ಮಾಡಿದರು. ಇವೆಲ್ಲವೂ ಸಂಶೋಧನೆಯ ವ್ಯಾಪ್ತಿಯಲ್ಲೇ ಬರುತ್ತವೆ. 1816 ಕ್ಕೆ ಮುಂಚೆಯೇ ಜಾನಪದ ಸಂಶೋಧನಾ ಕೃಷಿ ಪಾಶ್ಚಾತ್ಯರಲ್ಲಿ ಆರಂಭವಾಗಿತ್ತು. ಆಂಗ್ಲ ಭಾಷೆಯ ಮೂಲಕ ಅದರ ಪ್ರಭಾವ ಆಯಿತು. ಕನ್ನಡ ನವೋದಯ ಸಾಹಿತ್ಯಕ್ಕೆ ಪಾಶ್ಚಾತ್ಯ ಸಾಹಿತ್ಯದ ಪ್ರಭಾವವೇ ಕಾರಣವಾದಂತೆ, ಕನ್ನಡ ಜಾನಪದ ಅಧ್ಯಯನದ ನಾಂದಿಗೂ ಪಾಶ್ಚಾತ್ಯರ ಅಧ್ಯಯನವೇ ಮುಖ್ಯ ಕಾರಣವಾಯಿತು. ಜಾನಪದ ಸಂಗ್ರಹಣೆಗಾಗಿಯೇ ಪಾಶ್ಚಾತ್ಯರು ಬರಲಿಲ್ಲ. ಅವರು ಭಾರತಕ್ಕೆ ಕಾಲಿಟ್ಟಿದ್ದು ಬೇರೆ ಬೇರೆ ಉದ್ದೇಶಗಳಿಗಾಗಿ – ಸಾಮ್ರಾಜ್ಯ ವಿಸ್ತರಣೆ, ಧರ್ಮ ಪ್ರಸಾರ ಇತ್ಯಾದಿ. ಜಾನ್‌ಲೇಡನ್ ಬ್ರಿಟಿಷ್ ಸೈನ್ಯದ ಜೊತೆ ಬಂದು ಟಿಪ್ಪುವಿಗೆ ಸಂಬಂಧಿಸಿದ ಲಾವಣಿಗಳನ್ನು ಸಂಗ್ರಹ ಮಾಡಿದನು. ಕನ್ನಡ ಜನಪದ ಗೀತೆಗಳ ಸಂಗ್ರಹ ಕಾರ್ಯಕ್ಕೆ ಈತನದೇ ಮೊದಲ ಪ್ರಯತ್ನ ಎಂದು ಗುರುತಿಸಬಹುದಾಗಿದೆ. ಕ್ರೈಸ್ತಮತ ಪ್ರಚಾರಕ್ಕಾಗಿ ಬಂದ ಅಬ್ಬೆದುಬಾಯ್, ಮೋಗ್ಲಿಂಗ್, ಗೋವರ್, ಫ್ಲೀಟ್, ಕಿಟೆಲ್ ಮೊದಲಾದವರು. ಕಥೆ, ಗಾದೆ, ದಾಸರಪದ, ಲಾವಣಿ, ಜನಪದ ಗೀತೆ – ಇತ್ಯಾದಿಗಳನ್ನು ಬೆಳಕಿಗೆ ತರುವಲ್ಲಿ ಶ್ರಮಿಸಿದರು. 1816ರಲ್ಲಿ ಅಬ್ಬೆದುಬಾಯ್ 'Hindu Manners Customs and Ceremonies' ಗ್ರಂಥದಲ್ಲಿ ಕನ್ನಡ ಜನಪದ ಸಂಪ್ರದಾಯ, ಕಥೆ, ಗಾದೆ ಹಾಗೂ ನಂಬಿಕೆಗಳನ್ನು ಪ್ರಸ್ತಾಪಿಸಿದ್ದಾನೆ. 1871 ರಲ್ಲಿ ಗೋವರ್ ಜಾನಪದ ಸಂಗ್ರಹಣೆಯಲ್ಲಿ ತೊಡಗಿದ. ಈತನ ಉದ್ದೇಶ ಜಾನಪದ ಸಂಗ್ರಹಣೆಯೇ ಆಗಿದ್ದರೂ ಸಂಗ್ರಹಿಸಿದ್ದು ಮಾತ್ರ ದಾಸರ ಪದಗಳನ್ನು. ಆದರೆ ಈತನ 'The Folk Songs of Southern India' ಕೃತಿಯ ಪೀಠಿಕೆಯಲ್ಲಿರುವ ಗೀತ ಸಂಪ್ರದಾಯದ ವಿಷಯ ಮಾತ್ರ ತುಂಬ ಮಹತ್ವದ್ದು. 1885 ರಲ್ಲಿ ಫ್ಲೀಟ್‌ರಿಂದ ಐದು ಐತಿಹಾಸಿಕ ಲಾವಣಿಗಳ ಕೃತಿ ಹೊರ ಬಂದಿತು. ಇವರು ಬೆಳಗಾವಿ, ಧಾರವಾಡ ಗಡಿ ಭಾಗಕ್ಕೆ ಸಂಬಂಧಿಸಿದ ತನ್ನ ಲಾವಣಿಗಳನ್ನು 'ಇಂಡಿಯನ್ ಆಂಟಿಕ್ವರಿ'ಯಲ್ಲಿ ಪ್ರಕಟಿಸಿದರು. ತಾವೇ ಸಂಗ್ರಹಿಸಿದ್ದ ಗಾದೆಗಳನ್ನು ತನ್ನ ಇಂಗ್ಲೀಷ್ ನಿಘಂಟಿನಲ್ಲಿ ದಾಖಲಿಸಿದರು. ಇವರು ಸಂಗ್ರಹಿಸಿದ ಈ ಗಾದೆಗಳು ಕನ್ನಡ ಜಾನಪದ ಅಧ್ಯಯನಕ್ಕೆ ಚಾಲನೆ ನೀಡಿದವು ಎಂದರೆ ತಪ್ಪಾಗಲಾರದು.

ಇದನ್ನೆಲ್ಲ ಗಮನಿಸಿದರೆ ಕನ್ನಡ ಜಾನಪದವನ್ನು ಕನ್ನಡೇತರರಿಗೆ ಮೊಟ್ಟಮೊದಲ ಬಾರಿಗೆ ಪರಿಚಯ ಮಾಡಿಕೊಟ್ಟ ಕೀರ್ತಿಗೆ ಪಾಶ್ಚಾತ್ಯ ವಿದ್ವಾಂಸರು ಕಾರಣರೆಂದು ತಿಳಿದು ಬರುತ್ತದೆ. ಹತ್ತೊಂಬತ್ತನೇ ಶತಮಾನದಲ್ಲಿ ಇವರ ಜಾನಪದ ಕೊಡುಗೆ ಅಪಾರವಾಗಿದ್ದರೂ ಕನ್ನಡದ ವಿದ್ವಾಂಸರು ಆ ಪ್ರಯತ್ನಗಳನ್ನು ಗಂಭೀರವಾಗಿ ಪರಿಗಣಿಸಿರಲಿಲ್ಲ. ಅದರ ಫಲವಾಗಿ ಅಧ್ಯಯನದ ಗತಿ ಕ್ಷೀಣಿಸಿತು. ಕನ್ನಡ ಜಾನಪದ ಸಂಗ್ರಹಣೆಯ ಬಗ್ಗೆ ವಿಶೇಷ ಒಲವು ಮೂಡಿದ್ದು ಮಾತ್ರ ಕನ್ನಡ ನವೋದಯ ಚಳವಳಿಯ ಸಂದರ್ಭದಲ್ಲಿ. ಈ ಪಂಥದ ಬರಹಗಾರರು ಬದುಕನ್ನು, ಸಂಸ್ಕೃತಿಯನ್ನು ತುಂಬ ಆತ್ಮೀಯವಾಗಿ ಕಂಡರು, ಗೌರವಿಸಿದರು. ಕೇವಲ ಸಾಹಿತ್ಯಿಕ ಮಾನದಂಡಗಳಿಂದಲೇ ಜಾನಪದವನ್ನು ನೋಡತೊಡಗಿದರು. ಈ ಕಾರಣಕ್ಕಾಗಿಯೋ ಆಯ್ಕೆ ಎಂಬುದು ಇವರ ಸಂಗ್ರಹಗಳಲ್ಲಿ ಎದ್ದು ಕಾಣುವ ಗುಣಾಂಶವಾಯಿತು. ಈ ಮಾತಿಗೆ ಬೇಂದ್ರೆ, ಮಾಸ್ತಿ, ಕಾಪಸೆರೇವಪ್ಪ, ಪಿ. ಧೂಲಾಸಾಹೇಬ, ಬೆಟಗೇರಿ, ಮಧುರಚೆನ್ನ, ಲಿಂಗಪ್ಪ ಮೊದಲಾದವರು ಉದಾಹರಣೆಯಾಗಿದ್ದಾರೆ. ಹೀಗಾಗಿ 'ಗರತಿಯ ಹಾಡು', 'ಮಲ್ಲಿಗೆದಂಡೆ', 'ಜೀವನ ಸಂಗೀತ' ಜನಪ್ರಿಯ ಸಂಕಲನಗಳೆನಿಸಿದವು. ಕನ್ನಡ ಕವಿಗಳ ಮೇಲೂ ಇವರುಗಳ ಪ್ರಭಾವವಾಯಿತು. ಗೀತೆಯ ಜೊತೆಗೆ ಜನಪದ ಸಾಹಿತ್ಯದ ಉಳಿದ ಅಂಶಗಳತ್ತ ಗಮನಹರಿಸಿದ 'ಪಟ್ಟೋಲೆ ಪಳಲೆ', 'ಹುಟ್ಟಿದಹಳ್ಳಿ ಹಳ್ಳಿಯ ಹಾಡು', 'ಕರ್ನಾಟಕ ಸಂಸ್ಕೃತಿ' ಇಂಥ ಕೃತಿಗಳೂ ಮೌಲಿಕವೆನಿಸಿದವು. 1924ರಲ್ಲಿ ಕೊಡಗಿನ ನಡಕೇರಿಯಂಡ ಚಿಣ್ಣಪ್ಪ 'ಪಟೋಲೆ ಪಳಮೆ' ಎಂಬ ಸಂಕಲನವನ್ನು ಹೊರತಂದರು. ಇವರು ಅಧ್ಯಯನ ನಡೆಸಿದ್ದು ಕೇವಲ ಆಕಸ್ಮಿಕವಾಗಿ ಮತ್ತು ಕುತೂಹಲಕ್ಕಾಗಿ. ಕೊಡಗು ಪರಿಸರದ ಭೌಗೋಳಿಕ ಐತಿಹಾಸಿಕ ವಿವರಗಳೊಂದಿಗೆ ಹುತ್ತರಿ ಹಬ್ಬ, ಕಾವೇರಿ ಸಂಕ್ರಮಣ, ಕೈಲ್ ಮುಹೂರ್ತ, ಗಾದೆ, ಒಗಟು ಮುಂತಾದ ಕೊಡವರ ಜೀವನದ ಅನೇಕ ಅಂಶಗಳನ್ನು ಇದರಲ್ಲಿ ಸಂಗ್ರಹಿಸಿಕೊಟ್ಟಿದ್ದಾರೆ. ಆ ಕಾಲಕ್ಕೆ ಇಂಥದ್ದೊಂದು ಕೆಲಸ ನಡೆದದ್ದೂ ಮಹತ್ವದ ಸಂಗತಿ. ಇಂಗ್ಲೀಷ್ ಬ್ಯಾಲಡ್ಡಿನಿಂದ ಪ್ರಚೋದಿತರಾದ ಮಾಸ್ತಿ ವೆಂಕಟೇಶ್ ಅಯ್ಯಂಗಾರ್ 1925ರಲ್ಲಿ 'ಕನ್ನಡ ಲಾವಣಿ ಸಾಂಗತ್ಯ' ಎಂಬ ಕೃತಿಯನ್ನು ಹೊರ ತಂದರು. ಅರ್ಜುನಜೋಗಿ ಹಾಡು, ಟಿಪ್ಪುಸುಲ್ತಾನ ಲಾವಣಿ, ಸರ್ಜಪ್ಪನಾಯಕನ ಲಾವಣಿ, ಯಲ್ಲಮ್ಮದೇವರ ಹಾಡು ಮುಂತಾದವು ಮಾಸ್ತಿ ಅವರ ಗಮನ ಸೆಳೆದಿರುವುದು ಗೋಚರವಾಗುತ್ತದೆ. 1930ರಲ್ಲಿ ಬೆಟಗೇರಿ ಕೃಷ್ಣಶರ್ಮರಿಂದ 'ಹಳ್ಳಿಯ ಹಾಡುಗಳು' ಎಂಬ ಅತ್ಯುತ್ತಮ ಸಂಕಲನ ಬಂತು.

ಬಿ. ಎಸ್. ಗದ್ದಗೀಮಠ ಅವರು ಇಪ್ಪತ್ತನೆಯ ಶತಮಾನದ ಮಧ್ಯಕಾಲದಲ್ಲಿ ಅದರಲ್ಲೂ ಜಾನಪದದ ಬಗೆಗೆ ಅವಜ್ಞೆಯೇ ಆವರಿಸಿದ್ದ ಸಂದರ್ಭದಲ್ಲಿ 'ಕನ್ನಡ ಜಾನಪದ ಗೀತೆಗಳು' ಕುರಿತು ಪಿಹೆಚ್.ಡಿ. ಸಂಶೋಧನೆ ಮಾಡಿದರು. ಇದು ಜಾನಪದದ ಬಗೆಗೆ ಆಸಕ್ತಿ ಮೂಡಲು ಕಾರಣವಾಯಿತು.

ಕಿಟೆಲ್ ಅವರು ಭಾರತಕ್ಕೆ ಮಿಶನರಿಯಾಗಿ ಬಂದರು. ಇಲ್ಲಿನ ಭಾಷೆ, ಸಾಹಿತ್ಯ, ಜಾನಪದ, ಸಂಸ್ಕೃತಿ ಅಧ್ಯಯನವನ್ನು ಸಂಶೋಧನೆಯನ್ನು ಒಬ್ಬ ಅಕಾಡೆಮಿಕ್ ವಿದ್ವಾಂಸರಾಗಿ ನಡೆಸಿದರು. ಜಾನಪದ ಕ್ಷೇತ್ರಕ್ಕೆ ಅವರ 'ಕಿಟೆಲ್ ಕೋಶದ ಗಾದೆಗಳು' ಮಹತ್ವದ ಕೊಡುಗೆಯಾಗಿದೆ.

ಬಿ. ಎಲ್. ರೈಸ್ ಅವರು ಮಿಶನರಿಯಾಗಿ ಬೆಂಗಳೂರಿಗೆ ಬಂದರು. ಶಿಕ್ಷಣ ತಜ್ಞರಾಗಿ, ಶಾಸನ ತಜ್ಞರಾಗಿ, 'ಎಪಿಗ್ರಾಫಿಯಾ ಕರ್ನಾಟಕ'ದ 12 ಸಂಪುಟಗಳನ್ನು ಹೊರ ತಂದರು. ಕನ್ನಡ ಸಾಹಿತ್ಯ, ಸಂಸ್ಕೃತಿ ಕ್ಷೇತ್ರಕ್ಕೆ ಸೇವೆ ಸಲ್ಲಿಸಿದರು.

ಜಾನ್ ಎಫ್. ಫ್ಲೀಟ್‌ರು ಬಿ. ಎಲ್. ರೈಸ್‌ರಂತಹದ್ದೇ ಕೆಲಸವನ್ನು ಮಾಡಿದರು. ಬೆಳಗಾವಿ, ಧಾರವಾಡ ಜಿಲ್ಲೆಯ ಕೆಲವು ಪ್ರದೇಶಗಳಲ್ಲಿ ಜಾನಪದ ಲಾವಣಿಗಳನ್ನು ಸಂಗ್ರಹಿಸಿದ್ದು ವಿಶೇಷ. ಇದು 'ಫ್ಲೀಟ್ ಸಂಗ್ರಹಿಸಿದ ಲಾವಣಿಗಳು' ಕೃತಿಯು ಐತಿಹಾಸಿಕ ದಾಖಲೆಯೆಂದೇ ಪ್ರಸಿದ್ಧವಾಗಿದೆ.

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಕರ್ನಾಟಕದಲ್ಲಿ ಜಾನಪದ ಅಧ್ಯಯನ ಮೈಸೂರು ವಿಶ್ವವಿದ್ಯಾನಿಲಯ, ತದನಂತರ ಬೆಂಗಳೂರು ವಿಶ್ವವಿದ್ಯಾನಿಲಯ, ಕರ್ನಾಟಕ ವಿಶ್ವವಿದ್ಯಾನಿಲಯ, ಕುವೆಂಪು ವಿಶ್ವವಿದ್ಯಾನಿಲಯಗಳಲ್ಲಿ ಜಾನಪದ ಅಧ್ಯಯನ ಮತ್ತು ಬೋಧನಾ ಕ್ಷೇತ್ರಗಳಲ್ಲಿಯು ನಿಧಾನವಾಗಿ ಆರಂಭವಾದವು. ಕನ್ನಡ ಸಾಹಿತ್ಯ ಪರಿಷತ್ತು, ಕರ್ನಾಟಕ ಜಾನಪದ ಟ್ರಸ್ಟ್, ಜಾನಪದ ಅಕಾಡೆಮಿ, ಸಾಹಿತ್ಯ ಅಕಾಡೆಮಿ ಮುಂತಾದವುಗಳು ಪುಸ್ತಕ ಪ್ರಕಟಣೆ, ಕಲಾಮೇಳ ಮುಂತಾದವುಗಳನ್ನು ನಡೆಸುವುದರ ಮೂಲಕ ಜಾನಪದದ ಪ್ರಚಾರಕ್ಕೆ ಒತ್ತಾಸೆ ನೀಡಿದವು.

1931ರಲ್ಲಿ 'ಗರತಿಯ ಹಾಡು' ಸಂಕಲನ ಬೆಳಕು ಕಂಡಿತು. ಇದರಿಂದಾಗಿ ಕನ್ನಡ ಜನಪದ ಸಾಹಿತ್ಯಕ್ಕೆ ಎಲ್ಲಿಲ್ಲದ ಪ್ರೋತ್ಸಾಹ ದೊರಕುವಂತಾಯಿತು. ಜನಪದ ಸಾಹಿತ್ಯದ ಪ್ರಚಾರದಲ್ಲಿ ನಾಂದಿ ಹಾಡಿದವರೆಂದರೆ ಹಲಸಂಗಿ ಗೆಳೆಯರು (ಮಧುರಚೆನ್ನ, ಲಿಂಗಪ್ಪ, ರೇವಪ್ಪ). ಗರತಿಯ ಹಾಡು, ಕನ್ನಡ 'ಗೃಹಿಣಿ ಗೀತೆಗಳ' ಮೊದಲ 'ಜನಪದ ಕಾವ್ಯ ಸಂಕಲನ' ಎಂಬ ಕೀರ್ತಿಗೆ ಬಾಜನವಾಯಿತು. ಅಲ್ಲದೆ ಜನಪದ ಕಾವ್ಯದ ಸತ್ವಸಂಪನ್ನತೆಗೂ ಇದು ಹೆಸರಾಯಿತು. ಬೇಂದ್ರೆ ಮತ್ತು ಬಿ.ಎಂ.ಶ್ರೀ ಅವರ ಮುನ್ನುಡಿಯೊಂದಿಗೆ ಇದು ಹೊರಬಂತು. ಈ ಮುನ್ನುಡಿಯಲ್ಲಿಯೇ 'ಜನವಾಣಿ ಬೇರು ಕವಿವಾಣಿ ಹೂ' ಎಂದು ಹೇಳಿರುವುದು ಈ ಜಾನಪದದ ಮಹತ್ವವನ್ನು ತಿಳಿಸುತ್ತದೆ. ಶಿಷ್ಟ ಸಾಹಿತ್ಯಕ್ಕೂ ಜಾನಪದವೇ ತಾಯಿ ಬೇರು ಎಂದು ಆಗ ಘೋಷಿಸಲಾಯಿತು. ವಿಶ್ವ ಕರ್ನಾಟಕ ಪತ್ರಿಕೆಯಲ್ಲಿ 'ಪಾಮರ ಸಾಹಿತ್ಯವನ್ನು ಉದಾಸೀನ ಮಾಡಬೇಡಿ' ಎಂಬ ಬರಹ ಬಂತು. ಇದರಿಂದ ಪ್ರೇರಿತರಾಗಿ ಹಲವು ಆಸಕ್ತರು ಜಾನಪದ ಸಂಗ್ರಹಣೆಯಲ್ಲಿ ತೊಡಗಿದವರೂ ಇದ್ದಾರೆ. ಅರ್ಚಕ ಬಿ. ರಂಗಸ್ವಾಮಿ ಅಂಥವರಲ್ಲಿ ಮುಖ್ಯರು. 1933 ರಲ್ಲಿ 'ಹುಟ್ಟಿದಹಳ್ಳಿ ಹಳ್ಳಿಯ ಹಾಡು' ಸಂಕಲನವನ್ನು ಹೊರತಂದರು. ಬಂಡಿಹೊಳೆಯ ಆತ್ಮಕಥೆಯಂತಿರುವ ಈ ಕೃತಿಯಲ್ಲಿ ಗೀತೆಗಳನ್ನ ಒಳಗೊಂಡಂತೆ ಹಳ್ಳಿಯ ಸಮಗ್ರ ಬದುಕಿದೆ. ನಂತರ ಮತಿಘಟ್ಟ ಸಹೋದರರ 'ನಾಡ ಪದಗಳು', ಬಿ.ಎನ್.ರಂಗಸ್ವಾಮಿ ಅವರ 'ಹಳ್ಳಿಯ ಪದಗಳು' ಗಮನ ಸೆಳೆದವು.

1935ರ ವೇಳೆಗೆ ಕನ್ನಡ ಜನಪದ ಸಾಹಿತ್ಯದ ಅಧ್ಯಯನದ ವಿಷಯದಲ್ಲಿ ಮಹತ್ವಪೂರ್ಣವಾದ ಕಾಳಜಿಗಳು ಮೂಡಿದವು. ಜನಪದ ಸಾಹಿತ್ಯವನ್ನು ಉತ್ತರ ಕರ್ನಾಟಕ ಪರಿಸರದ 'ಜಯ ಕರ್ನಾಟಕ' ಮೈಸೂರು ಭಾಗದ 'ಪ್ರಬುದ್ಧ ಕರ್ನಾಟಕ' ಬೆಂಗಳೂರಿನ 'ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ' ಪ್ರಕಟಿಸಲು ಮುಂದಾದವು. ಜನಪದ ಸಾಹಿತ್ಯ ಸಂಗ್ರಹ ಜರೂರಾಗಿ ಜರುಗಲು ಪತ್ರಿಕೆಗಳೂ ಪ್ರೇರಕವಾದವು. ಇದೇ ವೇಳೆಗೆ 'ಫೋಕ್‌ಲೋರ್' ಪದವನ್ನು ಬಳಸಿ ಜಾನಪದವನ್ನು ಸಂಸ್ಕೃತಿಯ ಅಳತೆಗೋಲಾಗಿ ವಿಶ್ಲೇಷಿಸುವ ಕೆಲಸವನ್ನು ದೇವುಡು ನರಸಿಂಹಶಾಸ್ತ್ರಿ ತಮ್ಮ 'ಕರ್ನಾಟಕ ಸಂಸ್ಕೃತಿ' ಪುಸ್ತಕದಲ್ಲಿ ಮಾಡಿದರು. ಮಾಸ್ತಿಯವರೂ ಸಹ 'ಕರ್ನಾಟಕ ಜನಪದ ಸಾಹಿತ್ಯ' ಎಂಬ ಲೇಖನ ಬರೆದು ಕನ್ನಡ ಜಾನಪದದ ಹಿರಿಮೆಯನ್ನು ಸಾರಿದರು. ಗೊರೂರು ರಾಮಸ್ವಾಮಿ ಅಯ್ಯಂಗಾರ್ 1938 ರಲ್ಲಿ 'ಹಳ್ಳಿಯ ಹಾಡುಗಳು' ಹೊರಬಂತು. ನಲವತ್ತರ ದಶಕದ ಬಹುಪಾಲು ಸಂಗ್ರಾಹಕರು ಜನಪದ ಗೀತೆಗಳ ಸಂಗ್ರಹ ಕಾರ್ಯಕ್ಕೆ ಕಾಳಜಿ ವಹಿಸಿದ್ದನ್ನು ಕಾಣುತ್ತೇವೆ. ಜಾನಪದ ಎಂದರೆ 'ಹಾಡು' ಎಂದು ಅರ್ಥ ಮಾಡಿಕೊಂಡಿದ್ದರ ಫಲವಾಗಿ ಇಂಥ ಪ್ರಕಾರ ವಿಪುಲವಾಗಿ ಬರಲು ಕಾರಣವಾಯಿತು. ಆದರೆ ನಡಿಕೇರಿಯಂಡ ಚಿಣ್ಣಪ್ಪ, ರಂಗಸ್ವಾಮಿ, ದೇವುಡು ಮುಂತಾದವರು ಜಾನಪದದ ಇತರ ಪ್ರಕಾರಗಳತ್ತಲೂ ಗಮನಹರಿಸಿ ಮುಂದೆ ಅನುಸರಿಸಬೇಕಾದ ಕ್ರಮಗಳನ್ನ ತಮ್ಮ ಕಾರ್ಯಚಟುವಟಿಕೆಗಳಲ್ಲಿ ತೋರಿದರು. ಈ ಸಂದರ್ಭದಲ್ಲಿ ನಡೆದ ಸಂಶೋಧನೆಯು ಮುಖ್ಯವಾಗಿ ಮಾನವಶಾಸ್ತ್ರ, ಜಾನಪದ, ಜನಾಂಗೀಯ ಅಧ್ಯಯನ ಮಾದರಿಗಳು ಹೆಚ್ಚಾಗಿ ನಡೆದವು.

1940 ರವರೆಗೆ ಜನಪದ ಗಾದೆ, ಒಗಟು, ಕಥನಗಳನ್ನು ಸಂಗ್ರಹಿಸಿ ಅದೇ ಹೆಸರಿನ ಗ್ರಂಥಗಳಾವುವು ಬರಲಿಲ್ಲ. ಈ ಕಾಲಘಟ್ಟದಲ್ಲಿ ಕಾಣಿಸಿಕೊಂಡ ಸಂಕಲನದಲ್ಲಿ ವೈಜ್ಞಾನಿಕದೃಷ್ಟಿ ಇಲ್ಲವಾದರೂ ಕನ್ನಡ ಜಾನಪದಕ್ಕೆ ಒಂದು ರೀತಿಯ ಸಮೃದ್ಧಿಯನ್ನ ತಂದುಕೊಟ್ಟವು. ಸ್ವಾತಂತ್ರ್ಯಾನಂತರದಲ್ಲಿ ಕನ್ನಡ ಜಾನಪದ ಅಧ್ಯಯನದ ನಿಜವಾದ ಶಖೆ ಆರಂಭವಾಯಿತು. ಪಿ. ಕಾಳಿಂಗರಾವ್, ಎಸ್.ಕೆ. ಕರೀಂಖಾನ್, ಕೆ.ಆರ್. ಲಿಂಗಪ್ಪ, ಜನಪದ ಗೀತೆಗಳನ್ನು ಹಾಡುತ್ತ ಅವುಗಳಿಗೆ ಜನಪ್ರಿಯತೆಯನ್ನು ತಂದುಕೊಟ್ಟರು. ಸಂಗ್ರಹಣೆಗೆ ಪ್ರೇರಣೆಯನ್ನು ನೀಡಿದರು. ಮತಿಘಟ್ಟ ಕೃಷ್ಣಮೂರ್ತಿ, ಬಿ.ಎಸ್. ಗದ್ದಗೀಮಠ, ಕ.ರಾ.ಕೃ, ಜೀಶಂಪ, ಇವರೆಲ್ಲ ಈ ಕಾರಣದಿಂದ ಮುಖ್ಯರಾಗುತ್ತಾರೆ. ಬಿ.ಎಸ್.ಗದ್ದಗೀಮಠ ಜಾನಪದ ಕ್ಷೇತ್ರದಲ್ಲಿ ಪ್ರಪ್ರಥಮ ಬಾರಿಗೆ ಪಿಹೆಚ್.ಡಿ. ಗ್ರಂಥ 'ಕನ್ನಡ ಜಾನಪದ ಗೀತೆಗಳು' ಹೊರತಂದರು. 1955 ರಲ್ಲಿ ಎ.ಕೆ.ರಾಮಾನುಜನ್ 'ಗಾದೆಗಳು' ಸಂಕಲನ ತಂದು ಕನ್ನಡ ಗಾದೆಗಳನ್ನ ಸಮರ್ಥವಾಗಿ ಅಧ್ಯಯನ ನಡೆಸಿದರು. ಡಾ. ಜೀ. ಶಂ. ಪರಮಶಿವಯ್ಯ ಅವರು ವೃತ್ತಿ ಗಾಯಕರ ಬಗೆಗೆ ವ್ಯಾಪಕವಾದ ಸಂಶೋಧನೆಯನ್ನು ಕೈಗೊಂಡರು. ತಮ್ಮ 'ದಕ್ಷಿಣ ಕರ್ನಾಟಕದ ಜನಪದ ಕಾವ್ಯ ಪ್ರಕಾರಗಳು' ಸಂಶೋಧನಾ ಪ್ರಬಂಧದಲ್ಲಿ ನೂತನ ಅನ್ವೇಷಣೆಯನ್ನು ದಾಖಲಿಸಿದರು. 1960ರ ದಶಕದಲ್ಲಿ 'ಸುವರ್ಣ ಸಂಚಯ', 'ಹೊನ್ನ ಬಿತ್ತೇವು ಹೊಲಕ್ಕೆಲ್ಲ' ಮುಂತಾದ ಗ್ರಂಥಗಳು ಬಂದದ್ದರಿಂದ ಕನ್ನಡ ಜಾನಪದಕ್ಕೆ ಹೊಸ ವಿವೇಚನೆ ದೊರಕಿದಂತಾಯಿತು. 1966ರ ಹೊತ್ತಿನಲ್ಲಿ ಹಾಮಾನಾ ಅವರು 'ಜಾನಪದ ಸ್ವರೂಪ' ಎಂಬ ಕಿರು ಹೊತ್ತಿಗೆ ಪ್ರಕಟಿಸುವುದರ ಮೂಲಕ ಗಮನ ಸೆಳೆದರು ಮತ್ತು ವೈಜ್ಞಾನಿಕ ಅಧ್ಯಯನಕ್ಕೆ ಮಾರ್ಗದರ್ಶನ ನೀಡಿದರು.

1966ರಲ್ಲಿ ಜೀಶಂಪ ಅವರು 'Festival of Dances' ಎಂಬ ವಿಶೇಷಾಂಕಕ್ಕೆ ಕನ್ನಡ ಜಾನಪದದ ಬಗೆಗೆ ಗಮನಹರಿಸಬೇಕಾದ ಅನಿವಾರ್ಯತೆ ಕುರಿತು ಬರೆದರು. ಈ ರೀತಿ ಬರೆಯುವುದರ ಮೂಲಕ ಜಾನಪದದ ಬಗೆಗೆ ಇದ್ದ ಸಾಂಪ್ರದಾಯಿಕ ತಿಳುವಳಿಕೆಯನ್ನು ಪರಿಶೀಲಿಸುವಂತಾಯಿತು. ಈ ಬಗೆಯ ಮತ್ತಿತರರ ಬರಹಗಳ ಮೂಲಕ ಅದರಲ್ಲೂ 1966 ರಿಂದ ಈಚೆಗೆ ಕನ್ನಡ ಜಾನಪದ ಅಧ್ಯಯನಕ್ಕೆ ಒಂದು ರೂಪ ಸಾಧ್ಯವಾದಂತಾಯಿತು.

ಜಾನಪದ ಕ್ಷೇತ್ರದಲ್ಲಿ ಅತ್ಯಂತ ಮಹತ್ವದ ಹೆಸರು ಪಡೆದಿರುವ ಜೀಶಂಪ ಅವರು ನಾಗಮಂಗಲ ತಾಲ್ಲೂಕಿನ ಅಂಬಲಜೀರಹಳ್ಳಿಯಲ್ಲಿ ಜನಿಸಿದರು. ಜೀ.ಶಂ.ಪರಮಶಿವಯ್ಯ ಅವರು ಜಾನಪದ ಕ್ಷೇತ್ರದ ಬಹುಮುಖಿ ಚಟುವಟಿಕೆಗಳಿಗೆ ಚಾಲನೆ ನೀಡಿದರು. ಜಾನಪದ, ಸಾಹಿತ್ಯ, ಕಲೆಗಳ ಸಂಶೋಧನೆಯಲ್ಲಿ ತಾವು ತೊಡಗಿಕೊಳ್ಳುವುದರ ಜೊತೆಗೆ ಇತರರನ್ನು ತೊಡಗುವಂತೆ ಮಾಡಿದರು. ದೇಶ ವಿದೇಶಗಳಿಗೆ ಭೇಟಿ ನೀಡಿ ಅಲ್ಲಿನ ಜಾನಪದ ಸಂಶೋಧನೆಯ ಚಟುವಟಿಕೆಗಳನ್ನು ತಿಳಿದು ನಡೆದವರು. 'ದಕ್ಷಿಣ ಕರ್ನಾಟಕದ ಕಾವ್ಯ ಪ್ರಕಾರಗಳು' ಪಿಹೆಚ್.ಡಿ. ಮಹಾಪ್ರಬಂಧ ಜಾನಪದ ಕಾವ್ಯ ಪ್ರಕಾರಗಳನ್ನು ಕುರಿತು ಅವರ ಅಧ್ಯಯನ ಗಮನ ಸೆಳೆಯುವಂತಹದು. 'ಜಾನಪದ ಸಾಹಿತ್ಯ ಸಮೀಕ್ಷೆ' ಅವರ ಮತ್ತೊಂದು ಮಹತ್ವದ ಕೃತಿ. ಗೊರವರು, ಕಂಸಾಳೆಯವರು, ದೊಂಬಿದಾಸರು, ಕಿನ್ನರಿ ಜೋಗಿಗಳು, ನೀಲಗಾರರು ಮುಂತಾದವರನ್ನು ಕುರಿತು ಕ್ಷೇತ್ರ ಕಾರ್ಯ ನಡೆಸುವ ಮೂಲಕ ಮೊದಲ ಬಾರಿಗೆ ಪರಿಚಯಿಸಿದರು. ಹಂಪನಾಗರಾಜಯ್ಯನವರು 'ಆಕಾಶ ಜಾನಪದ' ಎನ್ನುವ ಕೃತಿಯನ್ನು ರಚಿಸಿ ಜಾನಪದವನ್ನು ವಿಭಿನ್ನ ನೆಲೆಯಲ್ಲಿ ಅಧ್ಯಯನ ಮಾಡುವ ಹೊಸ ದಿಕ್ಕನ್ನು ತೋರಿಸಿದರು. ಸ್ವಾತಂತ್ರ್ಯಾನಂತರದಲ್ಲಿ ಕನ್ನಡ ಜಾನಪದ ಅಧ್ಯಯನದ ನಿಜವಾದ ದಾರಿ ತೆರೆದುಕೊಂಡಿತು. ಪಿ.ಕಾಳಿಂಗರಾವ್, ಎಸ್.ಕೆ. ಕರೀಂಖಾನ್, ಕೆ.ಆರ್. ಲಿಂಗಪ್ಪ ಮುಂತಾದವರು ಜನಪದ ಗೀತೆಗಳನ್ನು ಹಾಡುತ್ತಲೇ ಅವುಗಳ ಮಹತ್ವ ಮತ್ತು ಜನಪ್ರಿಯತೆಯನ್ನು

ಸಾರಿದರು. ಮತಿಘಟ್ಟ ಕೃಷ್ಣಮೂರ್ತಿ, ಬಿ.ಎಸ್.ಗದ್ದಗೀಮಠ, ಕರಾಕೃ, ಜೀಶಂಪ ಮೊದಲಾದವರು ಕ್ಷೇತ್ರ ಕಾರ್ಯದ ಮೂಲಕ ಅಧ್ಯಯನದ ಮಹತ್ವ ಹೆಚ್ಚಿಸಿದರು.

1966 ರಿಂದ ಈಚೆಗೆ ಕನ್ನಡ ಜಾನಪದದ ಅಧ್ಯಯನಕ್ಕೆ ವೈಜ್ಞಾನಿಕ ಸ್ವರೂಪ ಬಂದಿತು. ಹಾ.ಮಾ.ನಾಯಕ, ದೇ.ಜ.ಗೌ, ಎಚ್.ಎಲ್.ನಾಗೇಗೌಡ ಮುಂತಾದವರು ಜಾನಪದವನ್ನು ಆದಷ್ಟು ಬೇಗ ಸಂಗ್ರಹವಾಗಬೇಕೆಂದು ಹೇಳಿದರು. ಈ ಒತ್ತಾಸೆಯ ಫಲವಾಗಿ ರಾಗೌ, ಜೀಶಂಪ, ಸಿ.ಪಿ.ಕೆ. ಸುಧಾಕರ, ಡಿ.ಕೆ.ರಾಜೇಂದ್ರ, ಅಂಬಳಿಕೆ ಹಿರಿಯಣ್ಣ, ರಾಮಚಂದ್ರೇಗೌಡ, ಕಾಳೇಗೌಡ ನಾಗವಾರ, ಕ್ಯಾತನಹಳ್ಳಿ ರಾಮಣ್ಣ, ಟಿ.ಎಸ್.ರಾಜಪ್ಪ ಮೊದಲಾದವರು ಅತ್ಯುತ್ತಮ ಸಂಗ್ರಹಗಳನ್ನು ಹೊರತಂದರು. ಈ ನಡುವೆ ಕರ್ನಾಟಕ ಜಾನಪದ ಅಧ್ಯಯನ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕ್ರಮಬದ್ಧವಾಗಿ ಆರಂಭವಾಯಿತು. ಆನಂತರ ಬೆಂಗಳೂರು ವಿಶ್ವವಿದ್ಯಾನಿಲಯ, ಕರ್ನಾಟಕ ವಿಶ್ವವಿದ್ಯಾನಿಲಯ, ಕುವೆಂಪು ವಿಶ್ವವಿದ್ಯಾನಿಲಯಗಳಲ್ಲಿ ಜಾನಪದ ಅಧ್ಯಯನಾಂಗ – ಭೋದನಾಂಗಗಳು ಆರಂಭವಾದವು. ಕನ್ನಡ ಸಾಹಿತ್ಯ ಪರಿಷತ್ತು, ಕರ್ನಾಟಕ ಜಾನಪದ ಟ್ರಸ್ಟ್, ಜಾನಪದ ಅಕಾಡೆಮಿ ಇವು ಪುಸ್ತಕ ಪ್ರಕಟಣೆ, ಕಲಾಮೇಳ – ಈ ವಿಷಯದಲ್ಲಿ ತನ್ನದೇ ಆದ ಸಾಧನೆಗೆ ಪಾತ್ರವಾದುವು.

ರಾಗೌ ಅವರು 'ನಮ್ಮ ಒಗಟುಗಳು', ಸುಧಾಕರ ಅವರ 'ನಮ್ಮ ಸುತ್ತಿನ ಗಾದೆಗಳು', ನಾಗವಾರರ 'ಬೀದಿ ಮಕ್ಕಳು ಬೆಳೆದೋ', ಬರಗೂರು ರಾಮಚಂದ್ರಪ್ಪನವರು ಅಧ್ಯಕ್ಷರಾಗಿದ್ದ ಕಾಲದಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಮೂಲಕ ಉಪಸಂಸ್ಕೃತಿ ಯೋಜನೆಯಲ್ಲಿ ಹೊರಬಂದ ಹಲವಾರು ಪುಸ್ತಕಗಳು ಜಾನಪದ ಅಧ್ಯಯನಕ್ಕೆ ಹೊರ ತಿರುವನ್ನು ನೀಡಿದವು. ಈ ಯೋಜನೆ ಹಿಂದುಳಿದ ಜಾತಿ ವರ್ಗಗಳನ್ನು ಹೊಸ ರೀತಿಯಲ್ಲಿ ಅಧ್ಯಯನ ಮಾಡುವಂತೆ ಪ್ರಚೋದಿಸಿತು. ಹಿಂದುಳಿದ ಜಾತಿಗಳ ಬಹುಮುಖಗಳನ್ನು ಗ್ರಹಿಸುವ ಸಾಂಸ್ಕೃತಿಕ ವಿವೇಚನೆ ಮಾಡುವ ಕೆಲಸವೊಂದು ಬಹು ಸೊಗಸಾಗಿ ಪ್ರಸ್ತುತ ಯೋಜನೆಯಲ್ಲಿ ಜರುಗಿತು. ಸಾಂಸ್ಥಿಕ ನೆಲೆಯಲ್ಲಿ ಬರಗೂರು ಕೆಲಸ ಮಾಡಿದ್ದಲ್ಲದೆ ಜಾನಪದ ವಿದ್ವಾಂಸರು ಆಲೋಚಿಸಬೇಕಾದ ರೀತಿಯ, ಹೊಸ ಒಳನೋಟಗಳ ಲೇಖನಗಳನ್ನೂ ಬರೆದರು. 'ಬೆಂಗಳೂರು ನಗರ ಎಂಬ ಒಂದು ಹಳ್ಳಿ' ಲೇಖನ ಈ ಮಾತಿಗೆ ಉದಾಹರಣೆಯಾಗಿದೆ. ಇವತ್ತು ಬೆಂಗಳೂರು ಅನೇಕ ಹಳ್ಳಿಗಳನ್ನು ತನ್ನ ಒಡಲಲ್ಲಿ ತುಂಬಿಕೊಂಡಿದೆ. ಬಾಹ್ಯದಲ್ಲಿ ನಾಗರೀಕತೆ, ವಿಜ್ಞಾನ ಕಾಣಿಸಿದರೆ ಆಂತರ್ಯದಲ್ಲಿ ಹಳ್ಳಿಯ ಮನಸ್ಸು ಇದೆ. ಅಲ್ಲಿ ಜರುಗುವ ಕರಗ ಕಡಲೇಕಾಯಿ ಪರಿಷೆ, ವೆಹಿಕಲ್ ಗಣಪತಿ ಪೂಜೆ – ಇವೆಲ್ಲ ಆ ಮಾತಿಗೆ ಸಾಕ್ಷಿಯಾಗಿವೆ. ಸೋಲಿಗರು, ಲಂಬಾಣಿಗಳು, ಕಾಡುಕುರುಬರು, ಜೇನುಕುರುಬರು, ಕಣುಬಿಯರು, ಸಿದ್ದಿಗಳು, ಹಸಲರು ಇತ್ಯಾದಿ.

ನಗರ ಜಾನಪದವನ್ನು ನೋಡಬೇಕಾದ ರೀತಿಯನ್ನು, ಸ್ವಂತ ಊರಿನ ಮುಖಾಂತರ (ನನ್ನೂರಿನ ಸಂವೇದನೆ) ಭಾರತೀಯತೆಯನ್ನು ಕಂಡುಕೊಳ್ಳುವ ಪ್ರಯತ್ನವನ್ನು ಬರಗೂರು ರಾಮಚಂದ್ರಪ್ಪ ಅವರು ವ್ಯಕ್ತಗೊಳಿಸಿದರು. ಇಂಥ ವಿಚಾರಧಾರೆಗಳು ಕನ್ನಡ ಜಾನಪದ ಅಧ್ಯಯನದ ಮೇಲೆ ಪ್ರಭಾವ ಬೀರಿದವು. ಹಾಗೆ ನೋಡಿದರೆ ಕರ್ನಾಟಕದಲ್ಲಿ ಬಂಡಾಯ ಸಾಹಿತ್ಯ ಸಂಘಟನೆ ಹುಟ್ಟಿಕೊಂಡಾಗ ಇಡೀ ಸಾಹಿತ್ಯ – ಸಾಂಸ್ಕೃತಿಕ ಲೋಕದ ಪುನರ್ ಮೌಲ್ಯೀಕರಣವೇ ಜರುಗಿತು. ಬಂಡಾಯಕ್ಕೆ ಬರುವವರೆಗೆ ಜಾನಪದವನ್ನು ಸಾಂಸ್ಕೃತಿಕ ದೃಷ್ಟಿಕೋನದಿಂದ ನೋಡುವ ವಾತಾವರಣ ಮೂಡಿಬಂದಿರಲಿಲ್ಲ. 'ಬಂಡಾಯ ಜಾನಪದ, 'ಲಿಖಿತ ಜಾನಪದ' (ರಂಗಾರೆಡ್ಡಿ), 'ಪ್ರಸ್ತಾಪ', 'ಪ್ರಣೀತ' (ಜಿ.ಆರ್.ತಿಪ್ಪೇಸ್ವಾಮಿ) ಮೊದಲಾದ ಕೃತಿಗಳು ಬಂಡಾಯ ಚಳವಳಿಯ ಫಲವಾಗಿ ಹುಟ್ಟಿಕೊಂಡವು. ಆಕಾಶ ಜಾನಪದ, ಜಾತ್ರೆಗಳು, ಪ್ರಾಣಿ ಜಾನಪದ, ಸಸ್ಯ ಜಾನಪದ, ಶರೀರ ಜಾನಪದ, ಗ್ರಾಮದೇವತೆಗಳು ಹಾಗೂ ಹಳ್ಳಿಯ ಅಧ್ಯಯನಗಳು ನಡೆಯತೊಡಗಿದವು. ಪಿಹೆಚ್.ಡಿ. ಗ್ರಂಥಗಳ ರಾಶಿ ರಾಶಿಯೇ ಬಂತು.

ಬಹಳ ಹಿಂದೆ ಪ್ರಭುಗಳ ಮೂಲಕ ದೇಶವನ್ನು ಅಳೆಯಲಾಗುತ್ತಿತ್ತು. ನಂತರ ಜನಗಳ ಹಿನ್ನೆಲೆಯಲ್ಲಿ ಭಾರತವನ್ನು ನೋಡುವ ಪ್ರಯತ್ನ ಇಂಥ ಚಿಂತನೆಗಳು ಶುರುವಾದವು. ಬೇಂದ್ರೆ, ಗೊರೂರು, ಮಾಸ್ತಿ, ದೇವುಡು, ಬೇಟಗೇರಿ ಮುಂತಾದವರು ಜಾನಪದವನ್ನು ಪ್ರವೇಶಿಸಿದ್ದರಿಂದ ಭಾರತವನ್ನು ಕಂಡುಕೊಳ್ಳುವ ಆಯಾಮವಾಗಿ ಜಾನಪದ ಹುಟ್ಟಿಕೊಂಡಿತು. ಊಂಗುಟ್ಟಿದರೆ ಮಾತ್ರ ಜಾನಪದ ಅಂದರೆ ಸಂಬಂಧಕ್ಕಾಗಿ ಜಾನಪದ, ಒಡನಾಟಕ್ಕಾಗಿ ಜಾನಪದ ಎಂಬ ಮನೋಧರ್ಮವನ್ನು ಕಂಡುಕೊಂಡರು. ಸ್ವಾತಂತ್ರ್ಯ ಸಂಗ್ರಾಮದ ಸಂದರ್ಭದಲ್ಲಿ ಮಹಾತ್ಮಗಾಂಧಿ ಹಳ್ಳಿಗಳನ್ನು ಪುನರ್ ನಿರ್ಮಾಣ ಮಾಡಬೇಕು, ಪುನರ್‌ಸಂಘಟಿಸಬೇಕೆಂದು ಹೇಳುತ್ತಿದ್ದರು. ಹಳ್ಳಿಗಳಿಗೆ ಅಧಿಕಾರ ಸಿಗುವಂತಾಗಬೇಕು ಎಂಬ ಕೂಗು ಎದ್ದಿತು. ಯಾವಾಗ ಇಂಥ ಹಲವು ಆರ್ಭಟಗಳು ಕಾಣಿಸಿಕೊಂಡವೋ ಆಗಲೇ ಜಾನಪದ ಸಮೃದ್ಧಿಯನ್ನು ಸಂರಕ್ಷಿಸಬೇಕೆಂಬ ಮಾತು ಕೇಳಿಬಂತು. ಹಳ್ಳಿಗಳು ನಾಶವಾಗಿ ಬಿಡುತ್ತವೆಂಬ ಕೂಗಾಟವೆದ್ದಾಗ 'ಜಾನಪದ ನಾಶವಾಗುತ್ತದೆ. ಅದು ನಾಶವಾಗುವ ಮುನ್ನ ಉಳಿಸಬೇಕು' ಎಂಬ ಮಾತು ಎಚ್.ಎಲ್.ನಾಗೇಗೌಡರಿಂದ ಕೇಳಿಬಂತು. ಈ ಸಂದರ್ಭದಲ್ಲಿ ಗದ್ದಗೀಮಠ, ಎಂ.ಎಸ್.ಸುಂಕಾಪುರ, ಗೊ.ರು.ಚನ್ನಬಸಪ್ಪ, ಡಿ.ಲಿಂಗಯ್ಯ ಇವರೆಲ್ಲ ಜನಪದ ಸಾಹಿತ್ಯ ಸಂಗ್ರಹಣೆಯ ಮೂಲಕ ಹಳ್ಳಿಯ ಸಂಸ್ಕೃತಿಯನ್ನು ಉಳಿಸಬೇಕೆಂದರು. ಆದರೆ ಯಾವುದು ಗ್ರಾಮೀಣ ಸಂಸ್ಕೃತಿ ಎಂದು ಹೇಳದ ಇವರೆಲ್ಲ ಮೂಲತಃ ಸಾಹಿತಿಗಳಾಗಿದ್ದರಿಂದ ಸಾಹಿತ್ಯಿಕ ಅಂಶಗಳತ್ತ ಹೆಚ್ಚು ಒತ್ತು ಕೊಟ್ಟಿದ್ದಲ್ಲದೆ ತಾವು ಸಂಗ್ರಹಿಸಿದ ಜಾನಪದವನ್ನು ವೈಭವೀಕರಿಸಿ ನೋಡಿದರು. ಅಂದರೆ, ಸಂಗ್ರಹಣೆ ಮತ್ತು ಸಂಪಾದನೆಗೆ ಮೀಸಲಾದ ಚಿಂತಕರಾಗಿ ಉಳಿದುಬಿಟ್ಟರು. ಅನಂತರ ಜಾನಪದವನ್ನು ಶಾಸ್ತ್ರೀಯ ಶಿಸ್ತನ್ನಾಗಿ ಅಧ್ಯಯನ ಮಾಡುವ ವಾತಾವರಣ ಬೆಳೆಯಿತು. ಜಾನಪದವನ್ನು ಹೊರಗೆಡಹುವ ವಿದ್ವಾಂಸರು ಕಾಣಿಸಿಕೊಂಡರು. ಇವರು, ಜಾನಪದ ವ್ಯಾಪಕವಾದುದು, ಆದ್ದರಿಂದ ಅದರ ನೆಲೆಯೂ ವ್ಯಾಪಕವಾದುದೆಂದು ಭಾವಿಸಿದರು. ಆದರೆ ದೇಶೀಯ ನೆಲೆಗೆ ಬದಲಾಗಿ ಕರ್ನಾಟಕ ಜಾನಪದವನ್ನು ಪಾಶ್ಚಾತ್ಯ ನೆಲೆಯಲ್ಲಿಯೇ ನೋಡತೊಡಗಿದರು. ಅದೇನೆ ಇರಲಿ, ಪಾಶ್ಚಾತ್ಯ ಜಾನಪದವನ್ನು, ಅದರ ಪರಿಕಲ್ಪನೆಗಳನ್ನು ಕನ್ನಡದಲ್ಲಿ ತುಂಬ ಅಚ್ಚುಕಟ್ಟಾಗಿ ಹೇಳತೊಡಗಿದರು. ದೇಜಗೌ, ಹಾ.ಮಾ.ನಾಯಕ, ಜೀಶಂಪ, ಸಿ.ಪಿ.ಕೆ, ರಾಗೌ, ಡಿ.ಕೆ.ರಾಜೇಂದ್ರ, ಸೋಮಶೇಖರ ಇಮ್ರಾಪುರ, ಲಠ್ಠೆ, ಎಚ್.ಜೆ.ಲಕ್ಕಪ್ಪಗೌಡ, ಅಂಬಳಿಕೆ ಹಿರಿಯಣ್ಣ, ವೀರಣ್ಣದಂಡೆ, ಬಸವರಾಜನೆಲ್ಲಿಸರ, ಚಕ್ಕೆರೆ ಶಿವಶಂಕರ್, ಪಿ.ಕೆ.ರಾಜಶೇಖರ ಮೊದಲಾದವರು ಈ ಗುಂಪಿಗೆ ಸೇರಿದವರು. ಜಾನಪದದ ಎಲ್ಲ ಮುಖಗಳ ಬಗ್ಗೆ ಆಮೂಲಾಗ್ರವಾಗಿ ಅಧ್ಯಯನ ಮಾಡಿದ ಬಹುದೊಡ್ಡ ಜಾನಪದ ವಿದ್ವಾಂಸರೆಂದರೆ ಡಾ. ಜೀಶಂಪ. ಮರಣೋತ್ತರ ಸಂದರ್ಭದಲ್ಲಿ ಜಾನಪದ ಅಕಾಡೆಮಿ ಅವರಿಗೆ 'ಕರ್ನಾಟಕ ಜಾನಪದ ರತ್ನ' ಪ್ರಶಸ್ತಿಯನ್ನು ನೀಡಿ ಗೌರವಿಸಿತು. ದಕ್ಷಿಣ ಕರ್ನಾಟಕದ ಜನಪದ ಕಾವ್ಯ ಪ್ರಕಾರಗಳ ಬಗೆಗೆ ಕೆಲಸ ಮಾಡುವಾಗ ಪಾಶ್ಚಾತ್ಯರ ತತ್ವಸೂತ್ರಗಳನ್ನು ಮನನ ಮಾಡಿಕೊಂಡರು. ಆದರೆ ಅಂಥವುಗಳಿಗೂ ಸಹ ದೇಶೀಯ ನೆಲೆಯಲ್ಲಿ ಉದಾಹರಣೆಗಳನ್ನು ಹುಡುಕುವ ಕೆಲಸ ಮಾಡಿದರು. ಅವರ ವೃತ್ತಿಗಾಯಕರನ್ನು ಕುರಿತ ಅಧ್ಯಯನ ಇದಕ್ಕೊಂದು ಅದ್ಭುತ ಸಾಕ್ಷಿ ಎನ್ನಬಹುದು. ತದನಂತರದ ದಿನಗಳಲ್ಲಿ ಕೆಲವರು ಜಾನಪದವನ್ನು ಆನ್ವಯಿಕ ಜೀವನ ಶಿಸ್ತಾಗಿ ಕಂಡರು. ಇವರು Folk oriented thinkers. ಅಂದರೆ ಜನ ಸಂಬಂಧೀ ಚಿಂತಕರು. ಜನಪರವಾಗಿ ಆಲೋಚಿಸುವವರು. ಇದಕ್ಕೆ ಮುನ್ನ ಸಾಹಿತ್ಯವನ್ನು ಸಂಗ್ರಹಿಸುತ್ತಿದ್ದರು. ಆ ಸಾಹಿತ್ಯವನ್ನು ಹೇಳಿದವರಿಗೆ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಅಂತಹ ಬೆಲೆ ನೀಡುತ್ತಿರಲಿಲ್ಲ. ಈ ಕೊರತೆಯನ್ನು ಗಮನಿಸಿದ ಈ ಜನಸಂಬಂಧೀ ಚಿಂತಕರು ಸಾಹಿತ್ಯವೂ ಮುಖ್ಯ, ಅದನ್ನು ಹೇಳಿದವರೂ ಮುಖ್ಯ ಎಂಬ ನಿರ್ಣಯಕ್ಕೆ ಬಂದರು. ಹಾಡುಗಾರರೂ ಮುಖ್ಯ ಹಾಡೂ ಮುಖ್ಯವಾಯಿತು. ಬುಡುಬುಡಿಕೆಯೂ ಮುಖ್ಯ, ಅವರ ಸಾಹಿತ್ಯವೂ ಮುಖ್ಯ ಎಂದಂತಾಯಿತು. ಕಲೆ ಮತ್ತು ಕಲಾವಿದ ಈ ಎರಡರ ಅವಶ್ಯಕತೆಯೂ ಇದೆ ಎಂದು ಹೇಳುವುದರ ಮೂಲಕ 'ತಳರಚನೆಗೆ' ಒತ್ತು ಕೊಟ್ಟರು. ಜನಸಾಮಾನ್ಯರ ಬೌದ್ಧಿಕತೆಗೆ ಶ್ರಮ ಸಂಸ್ಕೃತಿಗೆ ಬೆಲೆ ಕಟ್ಟುವ ಕೆಲಸ ಮಾಡಿದರು. ಈ ಮಾತಿಗೆ ಸಾಕ್ಷಿಯಾಗಿ ವಿವೇಕ ರೈ, ಬರಗೂರು ರಾಮಚಂದ್ರಪ್ಪ, ಕೃಷ್ಣಮೂರ್ತಿಹನೂರು ಅರವಿಂದ ಮಾಲಗತ್ತಿ, ರಂಗಾರೆಡ್ಡಿಕೋಡಿರಾಂಪುರ, ಜಿ.ಆರ್.ತಿಪ್ಪೇಸ್ವಾಮಿ, ಕೆ.ಆರ್.ದುರ್ಗಾದಾಸ್, ಹಿ.ಚಿ.ಬೋರಲಿಂಗಯ್ಯ, ಪುರುಷೋತ್ತಮ ಬಿಳಿಮಲೆ, ಹಿ.ಶಿ.ರಾಮಚಂದ್ರ ಗೌಡ, ಕೆ.ಚಿನ್ನಪ್ಪಗೌಡ, ಅಭಯಕುಮಾರ್.ಕೆ ಮೊದಲಾದವರ ಜಾನಪದ ಅಧ್ಯಯನಗಳು, ಚಿಂತನೆಗಳು ನಮ್ಮ ಮುಂದಿರುವುದನ್ನು ಗಮನಿಸಬಹುದು. ಜಾನಪದ ಎಂದೆಂದಿಗೂ ನಾಶವಾಗುವಂಥದ್ದಲ್ಲ. ಅದು ಸದಾ ಜೀವಂತಿಕೆಯಿಂದ ಕೂಡಿದುದು ಎಂಬ ವಾದವನ್ನು ಇವರು ಎತ್ತಿ ಹಿಡಿದರು. ಜಾನಪದ ಬದುಕಿನ ಜೊತೆಜೊತೆಯಲ್ಲಿಯೇ ಮುಂದು ವರೆಯುತ್ತದೆಂದು ಅಭಿಪ್ರಾಯಪಟ್ಟರು. ಸಿದ್ದಲಿಂಗಯ್ಯ, ಡಿ.ಲಿಂಗಯ್ಯ, ಕ್ಯಾತನಹಳ್ಳಿ ರಾಮಣ್ಣ, ಕಾಳೇಗೌಡ ನಾಗವಾರ, ಕನ್ನಡ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ಚಂದ್ರಶೇಖರ ಕಂಬಾರರ ನೇತೃತ್ವದಲ್ಲಿ ಜನಪದ ವಿಶ್ವಕೋಶ ಪ್ರಕಟವಾಯಿತು. ಇದರಲ್ಲಿ ಜನಪದ ಸಾಹಿತ್ಯ ಕ್ಷೇತ್ರದ ಸಮಗ್ರ ವಿವರಗಳ ಎಂಟು ಸಂಪುಟಗಳು ಪ್ರಕಟಗೊಂಡಿವೆ.

ಸಾಂಸ್ಕೃತಿಕ ವೀರರು, ಗಾಮದೇವತೆಗಳು, ಮಠಮಂದಿರಗಳು, ಸ್ಥಳನಾಮಗಳು – ಇತ್ಯಾದಿ ವಿಷಯಗಳೆಲ್ಲವೂ ಅಧ್ಯಯನಕ್ಕೆ ಒಳಪಟ್ಟವು. ಈ ಅಧ್ಯಯನಗಳ ಪ್ರಭಾವದಿಂದಾಗಿ ಬೇರೆ ಬೇರೆ ಸಂಕಥನಗಳು ಹುಟ್ಟಿಕೊಂಡವು. ಮಲೆಮಾದೇಶ್ವರ, ಮಂಟೇಸ್ವಾಮಿ, ಬಿಳಿಗಿರಿ ರಂಗಸ್ವಾಮಿ, ನಂಜುಂಡೇಶ್ವರ, ಹಾಲುಮತದ ಪುರಾಣ ಮುಂತಾದವರ ಸಾಧನೆಗಳ ಹಿನ್ನೆಲೆಯಲ್ಲಿ ಹುಟ್ಟಿಕೊಂಡ ದಕ್ಷಿಣ ಕರ್ನಾಟಕದ ಜನಪದ ಸಂಕಥನಗಳು ಕುತೂಹಲ ಕೆರಳಿಸಿದವು. ಚಿತ್ರದುರ್ಗ, ತುಮಕೂರು, ಬಳ್ಳಾರಿ ಇವು ಕರ್ನಾಟಕದ ಮಧ್ಯಭಾಗದಲ್ಲಿರುವ ಪ್ರದೇಶಗಳು. ಜುಂಜಪ್ಪನಕಾವ್ಯ ಬುಡಕಟ್ಟು ಹಿನ್ನೆಲೆಯಲ್ಲಿ ಹುಟ್ಟಿಕೊಂಡ ಸಂಕಥನ. ಗೊಲ್ಲರ ಇತರ ದೈವಗಳಾದ ಎತ್ತಪ್ಪ, ಪಾತಪ್ಪ, ಚಿತ್ರಲಿಂಗ ಇವರ ಮೇಲೂ ಸಂಕಥನಗಳಿವೆಯಾದರೂ ಜುಂಜಪ್ಪನ ಕಾವ್ಯದಷ್ಟು ವ್ಯಾಪಕತೆ ಪಡೆಯಲಿಲ್ಲ. ಹಾಗೆಯೇ ಉತ್ತರ ಕರ್ನಾಟಕದಲ್ಲಿ ಹಾಲುಮತಕಾವ್ಯ, ಫ್ಲೀಟರು ಸಂಗ್ರಹಿಸಿದ ಜನಪದ ಲಾವಣಿಗಳು, ಸಂಗ್ಯಾಬಾಳ್ಯ ದೃಶ್ಯ ರೂಪ, ಕಡ್ಲಿಮಟ್ಟಿ ಸ್ಟೇಷನ್ ಮಾಸ್ತರ ಗೀತ ಮಾದರಿಗಳು, ದಕ್ಷಿಣ ಕನ್ನಡ ಜಿಲ್ಲೆಯ ಸಿರಿ ಪಾಡ್ದನಗಳು, ವಿವಿಧ ಭಾಗದ ಇತರ ಜನಪದ ಸಂಕಥನಗಳು ಇವತ್ತಿನ ಸಂಶೋಧನೆಯ ವಸ್ತುವಾಗಿವೆ. ಜನಪದ–ಜಾನಪದ, ಶೂದ್ರರದು ಮಾತ್ರ ಜಾನಪದ, ಜನಪದ ಗೀತೆಗಳಷ್ಟೇ ಜಾನಪದ, ಮೌಖಿಕ ಪರಂಪರೆಯದು ಮಾತ್ರ ಜಾನಪದ ಇತ್ಯಾದಿ ಪರಿಕಲ್ಪನೆಗಳಾಚೆಗೂ ಜಾನಪದ ಸಂಶೋಧನೆ ಬಹುಮುಖಿಯಾಗಿ ಸಾಹುತ್ತಿದೆ, ಇದು ಇವತ್ತಿನ ತುರ್ತು.

ಹಳ್ಳಿಗಳು ನಾಶವಾದರೆ ಜೊತೆಯಲ್ಲಿಯೇ ಜಾನಪದವು ನಾಶವಾಗುತ್ತದೆ. ಅದು ನಾಶವಾಗುವ ಮುನ್ನವೇ ಅದನ್ನು ಸಂರಕ್ಷಿಸಬೇಕು. ಹಾಗೆಯೇ ಮುಂದಿನ ತಲೆಮಾರಿಗೆ ಉಳಿಸಬೇಕೆಂಬ ಛಲದಿಂದಾಗಿಯೇ ಎಚ್.ಎಲ್.ನಾಗೇಗೌಡ, ಗದ್ದಗೀಮಠ, ಎಂ.ಎಸ್.ಸುಂಕಾಪುರ, ಮತಿಘಟ್ಟ ಕೃಷ್ಣಮೂರ್ತಿ, ಗೊರೂರು, ಚೆನ್ನಬಸಪ್ಪ, ಕರಾಕೃ, ಡಿ.ಲಿಂಗಯ್ಯ ಮೊದಲಾದವರು ಜಾನಪದ ಸಾಹಿತ್ಯವನ್ನು ಸಂಗ್ರಹಿಸುವ ಕಾರ್ಯಕ್ಕೆ ತೊಡಗಿದರು.

ಎಪ್ಪತ್ತರ ದಶಕದ ಹೊತ್ತಿನಲ್ಲಿಯೇ ಜಾನಪದವನ್ನು ಹಲವು ನೆಲೆಗಳಲ್ಲಿ ಅಧ್ಯಯನಕ್ಕೆ ಒಳಪಡಿಸಿರುವುದು ಕಂಡುಬರುತ್ತದೆ. ಆಕಾಶ ಜಾನಪದ, ಜಾತ್ರೆಗಳು, ಪ್ರಾಣಿ ಜಾನಪದ, ಸಸ್ಯ ಜಾನಪದ, ಶರೀರ ಜಾನಪದ, ಗ್ರಾಮ ದೇವತೆಗಳು, ಹಳ್ಳಿಗಳ ಅಧ್ಯಯನ (ಗ್ರಾಮ), ಜಿಲ್ಲಾ, ತಾಲ್ಲೂಕುಗಳನ್ನು ಗುರಿಯಾಗಿರಿಸಿಕೊಂಡು ಜಾನಪದದ ಅಧ್ಯಯನಗಳು ನಡೆದವು. ಪಿಹೆಚ್.ಡಿ. ಸಂಶೋಧನ ಪ್ರಬಂಧಗಳು ಹೆಗ್ಗಿಲ್ಲದೆ ಒಂದರ ಮೇಲೊಂದರಂತೆ ಪ್ರಕಟವಾಗತೊಡಗಿದವು. ಕಾಡುಗೊಲ್ಲರ ಹಟ್ಟಿ ಒಂದು ಅಧ್ಯಯನ, ಕಾಡುಗೊಲ್ಲರ ನಂಬಿಕೆ ಮತ್ತು ಸಂಪ್ರದಾಯಗಳು, ಲಂಬಾಣಿಗಳು: ಒಂದು ಅಧ್ಯಯನ, ಎರವರು: ಒಂದು ಅಧ್ಯಯನ, ಕೆಂಬಟ್ಟಿಯರು, ಕಪ್ಪೆ ಹೊಲೆಯರು, ಹಕ್ಕಿಪಿಕ್ಕಿಯರು, ಪಿಂಜಾರರು, 'ಚೆನ್ನಾದೇವಿ ಅಗ್ರಹಾರ : ಒಂದು ಜಾನಪದೀಯ ಅಧ್ಯಯನ', ಗೊಂಡರು, ಬೈರರು: ಒಂದು ಅಧ್ಯಯನ, ಹಸಲರು ಮುಂತಾದ ಜನಾಂಗೀಯ ಅಧ್ಯಯನಗಳು ನಡೆಯತೊಡಗಿದವು. ಭೂತಾರಾಧನೆ: ಒಂದು ಜಾನಪದೀಯ ಅಧ್ಯಯನ, ಮೊಗೇರರು ಜನಾಂಗೀಯ ಅಧ್ಯಯನ, ತುಳುನಾಡಿನ ಸಮಗ್ರ ತುಳು ಸಾಹಿತ್ಯ ಕುರಿತಂತೆ ಮಹತ್ವದ ಅಧ್ಯಯನ, ತುಳು ಜನಪದ ಸಾಹಿತ್ಯ, ಕೊರಗರ ಕುರಿತ ಅಧ್ಯಯನ ಮೊದಲಾದ ಅಧ್ಯಯನಗಳು ಕನ್ನಡದಲ್ಲಿ ನಡೆದವು. ಸಂಶೋಧನೆಯ ನೆಲೆಗಳನ್ನು ವಿಸ್ತರಿಸಿದವು.

ಜಾನಪದ ಎನ್ನುವುದು ಜನತೆ ಮತ್ತು ಪರಿಸರದ ಸಾಮೂಹಿಕ ಆಶೋತ್ತರಗಳ ಕ್ರಿಯಾ ವಿಧಾನ, ಶ್ರಮ ಸಂಸ್ಕೃತಿಯ ಭಾಗವಾಗಿ ಜಾನಪದ ಸಂಬಂಧವನ್ನು ಸ್ಥಾಪಿಸಿತ್ತು. ಜನಪದರ ದಿನನಿತ್ಯದ ಕಾಯಕದೊಂದಿಗೆ ಅವರ ಸಾಹಿತ್ಯ ಸೃಷ್ಟಿಯಾಯಿತು. ಕೃಷಿ ಚಟುವಟಿಕೆಯ ಅಂದಿನ ದಿನಮಾನದಲ್ಲಿ ಸಮೃದ್ಧವಾಗಿತ್ತು. ಆಗಲಷ್ಟೇ ಸಮೃದ್ಧವಾದ ಜಾನಪದವು ಸೃಷ್ಟಿಯಾಗಿತ್ತು.

## ಆಕರ ಗ್ರಂಥಗಳು


- **ಪ್ರೊ. ಶಿವರಾಮಯ್ಯ** : ಗ್ರಾಮೀಣ ಸಂದರ್ಭಕೋಶ – ಪ್ರೊ. ಶಿವರಾಮಯ್ಯ
- **ಡಾ. ಜಿ.ಎಸ್.ಶಿವರುದ್ರಪ್ಪ (ಸಂ.)** : ಕರ್ನಾಟಕ ಜಾನಪದ.
- **ಡಾ. ಚಂದ್ರಶೇಖರ ಕಂಬಾರ (ಸಂ.)** : ಕನ್ನಡ ಜಾನಪದ ವಿಶ್ವಕೋಶ – (ಸಂ. 1–5)
- **ಡಾ. ಜಿ.ಆರ್.ತಿಪ್ಪೇಸ್ವಾಮಿ** : ಜಾನಪದ ಪರಿಭಾವನೆ.
- **ಡಾ. ಜಿ.ಆರ್.ತಿಪ್ಪೇಸ್ವಾಮಿ** : ಜಾಗತೀಕರಣ ಮತ್ತು ಜಾನಪದ.
- **ಕರ್ನಾಟಕ ಸಾಹಿತ್ಯ ಅಕಾಡೆಮಿ** : ಶಿಷ್ಟ ಸಾಹಿತ್ಯದಲ್ಲಿ ಜಾನಪದ.
- **ಡಾ. ಹಿ.ಶಿ. ರಾಮಚಂದ್ರೇಗೌಡ** : ಶತಮಾನದ ಜಾನಪದ.
- **ಡಾ. ಹಿ.ಶಿ. ರಾಮಚಂದ್ರೇಗೌಡ, ಡಾ. ಚಕ್ಕೆರೆ ಶಿವಶಂಕರ್** : ಜಾನಪದ ತಲೆಮಾರು – 12, ಸಂ.
- **ಡಾ. ಕೇಶವ ಶರ್ಮ ಕೆ.** : ಕನ್ನಡ ಸಂಶೋಧನೆಯ ತೋರುನೋಟ.
- **ನಾಡೋಜ ಪ್ರೊ. ಕಮಲ ಹಂಪನಾ (ಸಂ.)** : ಸಂಶೋಧನೆ.
- **ಡಾ. ಹಾ.ಮಾ.** : ನಾಯಕ ಜಾನಪದ ಸ್ವರೂಪ.
- **ದೇಜಗೌ (ಸಂ.)** : ಸಿರಿಯೊಡಲು.
- **ದೇಜಗೌ** : ಜಾನಪದ ಅಧ್ಯಯನ.
- **ಡಾ.ನಂ. ತಪಸ್ವಿ ಕುಮಾರ್** : ಸಂಸ್ಕೃತಿ ಅಧ್ಯಯನ.
- **ಡಾ.ನಂ. ತಪಸ್ವೀ ಕುಮಾರ್** : ಸಂಸ್ಕೃತಿ ವಿಕಾಸ.
- **ಡಾ.ನಂ. ತಪಸ್ವೀ ಕುಮಾರ್** : ಜನಪದ ಗೀತೆಗಳ ಸಾಂಸ್ಕೃತಿಕ ಅಧ್ಯಯನ.
- **ಆರ್. ರಾಮಕೃಷ್ಣ** : ಸಾಂಸ್ಕೃತಿಕ ಮಾನವಶಾಸ್ತ್ರ.
- **ಅಂಬಳಿಕೆ ಹಿರಿಯಣ್ಣ** : ಜಾನಪದ ಪರಿಶೋಧನ.


■■

ಸೈದ್ಧಾಂತಿಕ

# ಸ್ಟುವರ್ಟ್ ಹಾಲ್ ಹಾಗೂ ಆತನ ಜೋಡಣೆ ಸಿದ್ಧಾಂತ

✍ **ಡಾ. ಜ್ಯೋತಿ ಕೆ.ಬಿ.** ಸಹಾಯಕ ಪ್ರಾಧ್ಯಾಪಕರು, ಸರಕಾರಿ ಪ್ರಥಮ ದರ್ಜೆ ಕಾಲೇಜ, ಗುಬ್ಬಿ–572216.

**ಸ್ಟು**ವರ್ಟ್ ಹಾಲ್ ಜಮೈಕಾದಲ್ಲಿ ಹುಟ್ಟಿದ ಬ್ರಿಟೀಶ್ ಮಾರ್ಕ್ಸವಾದ ಸಮಾಜವಿಜ್ಞಾನಿ. The Bismingham School of Cultured Studies ಅಥವಾ British Cultural Studies ವಿಚಾರ ಸಿದ್ಧಾಂತದ ಪ್ರಮುಖ ಸ್ಥಾಪಕ. ಈತನ ಕಾಲ 1932 ರಿಂದ 2014. ಭಾಷೆಯು ಅಧಿಕಾರ ಹಾಗೂ ಸಂಸ್ಥೆಗಳ ವ್ಯೂಹದಲ್ಲಿಯೇ ಕೆಲಸ ನಿರ್ವಹಿಸುತ್ತದೆ. ಸಂಸ್ಕೃತಿಯು ಸಾಮಾಜಿಕ ಚಟುವಟಿಕೆಯ ಸ್ಥಳವಾಗಿದ್ದು ಅಲ್ಲಿಯೇ ಅಧಿಕಾರ ಸಂಬಂಧಗಳು ಸ್ಥಾಪಿತವಾಗಿರುತ್ತವೆ ಎನ್ನುವುದು ಅವನ ಪ್ರಮುಖ ವಾದ ಹಾಗು ಅದೇ ಅಧಿಕಾರ ಸಂಬಂಧಗಳು ಅಸ್ಥಿರವಾಗಿರುತ್ತವೆ ಎಂದು ಆತ ವಿವರಿಸುತ್ತಾನೆ. ಸ್ಟುವರ್ಟ್ ಹಾಲ್‌ನ Reception Theory ಕೂಡಾ ಒಂದು ಉತ್ತಮ ಕೊಡುಗೆಯಾಗಿದೆ.

ಒಂದು ಐತಿಹಾಸಿಕ ಕಾಲಘಟ್ಟದಲ್ಲಿ ಸಾಮಾಜಿಕ ಚಾಲನೆ, ಬದಲಾವಣೆ, ಆಂದೋಲನ ಅಥವಾ ಶಕ್ತಿ ಉಗಮವಾಗಬೇಕಾದರೆ ಒಂದು ಸಮಾಜವು ಸಾಮಾನ್ಯ ಸಾಮೂಹಿಕ ಪರಿಸ್ಥಿತಿಯನ್ನು ಹೊಂದಿದ್ದು ತನ್ನ ಎಲ್ಲಾ ಗುಂಪು ವರ್ಗಗಳನ್ನು ಒಂದೇ ಏಕೀಕರಿಸಿದ ವಿಚಾರ ಸಿದ್ಧಾಂತದ ಅಡಿಯಲ್ಲಿ ಸಾಮೂಹಿಕ ನಾಗರಿಕನಾಗಿ ರಚಿತವಾಗಬೇಕಾಗುತ್ತದೆ. ಈ ರೀತಿಯ ರಚನೆ ಅಥವಾ ಮಾರ್ಪಾಡು ಆಗಬೇಕಾದರೆ ಜೋಡಣೆ (Articulation) ಆಗಬೇಕಾದದ್ದು ಅನಿವಾರ್ಯ ಎಂದು ಸ್ಟುವರ್ಟ್ ಹಾಲ್ ಅಭಿಪ್ರಾಯ ಪಡುತ್ತಾರೆ. ಸಾಮಾಜಿಕ, ರಾಜಕೀಯ ಪ್ರಜೆಗಳ ಗ್ರಹಿಕೆಯಲ್ಲಿ ವಿವಿಧ ರೀತಿಯಲ್ಲಿ ಸ್ಪರ್ಧಿಸುತ್ತಿರುವ ವಿಚಾರ ಸಿದ್ಧಾಂತಗಳು ಒಂದಕ್ಕೊಂದು ಒಂದು ವಿಧ'ವಾದ ಹೊಂದಾಣಿಕೆ ಅಥವಾ ಸಂಕರವಾಗಿ ಒಗ್ಗೂಡಿರುವುದನ್ನು ಸ್ಟುವರ್ಟ್ ಹಾಲ್ ಜೋಡಣೆ ಅಥವಾ Articulation ಎಂದು ಕರೆಯುತ್ತಾರೆ. ಈ ಜೋಡಣೆಯಲ್ಲಿ ವಿಚಾರ ಸಿದ್ಧಾಂತಗಳು ಮೇಲು ಕೀಳಿನ ಸ್ವರಗಳಲ್ಲಿ ಹೊಂದಿಕೊಂಡಿರುತ್ತವೆ ಮತ್ತು ಸಾಮಾಜಿಕ ಗ್ರಹಿಕೆಯಲ್ಲಿ ಸಮ್ಮತಿ ಪಡೆದುಕೊಂಡಿರುತ್ತವೆ. ಈ ಜೋಡಣೆ ಯಾವಾಗಲೂ ಅಸ್ಥಿರ ಹಾಗೂ ನಿರ್ಣಾಯಕವಾಗಿರುತ್ತವೆ. ಹಾಗೂ ಬಿಕ್ಕಟ್ಟಿನಿಂದ ಕೂಡಿರುತ್ತದೆ. ಈ ಜೋಡಣೆಯಲ್ಲಿ ಯಾವ ವಿಚಾರ ಸಿದ್ಧಾಂತ ಯಾವ ಐತಿಹಾಸಿಕ ಸಂದರ್ಭದಲ್ಲಾದರೂ ಮೇಲೆ ಬರಬಹುದು ಹಾಗೂ ಕೆಳಗೆ ಹೋಗಬಹುದು. ಉದಾಹರಣೆಗೆ : ಭಾರತದ ಸ್ವಾತಂತ್ರ್ಯ ಸಂಗ್ರಾಮದ ಸಮಯದಲ್ಲಿ ದೇಶದ ಹಿತಕ್ಕಾಗಿ ಹಿಂದೂ ರಾಷ್ಟ್ರೀಯವಾದ, ಅಲ್ಪಸಂಖ್ಯಾತ ರಾಷ್ಟ್ರೀಯವಾದ, ದಲಿತ ರಾಷ್ಟ್ರೀಯವಾದ, ಕಾಂಗ್ರೆಸ್ ರಾಷ್ಟ್ರೀಯವಾದ, ಉಗ್ರಗಾಮ ರಾಷ್ಟ್ರೀಯವಾದ, ಸೌಮ್ಯ ರಾಷ್ಟ್ರೀಯವಾದದಂತಹ ವಿಚಾರ ಸಿದ್ಧಾಂತಗಳಿದ್ದರೂ ಕೂಡ ಅಂತಿಮವಾಗಿ ಗಾಂಧಿಯ ಕಾಂಗ್ರೆಸ್ ರಾಷ್ಟ್ರೀಯವಾದ ಯಜಮಾನ ವಿಚಾರ ಸಿದ್ಧಾಂತವಾಗಿ ಸಾಮಾಜಿಕ ಗ್ರಹಿಕೆಯಲ್ಲಿ ಮನ್ನಣೆ ಪಡೆಯಿತು. ಹಾಗೆಯೇ ಈ ರಾಷ್ಟ್ರೀಯವಾದಕ್ಕೆ ವಿರೋಧವಿರಲಿಲ್ಲವೆಂದಲ್ಲ. ಸಾಮಾಜಿಕ ಗ್ರಹಿಕೆಯಲ್ಲಿ ಈ ಏಣಿ ಶ್ರೇಣಿಯ ವಿಚಾರ ಸಿದ್ಧಾಂತವನ್ನು ಆತ ಜೋಡಣೆ ಎಂದು ಕರೆಯುತ್ತಾನೆ.

ಇಂತಹ ಸಾಮಾಜಿಕ ಪರಿಸ್ಥಿತಿಯಲ್ಲಿ ಪ್ರತಿಯೊಂದು ವಿಚಾರ ಸಿದ್ಧಾಂತಗಳೂ ಕೂಡ ತನ್ನ ಹಿಂಬಾಲಕರನ್ನು ನಿಷ್ಠಾವಂತರನ್ನು ಹುಡುಕುತ್ತಿರುತ್ತವೆ. ಈ ವಿಚಾರ ಸಿದ್ಧಾಂತಗಳು ತನ್ನ ನಿಷ್ಠಾವಂತರಿಗೆ ಹಲವಾರು ರೀತಿಯಲ್ಲಿ ಶಕ್ತಿ ತುಂಬುತ್ತದೆ. ಹಾಗೂ ಆ ಸಾಮಾಜಿಕ ಪರಿಸ್ಥಿತಿಯ ಬಗ್ಗೆ ಅರಿವು ಮೂಡಿಸುತ್ತದೆ. ಸ್ಟುವರ್ಟ್ ಹಾಲ್‌ನ Articulation ವಾದವು ವ್ಯಕ್ತಿ ಹೇಗೆ ವಿಚಾರ ಸಿದ್ಧಾಂತಗಳನ್ನು ಗ್ರಹಿಸುತ್ತಾನೆ ಎನ್ನುವುದಕ್ಕಿಂತ ವಿಚಾರ ಸಿದ್ಧಾಂತಗಳು ಹೇಗೆ ಸಾಮಾಜಿಕವಾಗಿ ವರ್ತಿಸುತ್ತವೆ ಎನ್ನುವುದರ ಬಗ್ಗೆ ಗಮನ ಹರಿಸುತ್ತವೆ.

ಪ್ರತಿಯೊಂದು ವಿಚಾರ ಸಿದ್ಧಾಂತ ಕೂಡ ಇತರ ವಿಚಾರ ಸಿದ್ಧಾಂತಗಳೊಂದಿಗೆ ಏಣಿ ಶ್ರೇಣಿಯ ಆಟದಲ್ಲಿ ಮೇಲೇರಲು ಪ್ರಯತ್ನಿಸುತ್ತಿರುತ್ತವೆ. ಹಾಗೆಯೇ ಮೇಲಿರುವ ವಿಚಾರ ಸಿದ್ಧಾಂತಗಳು ತಮ್ಮ ಸ್ಥಾನ ಕಾಯ್ದಿಟ್ಟುಕೊಳ್ಳುವ ಪ್ರಯತ್ನದಲ್ಲಿರುತ್ತವೆ. ಈ ಹೋರಾಟ ಪಠ್ಯಗಳ ಮೂಲಕ ನಿರಂತರವಾಗಿ ಮೆರೆಯುತ್ತಲೇ ಇರುತ್ತವೆ. ಪಠ್ಯಗಳು ಈ ಹೋರಾಟವನ್ನು ಪರಿಚಲನೆ ಮಾಡುತ್ತಲೇ ಇರುತ್ತವೆ. ಈ ಪರಿಚಲಿಸುತ್ತಿರುವ ಅರ್ಥಗಳನ್ನು ಸ್ಟುವರ್ಟ್ ಹಾಲ್ ಪೌಲ್ ಡಿ.ಮನ್ ರೊಟ್ಟಿಗೆ ಸೇರಿ ಒಂದು ವಿಧಾನದಲ್ಲಿ ಅರ್ಥೈಸಿಕೊಳ್ಳುವ ಪ್ರಯತ್ನ ಮಾಡುತ್ತಾರೆ. ಅದನ್ನು Circulation of Meaning CxÀªÁ Circulation of Ideological Meaning ಎಂದು ಕರೆಯುತ್ತಾರೆ. ಪಠ್ಯಗಳಲ್ಲಿ ಈ ಅರ್ಥಗಳ ಪರಿಚಲನೆಯನ್ನು ಅರ್ಥೈಸಿಕೊಳ್ಳುವುದರಿಂದ ಸಾಮಾಜಿಕ ಕಾಲಘಟ್ಟದಲ್ಲಿ ಹೇಗೆ ವಿಚಾರ ಸಿದ್ಧಾಂತಗಳು ಜೋಡಣೆ (Articulate) ಆಗಿವೆ ಎನ್ನುವುದನ್ನು ತಿಳಿಯಬಹುದಾಗಿದೆ.

## Works Cited


- "Stuart Hall".en.m.wikipedia. org
- Morley David, Stuart Hall "Critical Dangers in Cultural Studies" 2005, London.
- Taylor X Francis-e-library 2005.


■■


**– ಸೂಚನೆ –**

ಲೇಖನ ಹಾಗೂ ಸಂಶೋಧನಾ ಲೇಖನಗಳನ್ನು ಕಳಿಸುವವರು ಕಡ್ಡಾಯವಾಗಿ ಪತ್ರಿಕೆಯ ಸದಸ್ಯತ್ವ ಪಡೆದವರಾಗಿರಬೇಕು. ಲೇಖನವಾದಲ್ಲಿ 1500 ಶಬ್ದಗಳನ್ನು ಮೀರಬಾರದು ಹಾಗೂ ಸಂಶೋಧನಾ ಲೇಖನವಾದಲ್ಲಿ 2000 ಶಬ್ದಗಳನ್ನು ಮೀರಿರಬಾರದು. ಹೆಚ್ಚಿನ ಸಂಖ್ಯೆಯಲ್ಲಿ ಪತ್ರಿಕೆಗೆ ಚಂದಾದಾರರಾಗಿ ಪತ್ರಿಕೆಯನ್ನು ಪ್ರೋತ್ಸಾಹಿಸಿರಿ. ಉತ್ತಮ ಲೇಖನ ಅಥವಾ ಸಂಶೋಧನಾ ಲೇಖನಗಳನ್ನು ಕಳಿಸಿರಿ.

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಯುವಕರಲ್ಲಿ ದೇಶಭಕ್ತಿ ಬೆಳೆಸುವಲ್ಲಿ ಶಿಕ್ಷಕರ ಪಾತ್ರ

✍ **ಡಾ.ಎಸ್.ಎಸ್.ಭೂಮಣ್ಣವರ,** ಉಪನ್ಯಾಸಕರು, ಬಿ.ವ್ಹಿ.ವ್ಹಿ ಸಂಘದ ಶಿಕ್ಷಣ ಮಹಾವಿದ್ಯಾಲಯ, ಬಾಗಲಕೋಟ.

**'ಜನನೀ ಜನ್ಮ ಭೂಮಿಶ್ಚ ಸ್ವರ್ಗಾದಪಿ ಗರೀಯಸಿ'** ಎಂಬ ಶ್ಲೋಕವು ಮನುಷ್ಯರಿಗೆ ಜನ್ಮ ನೀಡಿದ ತಾಯಿಯೂ, ಮಾತೃ ಭೂಮಿಯೂ ಸ್ವರ್ಗಕ್ಕಿಂತ ಮಿಗಿಲಾದದ್ದೆಂದು ಹೇಳುತ್ತದೆ. ಮಕ್ಕಳಲ್ಲಿ ದೇಶಭಕ್ತಿಯ ಭಾವನೆಯಿದ್ದರೆ ಅದು ದೇಶದ ಒಗ್ಗಟ್ಟು, ಪ್ರಗತಿಗೆ ಕಾರಣವಾಗುತ್ತದೆ ಎಂದು ನಮ್ಮ ಹಿರಿಯರು ಮೊದಲಿನಿಂದಲೂ ದೇಶ ಪ್ರೇಮಕ್ಕೆ ಒತ್ತು ನೀಡುತ್ತಾ ಬಂದಿದ್ದಾರೆ. ಇಂದಿನ ತಂತ್ರಜ್ಞಾನದ ಯುಗದಲ್ಲಿ ರಾತ್ರಿ ಕನಸಿನಲ್ಲಿ ಕಂಡದ್ದನ್ನು ಬೆಳಿಗ್ಗೆ ಪಡೆಯಬಹುದು. ಈ ತಂತ್ರಜ್ಞಾನ ಮತ್ತು ಆಧುನಿಕ ಉಪಕರಣಗಳ ಮೂಲಕ ಮಕ್ಕಳ ಮನಸ್ಸಿನಲ್ಲಿ ದೇಶಭಕ್ತಿಯ ಭಾವ ಮೂಡಿಸಲು ಶಿಕ್ಷಕರು ಪ್ರಯತ್ನಿಸಬೇಕು. ಇಂದಿನ ಮಕ್ಕಳಲ್ಲಿ ದೇಶಪ್ರೇಮದ ವಿಚಾರದಲ್ಲಿ ನಿರಾಸಕ್ತ ಭಾವನೆಯಿರುವುದನ್ನು ನೋಡುತ್ತೇವೆ. ಇದು ಹೀಗೇ ಮುಂದುವರಿದರೆ ಭಾರತವು ಪುನಃ ಸ್ವಾತಂತ್ರ್ಯಕ್ಕಾಗಿ ಹೋರಾಡುವ ದಿನಗಳು ಉಂಟಾಗಬಹುದು.

ಜಗತ್ತಿನಲ್ಲಿಯೇ ದೇಶಪ್ರೇಮಕ್ಕೆ ಹೆಸರಾದ ದೇಶವೆಂದರೆ ಜಪಾನ್ ಎಂದು ನಮಗೆಲ್ಲಾ ತಿಳಿದೇ ಇದೆ. ಅಲ್ಲಿನ ಶಿಕ್ಷಕರು ಮಕ್ಕಳಿಗೆ ದೇವರಿಗಿಂತಲೂ ಪ್ರಥಮ ಪ್ರಾಮುಖ್ಯತೆಯನ್ನು ದೇಶಪ್ರೇಮಕ್ಕಾಗಿ ನೀಡುವಂತಹ ಸಂಸ್ಕಾರವನ್ನು ಮಕ್ಕಳಲ್ಲಿ ಬೆಳೆಸುತ್ತಾರೆ. ಇದಕ್ಕೆ ಒಳ್ಳೆಯ ಉದಾಹರಣೆ ನಮ್ಮ ದೇಶದ ಪ್ರಸಿದ್ಧ ಯೋಗಿಯೊಬ್ಬರು ಜಪಾನ್‌ನ ಕಾರ್ಯಕ್ರಮಕ್ಕೆ ಕರೆಯ ಮೇರೆಗೆ ಹೋಗಿರುತ್ತಾರೆ. ಅಲ್ಲಿ ಅವರು ಬೆಳಗಿನ ಉಪಾಹಾರಕ್ಕೆಂದು ಹಣ್ಣು ತರಲು ರೈಲು ನಿಲುಗಡೆಯಾದ ಜಾಗದಲ್ಲಿ ಪ್ರಯತ್ನಿಸುತ್ತಾರೆ. ಆದರೆ ಯಾವ ನಿಲ್ದಾಣದಲ್ಲೂ ಅವರಿಗೆ ಹಣ್ಣು ದೊರೆಯದೆ ಛೇ.. ಇದೆಂತಹ ದೇಶ...! ಇಲ್ಲಿ ಕನಿಷ್ಟ ತಿನ್ನಲು ಹಣ್ಣು ಕೂಡಾ ದೊರೆಯುವುದಿಲ್ಲವಲ್ಲಾ..! ಎಂದು ಮಾತನಾಡಿಕೊಂಡದ್ದನ್ನು ಕೇಳಿಸಿಕೊಂಡ ಯುವಕನೊಬ್ಬ ರೈಲಿನಿಂದ ಕೆಳಗಿಳಿದು ಸ್ವಾಮೀಜಿಗೆ ಹಣ್ಣಿನ ಕವರ್ ಒಂದನ್ನು ತಂದು ನೀಡಿದ. ಹಸಿದಿದ್ದ ಸ್ವಾಮೀಜಿವರಿಗೆ ಸಂತೋಷವಾಯಿತು. ಹಣ್ಣಿನ ಹಣವೆಷ್ಟು? ಎಂದುಕೇಳಿ ನೀಡಲು ಮುಂದಾದರು. ಆದರೆ ಆ ಯುವಕ ಹಣವನ್ನು ನಯವಾಗಿ ತಿರಸ್ಕರಿಸಿ, ಸ್ವಾಮೀಜಿ ತಾವು ಭಾರತದವರಂತೆ ಕಾಣುತ್ತೀರಿ, ನಮ್ಮಲ್ಲಿ ನಿಮ್ಮ ದೇಶದಲ್ಲಿ ದೊರೆಯುವಂತೆ ಸಿಕ್ಕ ಸಿಕ್ಕಲ್ಲಿ ಆಹಾರ, ಹಣ್ಣು ಇತ್ಯಾದಿ ಪದಾರ್ಥಗಳು ದೊರೆಯುವುದಿಲ್ಲ, ಅದಕ್ಕೆಂದೇ ಪ್ರತ್ಯೇಕ ಜಾಗವಿರುತ್ತದೆ, ಹಾಗಾಗಿ ತಾವು ಭಾರತಕ್ಕೆ ಹಿಂದುರಿಗಿದ ಮೇಲೆ ಜಪಾನಿನಲ್ಲಿ ಹಣ್ಣು ದೊರೆಯುವುದಿಲ್ಲ ಎಂದು ಮಾತ್ರ ಹೇಳಬೇಡಿ ನನಗೆ ಅಷ್ಟು ಸಾಕು, ಎಂದನಂತೆ. ಆ ಯುವಕನ ದೇಶಭಕ್ತಿ ಕಂಡು ಸ್ವಾಮೀಜಿ ಅವಕ್ಕಾದರಂತೆ. ಇದು ಜಪಾನಿನ ಸಂಸ್ಕೃತಿ. ಮಣ್ಣಿನ ಮುದ್ದೆಯಂತಿರುವ ವಿದ್ಯಾರ್ಥಿಗಳನ್ನು ಬೇಕಾದ ಆಕಾರ ಕೊಡುವ ಸದಾವಕಾಶವಿರುವುದು ಶಿಕ್ಷಕರಿಗೆ ಮಾತ್ರ. ಅದು ಸೌಭಾಗ್ಯವೇ ಸರಿ. ದೇಶಭಕ್ತಿಯ ಭಾವವನ್ನು ಮಕ್ಕಳ ಮನಸ್ಸಿನಲ್ಲಿ ಬೇರೂರುವಂತೆ ಮಾಡಲು ಕೇವಲ ಸ್ವಾತಂತ್ರ್ಯ ದಿನಾಚರಣೆ ಅಥವಾ ಗಣರಾಜ್ಯೋತ್ಸವಗಳಿಗೆ ಅಥವಾ ಒಂದು ವಿಷಯ ಬೋಧನೆಗೆ ಸೀಮಿತವಾಗದಿರಲಿ. ದೇಶದ ಹಿರಿಮೆಯ ಬಗ್ಗೆ ಹೇಳಲು ಭಾರತಕ್ಕೆ ಸಂಬಂಧಿಸಿದ ಪಾಠಗಳು ಅಥವಾ ದೇಶಭಕ್ತಿ ಕವನಗಳೇ ಇರಬೇಕೆಂದೇನಿಲ್ಲ. ಪ್ರತಿದಿನ ಪಾಠದ ಪ್ರಾರಂಭದಲ್ಲಿ ಭಾರತದ ಹಿರಿಮೆಯ ಬಗ್ಗೆ ಒಂದೆರಡು ವಿಚಾರಗಳನ್ನು ಹಂಚಿಕೊಳ್ಳಬಹುದು, ಸ್ವಾತಂತ್ರ್ಯ ಸಂಗ್ರಾಮದ ಪ್ರಸಂಗಗಳು, ಘಟನೆಗಳು, ಕತೆಗಳು, ಸ್ವಾತಂತ್ರ್ಯ ಹೋರಾಟಗಾರರು, ಹುತಾತ್ಮರ ಕಥೆಗಳನ್ನು ಮಕ್ಕಳಿಗೆ ಹೇಳುವ ಮೂಲಕ ಅವರಲ್ಲಿ ದೇಶ ಪ್ರೇಮವನ್ನು ಬಿತ್ತಬೇಕು. ಅವರಲ್ಲಿ ಮಾಡುವ ಸುವರ್ಣಾವಕಾಶ ಸಿಗುವುದು ಶಿಕ್ಷಕರಿಗೆ ಮಾತ್ರ.

ಹಸಿ ಮಣ್ಣಿನಿಂದ ಬೇಕಾದ ಆಕೃತಿಗಳನ್ನು ಮಾಡಿ ನಿಲ್ಲಿಸಬಹುದು. ಮಕ್ಕಳ ಮನಸ್ಸು ಕೂಡ ಹಸಿಮಣ್ಣಿನ ಮುದ್ದೆಯಂತೆ ಅದರಲ್ಲಿ ಶಿಕ್ಷಕರು ಬೇಕಾದದ್ದನ್ನು ಮೂಡಿಸಬಹುದು. ಇಂದಿನ ಮಕ್ಕಳಲ್ಲಿರುವ ವಿದೇಶಿ ವ್ಯಾಮೋಹ ಹಾಗೂ ಯುವಕರು ಭಯೋತ್ಪಾದನಾ ಚಟುವಟಿಕೆಗಳಿಗೆ ಗುರಿಯಾಗುತ್ತಿರುವುದನ್ನು ನೋಡಿದಾಗ ಇದಕ್ಕೆ ಕಾರಣ, ಎಲ್ಲೋ ಒಂದು ಕಡೆ ಅವರಲ್ಲಿ ದೇಶಭಕ್ತಿಯ ಕೊರತೆ ಇದೆಯೆಂದು ನಮಗೆ ಅನ್ನಿಸುತ್ತದೆಯಲ್ಲವೆ ? ಇಂದು ಒಬ್ಬ ಹುಡುಗಿ ಅಥವಾ ಹುಡುಗ ತಮ್ಮ ಪ್ರೇಮಕ್ಕಾಗಿ ಪ್ರಾಣಬಿಡುವ ಸುದ್ದಿಯನ್ನು ಓದುವಾಗ, ಇದೇ ಪ್ರೀತಿ ದೇಶದ ಮೇಲಿದ್ದಿದ್ದರೆ ನಮ್ಮ ದೇಶವು ಅಗಾಧ ಸಾಧನೆ ಮಾಡಬಹುದಿತ್ತಲ್ಲ ಎಂದು ಅನ್ನಿಸುತ್ತದೆ. ಮದನ್ ಮೋಹನ್ ಮಾಲವೀಯ ಅವರು (ಬನಾರಸ್ ಹಿಂದೂ ವಿಶವಿದ್ಯಾಲಯದ ಸ್ಥಾಪಕರು) 'ಮಕ್ಕಳ ಮನಸ್ಸನ್ನು ಪರಿವರ್ತಿಸುವುದು ಶಿಕ್ಷಕನ ಕೈಯಲ್ಲಿದೆ, ಅವನು ಸ್ವತಃ ದೇಶಪ್ರೇಮಿಯಾಗಿದ್ದರೆ, ತನ್ನ ಭಕ್ತಿಯನ್ನು ದೇಶದ ಏಳ್ಗೆಗೆ, ರಾಷ್ಟ್ರದ ಉನ್ನತಿಗೆ ಮೀಸಲಿಟ್ಟರೆ ಮತ್ತು ತನ್ನ ಜವಾಬ್ದಾರಿಯನ್ನು ಅರಿತುಕೊಂಡರೆ, ಅವನು ಧಾರ್ಮಿಕವಾಗಿ ಮತ್ತು ಕೋಮು/ಪ್ರಾದೇಶಿಕ ಪ್ರಯೋಜನಕ್ಕಿಂತ ಹೆಚ್ಚಾಗಿ ರಾಷ್ಟ್ರೀಯ ಲಾಭಗಳಿಸುವ ದೇಶಭಕ್ತ ಪುರುಷ ಹಾಗೂ ಮಹಿಳೆಯರನ್ನು ಉತ್ಪಾದಿಸಬಲ್ಲನು' ಎಂದು ಹೇಳುತ್ತಾರೆ. ಮಕ್ಕಳಲ್ಲಿ ಇಂದು ಅತಿಯಾದ ಸ್ವಾರ್ಥ ಮನೋಭಾವ ಮೂಡುತ್ತಿದೆ. ಎಲ್ಲದರಲ್ಲೂ ಇದನ್ನು ಮಾಡಿದರೆ ಏನು ಲಾಭ ? ಅವರನ್ನು ಮಾತನಾಡಿಸಿದರೆ ಏನು ಅನುಕೂಲವಾಗುತ್ತದೆ? ಎಂದು ನೋಡುವ ಪ್ರವೃತ್ತಿ ಹೆಚ್ಚಾಗಿ ದೇಶಕ್ಕಾಗಿ, ನನ್ನ ಜನರ ಒಳಿತಿಗಾಗಿ ಕೆಲಸ ಮಾಡುವವರ ಸಂಖ್ಯೆ ತುಂಬಾ ಇಳಿಮುಖವಾಗುತ್ತಿದೆ. ಹಾಗಾಗಿ ವ್ಯಕ್ತಿ ತಾನು ಬದುಕುವ ಸಮಾಜದ ಕಲ್ಯಾಣಕ್ಕಾಗಿ ತ್ಯಾಗ ಮಾಡುವ ಪ್ರಜ್ಞೆಯನ್ನು ಬೆಳೆಸಿ, ದೇಶದ ಪ್ರಗತಿಯಲ್ಲಿಯೂ ತಮ್ಮ ಕೊಡುಗೆಯನ್ನು ನೀಡುವಂತಹ ಮಕ್ಕಳನ್ನು ಬೆಳೆಸುವ ಜವಾಬ್ದಾರಿ ಇಂದು ಶಿಕ್ಷಕರಾದ ನಮ್ಮ ಮೇಲೆ ಹೆಚ್ಚಾಗಿದೆ.

ಅನೇಕ ಮಹನೀಯರು, ಶಿಕ್ಷಕರು ದೇಶ ಕಟ್ಟಬಲ್ಲ ನಾಗರಿಕರನ್ನು ತಯಾರು ಮಾಡುವಂತಹವರು ಎಂದು ನಮ್ಮನ್ನು ಹೊಗಳುತ್ತಾರೆ. ಆದರೆ ದೇಶಾಭಿಮಾನವಿಲ್ಲದ ನಾಗರಿಕರನ್ನು ತಯಾರು ಮಾಡಿದರೆ ಆತ್ಮವಿಲ್ಲದ ದೇಹವಿದ್ದಂತೆ ಏನು ಪ್ರಯೋಜನ? ಭಯೋತ್ಪಾದಕರನ್ನು ಸಿದ್ಧಪಡಿಸುವವರೂ ಕುಶಲ ಶಿಕ್ಷಕರೇ..! ಆದರೆ ಅವರ ಉದ್ದೇಶ ಅಷ್ಟೇ ಭಯಾನಕ ಮತ್ತು ವಿಧ್ವಂಸಕವಾಗಿರುತ್ತದೆ. ಅವರು ಯುವ ಪೀಳಿಗೆಯಲ್ಲಿ ದೇಶದ ಬಗ್ಗೆ ದ್ವೇಷವನ್ನು ತುಂಬುವುದರಲ್ಲಿ ಹಾಗೂ ಅವರನ್ನು ದೇಶದ್ರೋಹದ ಚಟುವಟಿಕೆಗಳಲ್ಲಿ ತೊಡಗಿಸುವುದರಲ್ಲಿ ಸಫಲರಾಗುತ್ತಿದ್ದಾರೆ. ಹಾಗಾದರೆ ಅವರ ವೃತ್ತಿಪರತೆಯು ಅಷ್ಟೊಂದು ಸದೃಢವಾಗಿದೆಯೇ? ಅವರ ಪ್ರಯತ್ನವು

– 25ನೇ ಪುಟಕ್ಕೆ ಮುಂದುವರೆದುದು

# ಯಲುರಾಜನ ಮಡದಿ : ಮಾನವತಾವಾದಿ ಸ್ತ್ರೀ ದೃಷ್ಟಿಕೋನ

✍ **ಲಕ್ಷ್ಮೀಕಾಂತ,** ಪಿಎಚ್.ಡಿ., ಸಂಶೋಧನಾ ವಿದ್ಯಾರ್ಥಿ, ಜಾನಪದ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ-583276,

ವಿಶಿಷ್ಟ ಒಳಅರ್ಥಗಳನ್ನು ತನ್ನೊಳಗೆ ಅಡಗಿಸಿಕೊಂಡಿರುವ 'ಯಲುರಾಜನ ಮಡದಿ' ಒಂದು ಅಪರೂಪದ ಕಥನಗೀತೆ. ಜನ್ನನ 'ಯಶೋಧರ ಚರಿತೆ' ಕಾವ್ಯದಲ್ಲಿ ಅಮೃತಮತಿ ಬದಗನ ಗಾಯನಕ್ಕೆ ಮನಸೋತು ಆತನಿಗೆ ತನ್ನನ್ನು ತಾನು ಸಂಪೂರ್ಣವಾಗಿ ಅರ್ಪಿಸಿಕೊಳ್ಳುವಂತೆ, 'ಯಲುರಾಜನ ಮಡದಿ' ಕಥನಗೀತೆಯಲ್ಲಿ ತಾನು ನೋಡಿದ ಕಲಾವಿದನೊಬ್ಬನ ಚಿತ್ರಕ್ಕೆ ಮನಸೋತು ಅವನ ಹಿಂದೆ ಹೋಗಿ ಬದುಕುವ ಹೆಣ್ಣಿನ ವಿವರವಿದೆ.

'ಯಶೋಧರ ಚರಿತೆ' ಹಾಗೂ 'ಯಲುರಾಜನ ಮಡದಿ' ಕೃತಿಗಳನ್ನು ಗಮನಿಸಿದರೆ ಎರಡೂ ಕೃತಿಗಳಲ್ಲಿ ಹಲವು ಸಾಮ್ಯ ಹಾಗೂ ವೈರುಧ್ಯದ ಅಂಶಗಳನ್ನು ಕಾಣುತ್ತೇವೆ. 'ಜೀವದಯೆಯೇ ಜೈನ ಧರ್ಮಂ' ಎಂಬ ತತ್ವದ ಹಿನ್ನೆಲೆಯಲ್ಲಿ 'ಯಶೋಧರ ಚರಿತೆ' ರಚಿತವಾಗಿದ್ದರೆ, 'ಯಲುರಾಜನ ಮಡದಿ' ಜನಪದ ಆಶಯದ ಹಿನ್ನೆಲೆಯಲ್ಲಿ ಮಾನವಪರವಾದ ಅಹಿಂಸೆ ಹಾಗೂ ಸ್ತ್ರೀ ಪರವಾದ ಜೀವ ಸಹಿಷ್ಣುತೆಯ ಕಾಳಜಿಗಳ ಜೀವನಾನುಭವದ ಪ್ರತೀಕವಾಗಿದೆ. 'ಯಶೋಧರ ಚರಿತೆ'ಯಲ್ಲಿ ಅಹಿಂಸೆಯನ್ನು ಪ್ರತಿಪಾದಿಸಿದರೂ ಸಹ ಸಂಕಲ್ಪ ಹಿಂಸೆಯನ್ನು ಮಾಡುವ ಸನ್ನಿವೇಶವಿದೆ. ಜೊತೆಗೆ ತನ್ನ ದುಷ್ಕೃತ್ಯಗಳು ಅತ್ತೆ ಹಾಗೂ ಗಂಡನಿಗೆ ತಿಳಿದು ಹೋದವಲ್ಲ ಎಂದು ಅವರಿಬ್ಬರಿಗೆ ಅಮೃತಮತಿ ವಿಷ ನೀಡಿ ಕೊಲ್ಲುವ ಜೀವ ಹತ್ಯೆಯ ವಿವರಗಳಿವೆ. ಆದರೆ 'ಯಲುರಾಜನ ಮಡದಿ' ಸಂಕಲ್ಪ ಹಿಂಸೆ ಹಾಗೂ ಜೀವಹತ್ಯೆಯ ವಿರೋಧದ ನೆಲೆಯಲ್ಲಿ ಚಿಂತಿಸುವುದು ತಿಳಿಯುತ್ತದೆ. ಈ ದೃಷ್ಟಿಕೋನದ ಹಿನ್ನೆಲೆಯಲ್ಲಿ ಅಲ್ಲಿನ ಜೀವಪರ ಕಾಳಜಿಗಳು, ಅಹಿಂಸೆ ಹಾಗೂ ಸ್ತ್ರೀ ಪರವಾದ ನಿಲುವುಗಳು ಪ್ರಸ್ತುತ ಸಂದರ್ಭದ ಸನ್ನಿವೇಶಗಳಿಗೆ ಬಹು ಪ್ರಸ್ತುತವಾದವು.

'ಯಲುರಾಜನ ಮಡದಿ' ಕಾವ್ಯವನ್ನು ಮಾನವತಾವಾದಿ ದೃಷ್ಟಿಕೋನದಿಂದ ಅಧ್ಯಯನಕ್ಕೊಳಪಡಿಸಲು ಹಲವು ಸಾಧ್ಯತೆಗಳಿವೆ. ಪ್ರಮುಖವಾಗಿ ಇಲ್ಲಿ ಕಾವ್ಯದಲ್ಲಿನ ಹೆಣ್ಣಿನ ಮಾನಸಿಕ ಆಸೆ, ಆಕಾಂಕ್ಷೆಗಳು ಹಾಗೂ ಆಕೆಯ ಸಹಜ ಭಾವನೆಗಳ ಹಿನ್ನೆಲೆಯಲ್ಲಿ ಅಧ್ಯಯನ ಮಾಡುವುದು ಬಹು ಮುಖ್ಯವಾದುದು. ಪುರುಷ ಪ್ರಧಾನ ಸಮಾಜದ ಚೌಕಟ್ಟಿನೊಳಗೆ ನಿಂತು ನೋಡುವ ಸನಾತನವಾದಿ ಚಾಳೀಸನ್ನು ಧರಿಸಿರುವ ಕಣ್ಣುಗಳಿಗೆ 'ಯಶೋಧರ ಚರಿತೆ'ಯಲ್ಲಿ ಅಮೃತಮತಿ ಮಾಡಿದ ಕೆಲಸ ಹೇಗೆ ತಪ್ಪಾಗಿ, ಅಸಹ್ಯಕರವಾಗಿ ಕಾಣಿಸುತ್ತದೆಯೋ, ಹಾಗೆಯೇ ಯಲುರಾಜನ ಮಡದಿಯ ನಿರ್ಧಾರವೂ ಕೂಡ ಅಷ್ಟೇ ಕೆಟ್ಟ ಕೆಲಸವಾಗಿ ಕಾಣುತ್ತದೆ. ಆದರೆ ಸೂಕ್ಷ್ಮವಾಗಿ ಇಲ್ಲಿ ಅವರಿಬ್ಬರ ಮನಸ್ಸಿನ ಒಳತೋಟಿಗಳ ಹಿನ್ನೆಲೆಯಲ್ಲಿ ಅವರಿಬ್ಬರನ್ನು ಅರ್ಥಮಾಡಿಕೊಂಡಾಗ ಹಾಗೂ ಅಧ್ಯಯನಕ್ಕೆ ಇಳಿದಾಗ ಅವರ ಮಾನಸಿಕ ನಿಲುವುಗಳ ಸ್ಪಷ್ಟ ಅಭಿವ್ಯಕ್ತಿಗಳು ನಮ್ಮ ಗಮನಕ್ಕೆ ಬರುತ್ತವೆ. ಹಾಗೆಂದು ಅವರು ಕಟ್ಟಿಕೊಂಡ ಗಂಡನನ್ನು ಬಿಟ್ಟು ಪರ ಪುರುಷನೊಬ್ಬನೊಡನೆ ಹೋದದ್ದು ಸರಿ ಎಂದಾಗಲಿ, ಅಥವಾ ಅದು ತಪ್ಪು ಎಂದು ಸಮರ್ಥಿಸಿಕೊಳ್ಳುವ ಅಭಿಪ್ರಾಯವಾಗಲಿ, ಆಲೋಚನೆಯಾಗಲಿ ನನ್ನದಲ್ಲ. ಬದಲಿಗೆ ಈ ರೀತಿಯ ನಿರ್ಧಾರಗಳಿಗೆ ಆಕೆಯ ಮನಸ್ಸಿನ ಮೇಲೆ ಬೀರಿದ ಪ್ರಭಾವಗಳು, ಸಂಗತಿಗಳು ಯಾವುವು ಎಂಬುದನ್ನು ಅರ್ಥೈಸಿಕೊಳ್ಳ ಬೇಕಾದುದು ಮುಖ್ಯವಾದ ಸಂಗತಿ. ಕಾರಣ ಆಕೆಯ ಮನಸ್ಸಿನ ಒಳತೋಟಿಗಳನ್ನು ಅರ್ಥೈಸಿಕೊಳ್ಳದ ಹೊರತು ಕಾವ್ಯದ ಮೂಲ ಭಾವ ನಮಗೆ ದಕ್ಕುವುದೇ ಇಲ್ಲ.

'ಯಲುರಾಜನ ಮಡದಿ' ಕಥನಗೀತೆ ಪ್ರಾರಂಭವಾಗುವುದು ಅಕ್ಕತಂಗಿಯರಿಬ್ಬರು ನೀರನ್ನು ತರಲು ಹೊಳೆಗೆ ಬಂದ ಸಂದರ್ಭದಿಂದ. ಅಲ್ಲಿ ಕಲಾವಿದನೊಬ್ಬ ರಚಿಸಿದ್ದ 'ಹಲಿಯ ಚೀತ್ತರ' ನೋಡಿ ಅದನ್ನು ಬರೆದಿದ್ದ ಹೊಲೆಯನ ಮೇಲೆ ಮನಸ್ಸಾಗುತ್ತದೆ. ಒಲವಿನಿಂದ ಆಕೆ ಆ ಹೊಲೆಯ ಕಲಾವಿದನ ಸಂಗಡ ತಾನು ಹೋಗಿ ಬಾಳುವೆ ಮಾಡುವುದಾಗಿ ತನ್ನ ಅಕ್ಕನ ಬಳಿಯಲ್ಲಿ ಮನದ ಅಭಿಲಾಷೆಯನ್ನು ವ್ಯಕ್ತಪಡಿಸುತ್ತಾಳೆ. ಆಗ ಅಕ್ಕ ಹೇಳುವ 'ಹೊಲೆಯನ ಸಂಗಡ ಹೋದರೆ ಜಾತಿಯನ್ನು ಬಿಡಬೇಕಾಗುತ್ತದೆ' ಎಂಬ ಮಾತುಗಳು ಪರಂಪರಾಗತವಾದ ನಂಬಿಕೆಗಳನ್ನು ಪ್ರತಿನಿಧಿಸುತ್ತವೆ. ಆದರೆ ಇಲ್ಲಿ ಪ್ರೀತಿಗೆ ಜಾತಿಯಿಲ್ಲದ ಕಾರಣ ಆಕೆ ತನ್ನ ಜಾತಿ ಹೋದರೆ ಹೋಗಲಿ, ತಾನು ಮೆಚ್ಚಿಕೊಂಡವನ ಹಿಂದೆ ಹೋಗುವುದಾಗಿ ತಿಳಿಸಿ ಆತನೊಡನೆ ಹೋಗುತ್ತಾಳೆ. ದಂಡಿಗೆ ಹೋಗಿರುವ ನಿನ್ನ ಗಂಡನಿಗೆ ಈ ವಿಚಾರ ತಿಳಿದರೆ ಅವನು ನಿನ್ನನ್ನು ದಂಡಿಸುವನು ಎಂದು ಅಕ್ಕ ಹೇಳಿದರೆ, 'ಹೊಡೆದರೆ ಯೇನಕ್ಕಾ ? ಬಯ್ದರೆ ಯೇನಕ್ಕಾ ? ಎಂದು ಕೇಳುವ ಮಾತು ಅವಳ ಮನಸ್ಸು ಅವನ ಮೇಲೆ ಜಾರಿರುವುದನ್ನು ಸಂಕೇತಿಸುತ್ತದೆ. ನಂತರ ಹೊಲೆಯನಿಗೆ 'ನೀವು ನನ್ನ ಸ್ವಾಮಿ, ನಾನು ನಿಮ್ಮ ಸತಿ' ಎಂದು ಹೇಳುವಲ್ಲಿ ಅವಳ ಉತ್ಕಟವಾದ ಅವನ ಮೇಲಿನ ಮೋಹವನ್ನು ಕಾಣಬಹುದಾಗಿದೆ.

ಇಲ್ಲಿ ಗಮನಿಸುವಂತಹದ್ದು ಮಡದಿಯ ಮನಸ್ಸಿನ ಬಹುಮುಖ್ಯ ತೊಳಲಾಟಗಳು. ಕಾರಣ ಪತಿಯು ದಂಡಿಗೆ ಹೋಗಿರುವ ಕಾರಣವಾಗಿ ಈಕೆ ಬಹು ದಿನಗಳಿಂದ ತನ್ನ ಮನಸ್ಸಿನ ಆಸೆ ಆಕಾಂಕ್ಷೆಗಳನ್ನು ನಿಯಂತ್ರಿಸಿಕೊಂಡಿದ್ದವಳು. ಇಂದು ಆ ಕಲಾವಿದನ ಚಿತ್ರವನ್ನು ನೋಡಿ ಅದರಿಂದ ತನ್ನ ಮನದ ಆಸೆ, ಬಯಕೆಗಳು ಕೆರಳಿ, ತಾನು ತನ್ನ ಮನಸ್ಸಿನ ಆಸೆಗಳ ಪೂರೈಕೆಗಾಗಿ ಆತನೊಡನೆ ತೆರಳುವುದು ಇಲ್ಲಿ ಗಮನಿಸಬೇಕಾದ ಬಹು ಮುಖ್ಯ ಸಂಗತಿ, ಏಕೆಂದರೆ ಕಾವ್ಯದಲ್ಲಿ ಆಕೆಗೆ ಮಕ್ಕಳಿದ್ದ ಬಗ್ಗೆ ಯಾವುದೇ ವಿವರಗಳಿಲ್ಲ. ಹಾಗಾಗಿ ತಾಯ್ತನದ ಬಯಕೆಗಳು ಹಾಗೂ ಪುರುಷನೊಂದಿಗಿನ ಸೇರುವಿಕೆ ಸ್ತ್ರೀಯ ಬಹುಮುಖ್ಯವಾದ ದೈಹಿಕ ಮತ್ತು ಮಾನಸಿಕ ಆಕಾಂಕ್ಷೆಗಳಾಗಿವೆ. ಈ ಎಲ್ಲಾ ಆಯಾಮಗಳ ಹಿನ್ನೆಲೆಯಲ್ಲಿ ಆಕೆ ಆ ಕಲಾವಿದನೊಡನೆ ಹೋಗುವ ಮನಸ್ಸನ್ನು ಮಾಡುತ್ತಾಳೆಂಬುದನ್ನು ಇಲ್ಲಿ ಗಮನಿಸಬಹುದು.

ಕಥನಗೀತೆಯಲ್ಲಿ ಬಳಕೆಯಾಗಿರುವ ಕರಿಯ ಕಂಬಳಿ, ಹೋಳು ಬೆಳಿಯಲಿ ಇವೆಲ್ಲವೂ ಕೂಡ ಏನನ್ನೋ ಹೇಳುತ್ತಿರುವಂತೆ ಕಾಣುತ್ತದೆ. ಇಲ್ಲಿಯವರೆಗಿನ ಕಥೆ ಯಶೋಧರ ಚರಿತೆಯಲ್ಲಿನ ಅಮೃತಮತಿ ಬದಗನ ಹಾಡಿಗೆ ಮರುಳಾಗಿ, ಆತನೊಡನೆ ಕೂಡುವ ಕತೆಯನ್ನು ನೆನಪಿಸಿದರೆ ಇಲ್ಲಿಂದ ಮುಂದೆ ಕಥೆಯು 'ಕೆರೆಗೆ ಹಾರ' ಕಥನಕವನದ ವಿವರಗಳನ್ನು ನೆನಪಿಸುತ್ತದೆ. ದಂಡಿಗೆ ಹೋಗಿದ್ದ ಮಾದೇವರಾಯ ತನ್ನ ಹೆಂಡತಿ ಭಾಗೀರಥಿಯನ್ನು ಕುರಿತು ಕೆಟ್ಟ ಕನಸನ್ನು ಕಂಡು ಬತ್ತಲೆ ಕುದುರೆ ಹತ್ತಿ ಮನೆಗೆ ಬಂದು ತನ್ನ ಹೆಂಡತಿಯ ಬಗೆಗೆ ವಿಚಾರಿಸುವುದು, ಮನೆಯವರು ಆಕೆ ತಾಯಿಯ ಮನೆಗೆ, ಗೆಳತಿಯ ಮನೆಗೆ ಹೋಗಿರುವಳು ಎಂದು

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ತಿಳಿಸುವುದು, ನಂತರ ಗೆಳತಿಯಿಂದ ಸತ್ಯ ತಿಳಿಯುವುದು ಅಲ್ಲಿ ಕಂಡುಬರುತ್ತದೆ. ಅದರಂತೆ ಇಲ್ಲಿಯೂ ದಂಡಿಗೆ ಹೋಗಿದ್ದ ಯಲುರಾಜನಿಗೆ ಕೆಟ್ಟ ಕನಸು ಬಿದ್ದು ಗಾಬರಿಯಿಂದ ಮನೆಗೆ ವಾಪಸ್ಸಾಗುತ್ತಾನೆ. ಮನೆಗೆ ಬಂದಾಗ ಅತ್ತಿಗೆ ನೀರು ಕೊಡುತ್ತಾಳೆ. ನನ್ನ ಹೆಂಡತಿ ಎಲ್ಲಿ ? ಎಂದಾಗ ಆಕೆ ನಿನ ನೆಂಟರ ಮನೆಗೆ ಹೋಗಿದ್ದಾಳೆಂದು ಹೇಳುತ್ತಾಳೆ. ನಂತರ ಆತ ಅಲ್ಲಿಗೆ ಹೋದಾಗ ಅತ್ತೆ ಆತನ ಹೆಂಡತಿಯು ಹೊಲೆಯನ ಸಂಗಡ ಹೋದ ನಿಜ ಸಂಗತಿಯನ್ನು ತಿಳಿಸುತ್ತಾಳೆ.

ಸತ್ಯ ಸಂಗತಿ ತಿಳಿದ ನಂತರ ಯಲುರಾಜನ ವರ್ತನೆಗಳು ಹಾಗೂ ಆತನು ತೆಗೆದುಕೊಳ್ಳುವ ನಿಲುವುಗಳು ಇಲ್ಲಿ ಬಹು ಮುಖ್ಯವಾಗಿ ಚರ್ಚಿಸುವಂತಹವು. ಈ ನಿರ್ಧಾರಗಳು ಆತನ ವ್ಯಕ್ತಿತ್ವಕ್ಕೆ ಒಂದು ಮಹೋನ್ನತಿಯನ್ನು ತಂದುಕೊಟ್ಟಿವೆ. ಆತ ಈ ವಿಷಯ ತಿಳಿದ ಮೇಲೆ ಕೋಪಗೊಳ್ಳುವುದಿಲ್ಲ. ಹೆಂಡತಿಯ ಬಗೆಗೆ ಯಾವುದೇ ರೀತಿಯ ದ್ವೇಷ, ಕ್ರೌರ್ಯ ಹಾಗೂ ತಿರಸ್ಕಾರದ ಭಾವಗಳನ್ನು ವ್ಯಕ್ತಪಡಿಸುವುದಿಲ್ಲ. ಇಲ್ಲಿ ಆತನಲ್ಲಿರುವ ಜೀವಪರ ಹಾಗೂ ಸ್ತ್ರೀ ಪರವಾದ ಹಲವು ಅಂಶಗಳು ನಮ್ಮ ಗಮನ ಸೆಳೆಯುತ್ತವೆ. ಆತನಲ್ಲಿಯೂ ಹೆಂಡತಿಯ ತೀರ್ಮಾನ ಕುರಿತಾಗಿ ಮಾನಸಿಕ ದುಃಖ, ನೋವುಗಳಿವೆ, ಸಂಘರ್ಷಗಳಿವೆ. ಆದರೂ ಅವುಗಳಲ್ಲಿ ಯಾವುದನ್ನೂ ಹೊರಹಾಕದೆ ಜೀವ ಸಹಿಷ್ಣುತೆಯ ಹಿನ್ನೆಲೆಯಲ್ಲಿನ ಆತನ ಆಲೋಚನೆ ಮತ್ತು ಮಾತುಗಳು ಮುಖ್ಯವಾಗಿ ಆಲೋಚಿಸುವಂತಹವು. ಇಲ್ಲಿ ಆತನ ಮನಸ್ಸು ವಿಶಾಲವಾದ ರೀತಿಯ ಆಲೋಚನೆಗೆ ಒತ್ತುಕೊಟ್ಟಿದೆ. ಆತ ಅತ್ತೆಯಿಂದ ನಿಜ ಸ್ಥಿತಿಯನ್ನು ಕೇಳಿ ತಿಳಿದುಕೊಂಡ ಮೇಲೆ ನೇರವಾಗಿ ಆ ಹೊಲೆಯನ ಮನೆಯ ಹತ್ತಿರ ಹೋಗಿ ಆತನಿಗೆ ಹೇಳುವ ಮಾತುಗಳು ಯಲುರಾಜನ ಮಾನವತಾವಾದಿ ಯಾದ ಸ್ತ್ರೀ ಪರ ದೃಷ್ಟಿಕೋನದ ಅಂಶಗಳನ್ನು ತಿಳಿಸುತ್ತವೆ. 'ನನ್ನ ಹೆಂಡತಿಯನ್ನು ನೀನು ಕದ್ದೊಯ್ದೆ ಅಥವಾ ನೀನು ಕರೆತಂದೆ ಎಂದು ನಿನ್ನ ಮೇಲೆ ನನಗೆ ಕೋಪವಿಲ್ಲ. ಅಲ್ಲದೇ ನೀನು ತಪ್ಪಿಸಿಕೊಂಡು ಎಲ್ಲಿಯೂ ಓಡಬೇಡ, ಅಡಗಿಕೊಳ್ಳಬೇಡ. ನಿನಗೆ ನಾನು ಹೊಡೆಯುವುದಿಲ್ಲ, ನಿನ್ನನ್ನು ಕೊಲ್ಲುವುದಿಲ್ಲ, ಬಯ್ಯುವುದಿಲ್ಲ. ಆದರೆ ನೀನು ನನ್ನ ಹೆಂಡತಿಯನ್ನು 'ಜೋಪಾನ ಮಾಡಬೇಕು'; ಆಕೆ ಸತ್ತ ಮೇಲೆ ಆಕೆಯನ್ನು ಸುಡದೆ ಮಣ್ಣಿಗೆ ಹಾಕಬೇಕು. ನಲವತ್ತೊಂದು ದಿನಗಳಾದ ಮೇಲೆ ಆಕೆಯ ತಲೆಯನ್ನು ತಂದುಕೊಡಬೇಕೆಂದು' ಹೇಳುತ್ತಾನೆ. ಇದು ಯಲುರಾಜನ ಮನಸ್ಥಿತಿ. ಇಲ್ಲಿ ಮಾನಸಿಕ ಬೇಗುದಿ, ಕ್ಷೋಭೆಗಳಿದ್ದರೂ ಸಹ ಕೋಪಾವೇಶಗಳಿಗೆ ಒಳಗಾಗದೆ ಆಕೆಯನ್ನು ಅವಳ ಇಷ್ಟದಂತೆ ಹೊಲೆಯನ ಜೊತೆಯಲ್ಲೆ ಬಿಡುವ ಸ್ತ್ರೀಪರ ಕಾಳಜಿ ಇದೆ. ವಿವಾಹವಾಗಿರುವ ಸ್ತ್ರೀ ಪರಪುರುಷನೊಬ್ಬನನ್ನು ನೆನೆಯುವುದೂ ಕೂಡ ಘೋರ ಅಪರಾಧವೆಂದೇ ಭಾವಿಸಿರುವ ಪುರುಷ ಪ್ರಧಾನ ಸಮಾಜದಲ್ಲಿ ತನ್ನ ಹೆಂಡತಿ ಬಯಸಿದ ಪುರುಷನೊಟ್ಟಿಗೆ ಆಕೆಯನ್ನು ಬಾಳಲು ಬಿಡುವಂತಹ ಜೀವ ಪರವಾದ ಕಾಳಜಿಗಳು ಇಲ್ಲಿ ಯಲುರಾಜನಲ್ಲಿರುವುದು ಈ ಕಥನಗೀತೆಯ ವೈಶಿಷ್ಟ್ಯ. ಹಾಗೂ ಆತನ ವೈಚಾರಿಕ ವಿವೇಚನೆಯ ಮುಂದುವರೆದ ಮನಸ್ಸಿನ ತಿಳುವಳಿಕೆಯಾಗಿದೆ. ಇಲ್ಲಿ ಸಮಾಜ, ಸಂಸ್ಕೃತಿ, ಸಮುದಾಯಗಳ ಪರಂಪರಾಗತ ಮನಸ್ಸುಗಳ ನಂಬಿಕೆಯ ಪರಿಕಲ್ಪನೆಗಳಿಗಿಂತ ಆಕೆಯ ಮಾನಸಿಕ ಅಭಿಲಾಷೆಗಳು ಮುಖ್ಯ ಎನ್ನುವಂತಹ ಮನಸ್ಸು ಹಾಗೂ ನಿಲುವನ್ನು ಕವಿ ಯಲುರಾಜನ ಮೂಲಕ ತಿಳಿಸಿರುವಂತಿದೆ.

ಆಕೆಯ ನಿಧನದ ನಂತರ ಅವಳ ತಲೆಬುರುಡೆಯನ್ನು ತಂದು ಅದರಲ್ಲಿನ ಬರಹವನ್ನು ಓದಿ ಮುತ್ತಿನ ಕಣ್ಣೀರ ಸುರಿಸುವಂತಹ ಆತನ ಪ್ರೀತಿಪೂರ್ವಕವಾದ ಮನಸ್ಸು ಆಕೆಗಾಗಿ ಮಿಡಿಯುವುದು ಕಂಡುಬರುತ್ತದೆ. ಜೊತೆಗೆ ಆತ ಆಚಾರಿಯ ಮನೆಗೆ ಹೋಗಿ ಗಂಧದ ಪೆಟ್ಟಿಗೆ ಮಾಡಿಸಿಕೊಂಡು. ಸಂಪಿಗೆ ಹೂವಿನ ಸರ, ಮಲ್ಲಿಗೆ ಬನಕ್ಹೋಗಿ ಮಲ್ಲಿಗೆ ಹೂವಿನ ದಂಡೆ ಮಾಡಿ ತರುವನು. ನಂತರ ಗಾಣಿಗನ ಮನೆಗೆ ಕೊಬ್ಬರಿ ತೆಗೆದುಕೊಂಡು ಹೋಗಿ ಚೆಂಬೆಣ್ಣೆ ತರುವ, ಚಿನ್ನದಂಗಡಿಗೆ ಹೋಗಿ ಕೊರಳಿಗೆ ಹಾಕುವ ಚಿನ್ನ ತೆಗೆದುಕೊಂಡು, ಜವಳೀ ಅಂಗಡಿಗೆ ಹೋಗಿ ಸೀರೆ ತೆಗೆದುಕೊಳ್ಳುವನು. ಗುಡುಗಾರ್‍ನ ಮನೆಗೋಗಿ ಹೆಣ್ಣ ಬೊಂಬೆಯನ್ನು ಗೆಯ್ಸಿಕೊಂಡು, ಕುರುಬರ ಮನೆಯಲ್ಲಿ ಚವುಲಿಯ ತೆಗೆದುಕೊಂಡು, ಅವೆಲ್ಲವುಗಳನ್ನು ಮನೆಗೆ ತರುವನು. ತನ್ನ ಹೆಂಡತಿಯ ತಲೆಬುರುಡೆಗೆ ಚವುಲಿ ಹಾಕಿ, ಎಣ್ಣೆ ಹಚ್ಚಿ ಕಟ್ಟಿ, ಸಂಪಿಗೆ ಮಾಲೆ ಕೊರಳಿಗೆ ಹಾಕಿ, ಮಲ್ಲಿಗೆ ಹೂ ಮುಡಿಸಿ, ಸೀರೆಯನ್ನು ಆ ಬೊಂಬೆಗೆ ಉಡಿಸಿ, ಕುಂಕುಮ ಇಟ್ಟು, ಗಂಧದೆಣ್ಣೆ ದರಿಸಿ, ಪೆಟ್ಟಿಗೆ ಮೇಲೆ ಅದನ್ನು ಕುಳ್ಳಿರಿಸಿ, ಅದರ ಸುತ್ತ ಪ್ರದಕ್ಷಿಣೆ ಮಾಡುವ ಅವನ ಮನಸ್ಥಿತಿ ನಿಜಕ್ಕೂ ಮೆಚ್ಚತಕ್ಕದ್ದು. ಇದು ಆಕೆಯ ಮೇಲೆ ಅವನಿಗಿದ್ದ ಪ್ರೀತಿಯನ್ನು ತಿಳಿಸುತ್ತದೆ. ಅಲ್ಲದೆ ಈ ಎಲ್ಲಾ ಕ್ರಿಯೆಗಳು ಆಕೆಯನ್ನು ಪುನರ್ ಸೃಷ್ಟಿಸಿಕೊಳ್ಳಲು ನಡೆಸುವ ಪ್ರಯತ್ನಗಳೂ ಆಗಿವೆ. ಅಲ್ಲದೆ ಆಕೆ ಹೊಲೆಯನೊಡನೆ ಹೋಗಿ ಸತ್ತರೂ ಆತ ಅದಕ್ಕಾಗಿ ಕೋಪಗೊಳ್ಳುವುದಿಲ್ಲ. ಅವಳ ಮೇಲಿನ ಪ್ರೀತಿ ಕಡಿಮೆಯಾಗುವುದಿಲ್ಲ. ಆಕೆಯ ಬೊಂಬೆಯ ಸುತ್ತ ಪ್ರದಕ್ಷಿಣೆ ಮಾಡುತ್ತ ಮುತ್ತಿನ ಕಣ್ಣೀರನ್ನು ಸುರಿಸುವ ಬಗೆ ಮನಕರಗುವಂತಹದ್ದು. ಜೊತೆಗೆ ಆತನೂ ಕೂಡ ಆಕೆಯ ನೆನಪಿನಲ್ಲಿಯೇ ಸಾಯುವಂತಹ ಸನ್ನಿವೇಶ ನಿಜಕ್ಕೂ ಆತನ ಮನಸ್ಸಿನ ಒಳ ಅರಿವುಗಳನ್ನು ನಮಗೆ ತಿಳಿಸುತ್ತದೆ. ಇಲ್ಲಿ ಬಹುಮುಖ್ಯವಾಗಿ ನಾವು ಆತನಲ್ಲಿನ ಅಹಿಂಸೆಯ, ಮಾನವಪರವಾದ ಕಾಳಜಿಗಳು ಹಾಗೂ ಸ್ತ್ರೀ ಪರವಾದ ನಿಲುವುಗಳನ್ನು ಗುರ್ತಿಸಬಹುದಾಗಿದೆ. ಏಕೆಂದರೆ ಆಕೆ ತೀರಿಕೊಂಡ ನಂತರವೂ ಅವಳ ಬಗ್ಗೆ ಯಾವುದೇ ರೀತಿಯ ಕೆಟ್ಟ ಮಾತುಗಳನ್ನು ನುಡಿಯುವುದಿಲ್ಲ, ಅವಹೇಳನ ಮಾಡುವುದಿಲ್ಲ. ಜೊತೆಗೆ ಆಕೆಯ ತಲೆಬುರುಡೆಯನ್ನು ತಂದುಕೊಟ್ಟಾಗಲೂ ಸಹ ಅದರಲ್ಲಿನ ಬರಹಗಳನ್ನು ಓದಿ ಸುಮ್ಮನಾಗುವನೇ ಹೊರತು ಅದಕ್ಕೆ ಯಾವುದೇ ರೀತಿಯ ಅಪಚಾರಗಳನ್ನು ಎಸಗುವುದಿಲ್ಲ. ಅದನ್ನು ತನ್ನ ಪತ್ನಿಯಂದೆ ಪರಿಭಾವಿಸಿ, ಅದನ್ನು ನಡೆಸಿಕೊಳ್ಳುವ ಪರಿ ನಿಜಕ್ಕೂ ಅಭಿನಂದನಾರ್ಹ ಹಾಗೂ ಚರ್ಚಿಸತಕ್ಕ ವಿಚಾರ. ಈ ಕಥನ ಗೀತೆಯಲ್ಲಿ ವರ್ಗಸಂಕರ ಕ್ರಿಯೆ ನಡೆದಿದ್ದು, ಈ ಗೀತೆಯ ನಿರೂಪಕ ಯಾವುದೇ ವಿವಾದ ಅಥವಾ ಘರ್ಷಣೆಗಳಿಗೆ ಆಸ್ಪದ ಉಂಟಾಗದ ರೀತಿಯಲ್ಲಿ ಇದನ್ನು ಓದುಗನ ಮುಂದೆ ನಿರೂಪಿಸಿರುವ ಕ್ರಮ ಗಮನಿಸುವಂತಹದ್ದಾಗಿದೆ.

## ಆಕರ ಗ್ರಂಥಗಳು


- **ಕರೀಗೌಡ ಬೀಚನಹಳ್ಳಿ :** ಯಶೋಧರ ಚರಿತೆ ಮತ್ತು ಅಭಿಜಾತ ಪರಂಪರೆ, 2011, ಪ್ರಸಾರಾಂಗ, ಹಂಪಿ ಕನ್ನಡ ವಿಶ್ವವಿದ್ಯಾಲಯ.
- **ಹೆಗಡೆ ಎಲ್.ಆರ್. (ಸಂಗ್ರಹ) :** ಯಲುರಾಜನ ಮಡದಿ, ಮೂಲ : ಉತ್ತರ ಕನ್ನಡ ಜಿಲ್ಲೆಯ ಹೊಲೆಯರ ಪದ.



ವಿದ್ಯಾನಿಧಿ ಪ್ರಕಾಶನ ®
ಶ್ರೀ ಶಿವಕುಮಾರ ಏಜನ್ಸಿ®
ಶೈಕ್ಷಣಿಕ ಪುಸ್ತಕಗಳ ಪ್ರಕಾಶಕರು ಮತ್ತು ಮಾರಾಟಗಾರರು
ಸ್ಟೇಶನ್ ರೋಡ ಮತ್ತು 'ನನಸು' ಜೆ. ಟಿ. ಮಠ ರೋಡ, ಗದಗ
ದೂರವಾಣಿ : 08372-237527, 277527
e-mail : vidyanidhiprakashana@gmail.com. www.vidyanidhionline.com

ಸೈದ್ಧಾಂತಿಕ

# ಮನುಸ್ಮೃತಿ ಮತ್ತು ಮಹಿಳೆ
## (ಕುಟುಂಬ ಮತ್ತು ವಿವಾಹ ಸಂಸ್ಕೃತಿ)

✍ **ರಮ್ಯ ಕೆ. ಆರ್.,** ಸಹಾಯಕ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಸರಕಾರಿ ಪ್ರಥಮ ದರ್ಜೆ ಕಾಲೇಜು, ಗುಬ್ಬಿ.

**ಸ**ನಾತನ ಭಾರತೀಯ ಸಂಸ್ಕೃತಿಗೆ ತಳಹದಿಯಾದ ಧರ್ಮಶಾಸ್ತ್ರದ ವಿವಿಧ ಸ್ತರಗಳನ್ನು ವಿಧಿ–ನಿಷೇಧಗಳ ಮೂಲಕ ಪ್ರಸ್ತುತಪಡಿಸುವ ಸ್ಮೃತಿಗಳಲ್ಲಿ ಮನುಸ್ಮೃತಿಯು ಅತ್ಯಂತ ಪ್ರಾಚೀನವೂ ಮತ್ತು ಆದರಣೀಯವೂ ಆದ ಗ್ರಂಥವಾಗಿದೆ. ಇಂದಿಗೂ ಮಾನವ ಕುಲಕ್ಕೆ ಅನುಕರಣೀಯವಾದ, ಸಮಾಜದಲ್ಲಿ ಪರಸ್ಪರ ಸಹಕಾರದಿಂದ, ಶಾಂತಿಯಿಂದ ಎಲ್ಲರ ಹಿತವನ್ನು ಸಮನ್ವಯಗೊಳಿಸುತ್ತಾ, ಸುಖೀ ಜೀವನಕ್ಕೆ ಅವಶ್ಯಕವಾಗಿ ಅನುಸರಿಸಬೇಕಾದ ನಿಯಮಗಳನ್ನು ಮನುಸ್ಮೃತಿಯು ಹೊಂದಿದೆ. ಇದು ವ್ಯಕ್ತಿಯೊಬ್ಬನ ಹುಟ್ಟಿನಿಂದ ಹಿಡಿದು ಮರಣಾನಂತರದವರೆಗಿನ ಜೀವನವನ್ನು ತನ್ನ ಆದೇಶಗಳಿಂದ ನಿಯಂತ್ರಿಸುತ್ತದೆ. ಅಲ್ಲದೇ ಮಾನವ ಸಮಾಜದ ಸಾಮಾಜಿಕ, ಧಾರ್ಮಿಕ, ನೈತಿಕ ಜೀವನವನ್ನು ವ್ಯವಸ್ಥಿತಗೊಳಿಸುವಂತಹ ವಿಚಾರಗಳನ್ನು ಮನುಸ್ಮೃತಿಯು ಹೊಂದಿದೆ.

### ಸ್ಮೃತಿ ಗ್ರಂಥಗಳು

ಸ್ಮೃತಿಗಳು ಜನರ ಭಾವನೆಗಳನ್ನು ಮತ್ತು ಆಚಾರಗಳನ್ನು ಬಿಂಬಿಸುವ ಧರ್ಮಸೂತ್ರಗಳು ವೈದಿಕವಲ್ಲದ ಎಲ್ಲ ಪ್ರಾಚೀನ ಸಾಂಪ್ರದಾಯಿಕ ಗ್ರಂಥಗಳೂ ಸ್ಮೃತಿಗಳೆನಿಸಿವೆ ಹಾಗೂ ಧರ್ಮಶಾಸ್ತ್ರಕ್ಕೆ ಪರ್ಯಾಯ ಪದಗಳೇ ಸ್ಮೃತಿಗಳು.

ಸ್ಮೃತಿಗಳು ಭಿನ್ನ ಭಿನ್ನ ಹಾಗೂ ಕಾಲಾಂತರಿಕ ಯುಗಗಳ ಕೃತಿಗಳಾಗಿವೆ. ಸ್ಮೃತಿಗಳ ಒಟ್ಟು ಸಂಖ್ಯೆ ಸುಮಾರು ನೂರು ಇದ್ದು ಕೆಲವು ಪೂರ್ಣವಾಗಿ ಗದ್ಯದಲ್ಲಿ, ಕೆಲವು ಪೂರ್ಣವಾಗಿ ಪದ್ಯದಲ್ಲಿ, ಇನ್ನು ಕೆಲವು ಗದ್ಯ–ಪದ್ಯಗಳ ಮಿಶ್ರಣವಾಗಿವೆ. ಸ್ಮೃತಿಗಳ ಕಾಲವನ್ನು ಕ್ರಿ.ಶ 400 ರಿಂದ 1000 ದವರೆಗೆ ಇರಬಹುದು ಎಂದು ನಿರ್ಣಯಿಸಲಾದರೂ ಇವುಗಳ ಕಾಲದ ವಿಚಾರದಲ್ಲಿ ಸ್ಪಷ್ಟತೆ ಇಲ್ಲ. ಧರ್ಮಸೂತ್ರಗಳ ಪ್ರಸಿದ್ಧ ಸ್ಮೃತಿಗಳೆಂದರೆ ಯಾಜ್ಞವಲ್ಕ್ಯಸ್ಮೃತಿ (ಯಾಜ್ಞವಲ್ಕ್ಯ), ಪರಾಶರಸ್ಮೃತಿ (ಪರಾಶರ), ನಾರದಸ್ಮೃತಿ(ನಾರದ), ಬೃಹಸ್ಪತಿಸ್ಮೃತಿ (ಬೃಹಸ್ಪತಿ), ಕಾತ್ಯಾಯನಸ್ಮೃತಿ (ಕಾತ್ಯಾಯನ) ಹಾಗೂ ಮನುಸ್ಮೃತಿ (ಮನು).

### ಮನುಸ್ಮೃತಿ

**'ಮನುಸ್ಮೃತಿಯು ಮಾನವೀಯ ಮೌಲ್ಯಗಳನ್ನು ಹೊಂದಿರುವ ಸಾರ್ವತ್ರಿಕ ನೀತಿಸಂಹಿತೆ.'**

ಪ್ರಾಚೀನ ಸಾಹಿತ್ಯದಲ್ಲಿ ಮನುವನ್ನು ಮನುಷ್ಯ ಕುಲದ ತಂದೆ, ಪ್ರಾಚೀನ ಮುನಿ, ಶಾಸ್ತ್ರದ ಗ್ರಂಥಕಾರ ಹಾಗೂ ಭಗವಂತನಿಂದಲೇ ನೀತಿ ನಿಯಮಗಳನ್ನು ಅರಿತ ದಿವ್ಯಪುರುಷನೆನ್ನಲಾಗಿದೆ. 'ತೈತರೀಯ ಸಂಹಿತೆ'ಯು 'ಯದ್ವೇ ಕಿಚ್ಚ ಮನುರವದತ್ ತದ್ ಭಷಿಜಮ್' (ಮನು ಹೇಳಿದ್ದೆಲ್ಲವೂ ಹಿತಕಾರಕ, ಮನುಷ್ಯ ಕುಲವೆಲ್ಲ ಮನುವಿನ ಪ್ರಜೆಗಳು) ಎಂದಿದೆ.

ಕ್ರಿ. ಶ. 1813ರಲ್ಲಿ ಕಲ್ಕತ್ತಾದಲ್ಲಿ ಪ್ರಥಮ ಬಾರಿಗೆ ಮನುಸ್ಮೃತಿಯು ಪ್ರಕಾಶಿತವಾಯಿತು. ಇದು ಅತ್ಯಂತ ಸರಳ ಹಾಗೂ ವಿದ್ವತ್ಪೂರ್ಣವಾಗಿರುವ ಧರ್ಮಶಾಸ್ತ್ರವಾಗಿದ್ದು, 12 ಅಧ್ಯಾಯಗಳು ಮತ್ತು 2694 ಶ್ಲೋಕಗಳನ್ನು ಒಳಗೊಂಡಿದೆ. ಜಗತ್ತಿನ ಸೃಷ್ಟಿ, ಸೃಷ್ಟಿಕರ್ತ ಬ್ರಹ್ಮ, ಪಂಚಭೂತ, ವರ್ಣ, ಧರ್ಮದ ಲಕ್ಷಣ, ಮನುಷ್ಯನ ಸಂಸ್ಕಾರ, ವೇದಾಧ್ಯಯನ, ಪಂಚಯಜ್ಞಗಳು, ವಿವಿಧ ರೀತಿಯ ಶುದ್ಧಿಗಳು, ಬ್ರಹ್ಮಚರ್ಯದಿಂದ ಸನ್ಯಾಸಾಶ್ರಮದವರೆಗಿನ ವಿಧಿಗಳು, ರಾಜಧರ್ಮ, ಸ್ತ್ರೀಧರ್ಮ, ಸ್ತ್ರೀರಕ್ಷಣೆ, ಸ್ತ್ರೀದಾಯಭಾಗ, ವರ್ಣಸಂಕರ, ಪ್ರಾಯಶ್ಚಿತ್ತ ವಿಧಾನಗಳು ಹಾಗೂ ಮನುಸ್ಮೃತಿಯ ಪಠಣದಿಂದುಂಟಾಗುವ ಫಲಗಳ ಬಗೆಗಿನ ಮಾಹಿತಿಯನ್ನು ಒಳಗೊಂಡಿದೆ.

### ಉದ್ದೇಶ

- ಮಾನವೀಯ ಮೌಲ್ಯಗಳ ಪ್ರಸ್ತುತತೆ
- ಇಂದಿನ ಸಮಾಜಕ್ಕೆ ಮನುಸ್ಮೃತಿಯ ಸೂತ್ರಗಳ ಪರಿಚಯಿಸುವುದು.
- ಮನುವಿನ ಉದ್ದೇಶ ಆದರ್ಶ ಸಮಾಜದ ನಿರ್ಮಾಣವಾಗಿದ್ದಿತು ಎಂದು ತಿಳಿಸುವುದು.
- ಇಂದು ಬದಲಾವಣೆಯಾಗಿರುವ ಸಮಾಜದಲ್ಲಿರುವ ಅನೇಕ ಸವಾಲುಗಳಿಗೆ ಮನುಸ್ಮೃತಿಯಲ್ಲೇ ಅಡಕವಾಗಿರುವ ಸಲಹೆ, ಸುಧಾರಣೆಗಳನ್ನು ತಿಳಿಸುವುದು.
- ಇಂದಿಗೂ ನಮ್ಮ ಸಮಾಜ ಅವಶ್ಯವಾಗಿ ಅನುಸರಿಸಲೇಬೇಕಾದ ನಿಯಮಗಳನ್ನು ತಿಳಿಸುವ ಪ್ರಯತ್ನ.
- ಬಹುಮುಖ್ಯವಾಗಿ ಸ್ತ್ರೀ ದ್ವೇಷಿ ಎನಿಸಿಕೊಂಡಿರುವ ಮನುವಿನ ಸ್ತ್ರೀ ಕುರಿತ ನೈತಿಕ ತತ್ವದ ಅಧ್ಯಯನ.

### ಕುಟುಂಬ ಮತ್ತು ಸ್ತ್ರೀ

ಮನುಷ್ಯ ಸಂಘ ಜೀವಿ. ಸಮಾಜದ ಸ್ವಾಸ್ಥ್ಯ, ಸಾಮೂಹಿಕ ಸುಖಜೀವನ ಮತ್ತು ಸಮಾಜದ ಉನ್ನತಿಗಾಗಿ ಕೆಲವು ಕಟ್ಟುಪಾಡುಗಳನ್ನು ಸ್ತ್ರೀ–ಪುರುಷರಿಬ್ಬರೂ ಅನುಸರಿಸಲೇಬೇಕು. ಮಾನವನ ಸಂಘಜೀವಿ ಜೀವನದ ಭದ್ರವಾದ ಅಡಿಪಾಯ ಕುಟುಂಬ. ಒಂದು ಕುಟುಂಬದಲ್ಲಿ ಪುರುಷನಷ್ಟೇ ಸ್ತ್ರೀ ಕೂಡಾ ಅತ್ಯಂತ ಮಹತ್ವದ ಪಾತ್ರ ನಿರ್ವಹಿಸುತ್ತಾಳೆ.

**ಬಾಲ್ಯೇ ಪಿತುರ್ವಶೇ ತಿಷ್ಠೇತ್ಪಾಣಿಗ್ರಾಹಸ್ಯ ಯೌವನೇಟ**
**ಪುತ್ರಾಣಾಂ ಭರ್ತರಿ ಪ್ರೇತೇ ನ ಭಜೇತ್ ಸ್ತ್ರೀ ಸ್ವತಂತ್ರತಾಂ ಟಟ**

**(ಮನುಸ್ಮೃತಿ 5.148)**

ಈ ಶ್ಲೋಕವು ಸ್ತ್ರೀಯು ಬಾಲ್ಯದಲ್ಲಿ ತಂದೆ, ಯೌವನದಲ್ಲಿ ಗಂಡ, ಪತಿಯ ಮರಣಾನಂತರ ಪುತ್ರರ ಅಧೀನದಲ್ಲಿ ಬಾಳಬೇಕೇ ಹೊರತು ತಾನೇ ಸ್ವತಂತ್ರವಾಗಿ ವರ್ತಿಸಬಾರದು ಎಂದಿದೆ.

**ಪಿತಾ ರಕ್ಷತಿ ಕೌಮಾರೇ ಭರ್ತಾ ರಕ್ಷತಿ ಯೌವನೇ ಟ**
**ರಕ್ಷಂತಿ ಸ್ಥವಿರೇ ಪುತ್ರಾ ನ ಸ್ತ್ರೀ ಸ್ವಾತಂತ್ರ್ಯಮರ್ಹತಿ ಟಟ**

**(ಮನುಸ್ಮೃತಿ 9.3)**

ಸ್ತ್ರೀಯರನ್ನು ಬಾಲ್ಯದಲ್ಲಿ ತಂದೆಯೂ, ಯೌವನದಲ್ಲಿ ಪತಿಯೂ, ವೃದ್ಧಾಪ್ಯದಲ್ಲಿ ಮಕ್ಕಳು ರಕ್ಷಿಸಬೇಕು. ಸ್ತ್ರೀ ಸ್ವತಂತ್ರವಾಗಿ ಬದುಕಲು ಅರ್ಹರಲ್ಲ ಎನ್ನುವುದು ಮನುವಿನ ಮತ. ಆದರೆ ಮನುವಿನ ಅಭಿಪ್ರಾಯ ಸ್ತ್ರೀಯರ ಸ್ವಾತಂತ್ರ್ಯಾಪಹರಣ ಎಂದು ಅರ್ಥೈಸುವುದು ತಪ್ಪು. ಬಹುಶಃ ಶಾರೀರಿಕವಾಗಿ, ಮಾನಸಿಕವಾಗಿ ಕೋಮಲವಾಗಿರುವ ಸ್ತ್ರೀಯರಿಗೆ

ISSN : 2249-2429

RNI REG.NO.KARKAN/2011/38712

ರಕ್ಷಣೆಯನ್ನು ನೀಡಬೇಕು ಹಾಗೆಯೇ ತಂದೆ, ಗಂಡ, ಮಕ್ಕಳು ಜೊತೆಯಲ್ಲಿಲ್ಲದ ಸ್ತ್ರೀಗೆ ದುಷ್ಟರು ತೊಂದರೆ ಕೊಡಬಹುದು ಎಂದು ಮನುವಿನ ಅಭಿಪ್ರಾಯವಾಗಿತ್ತಾ? ಈಗಿನ ಒಂಟಿ ಮಹಿಳೆಯರ ಅಸುರಕ್ಷತೆಯ ಸಂದರ್ಭಗಳನ್ನು ನೋಡಿದಾಗ ಈ ಅಭಿಪ್ರಾಯ ಪ್ರಶ್ನೆಯಾಗುವುದಿಲ್ಲ, ಉತ್ತರವೇ ಆಗುತ್ತದೆ. ಭಾರತೀಯ ಸಾಮಾಜಿಕ ವ್ಯವಸ್ಥೆಯಲ್ಲಿ ಅವಿಭಕ್ತ ಕುಟುಂಬ ಜಾರಿಯಲ್ಲಿದ್ದು, ಕೌಟುಂಬಿಕ ನೆಮ್ಮದಿಯಲ್ಲಿ ಸ್ತ್ರೀ ಪುರುಷರಿಬ್ಬರದೂ ಸಮಾನ ಪಾಲಿದ್ದಿತು. ಕುಟುಂಬದ ಎಲ್ಲಾ ಕೆಲಸ ಕಾರ್ಯಗಳಲ್ಲೂ ಸಕ್ರಿಯವಾಗಿ ತೊಡಗಿಸಿಕೊಂಡಿದ್ದ ಸ್ತ್ರೀಯರ ಪಾತ್ರ ಬಹಳ ಮಹತ್ವದ್ದಾಗಿದ್ದು ಆಕೆಯನ್ನು ಜೀವಮಾನವಿಡೀ ರಕ್ಷಿಸುವ ನೈತಿಕ ಜವಾಬ್ದಾರಿಯನ್ನು ಪುರುಷನಿಗೆ ಮನು ನೀಡಿರುವುದು ಅಂದಿನ ಸಾಮಾಜಿಕ ಹೊಣೆಗಾರಿಕೆಯನ್ನು, ವೈಯಕ್ತಿಕ ಕರ್ತವ್ಯವನ್ನು ತಿಳಿಸುತ್ತದೆ.

## ವಿವಾಹ ಸಂಸ್ಕಾರ ಮತ್ತು ಸ್ತ್ರೀ

ಮಾನವ ಜನ್ಮವು ಅತ್ಯಂತ ಪವಿತ್ರವು ಮತ್ತು ಶ್ರೇಷ್ಠವೆಂಬ ನಂಬಿಕೆ ಇದ್ದು ಅವನಿಗೆ ಅಭ್ಯುದಯ ಮತ್ತು ಮೋಕ್ಷವನ್ನು ಹೊಂದುವ ಅವಕಾಶವಿರುವುದು. ಹಾಗಾಗಿ ಮನುಷ್ಯನ ಹುಟ್ಟಿನಿಂದ ಮರಣದವರೆಗಿನ ಸರ್ವತೋಮುಖ ಬೆಳವಣಿಗೆಗೆ ಪೂರಕವಾದ ಅನೇಕ ರೀತಿ ನೀತಿಗಳು, ಕಟ್ಟುಪಾಡುಗಳು ಹಾಗೂ ವಿಧಿ ವಿಧಾನಗಳು ರೂಢಿಗೆ ಬಂದವು. ಮನುಸ್ಮೃತಿಯು ಮಾನವ ತನ್ನ ಜೀವನದಲ್ಲಿ ಅವಶ್ಯಕವಾಗಿ ಅನುಸರಿಸಲೇಬೇಕಾದ ಹದಿನಾರು ಸಂಸ್ಕಾರಗಳ ಬಗ್ಗೆ ತಿಳಿಸುತ್ತದೆ. ಅವುಗಳಲ್ಲಿ ವಿವಾಹವೂ ಒಂದಾಗಿದೆ.

ಮನುಸ್ಮೃತಿಯಲ್ಲಿ ವಿವಾಹವನ್ನು ಅತ್ಯಂತ ಪವಿತ್ರವಾದ ಬಂಧನವೆಂದು ವಿವರಿಸಲಾಗಿದೆ. ಜಗತ್ತಿನ ಎಲ್ಲಾ ಸಮಾಜದಲ್ಲೂ ಕುಟುಂಬ ವ್ಯವಸ್ಥೆ ಹಾಗೂ ವಿವಾಹ ಸಂಸ್ಕಾರವನ್ನು ಕಾಣಬಹುದು. ಮಾನವನ ಜೀವನದ ಪ್ರಮುಖ ಹಂತಗಳಲ್ಲಿ ವಿವಾಹವು ಹೆಚ್ಚು ಪ್ರಾಮುಖ್ಯತೆಯನ್ನು ಪಡೆದಿದ್ದು ಇದು ಕೇವಲ ಸ್ತ್ರೀ ಪುರುಷರ ಮಿಲನವಷ್ಟೇ ಆಗಿರದೇ, ಎರಡು ಕುಟುಂಬಗಳನ್ನು ಒಂದುಗೂಡಿಸುವ ಹಾಗೂ ಇಬ್ಬರ ಬದುಕಿನಲ್ಲೂ ಪ್ರಮುಖ ಬದಲಾವಣೆಯನ್ನು ತರುವ ಮಹತ್ವದ ಘಟ್ಟವಾಗಿದೆ.

## ಅಷ್ಟವಿಧ ವಿವಾಹ

ಮನುವಿವಾಹದ ವಿವಿಧ ಪ್ರಕಾರಗಳನ್ನು ಹೀಗೆ ವಿವರಿಸಿದ್ದಾನೆ

**'ಬ್ರಾಹ್ಮೋ ದೈವಸ್ತಥೈವಾರ್ಷಃ ಪ್ರಜಾಪತ್ಯಸ್ತಥಾಸುರಃ**
**ಗಾಂದವರ್ೋರಾಕ್ಷಸಶ್ಚೈವ ಪೈಶಾಚಶ್ಚಾಷ್ಟಮೋಧಮಃ ಟಟ'**

**(ಮನುಸ್ಮೃತಿ 3.21)**

ಈ ಶ್ಲೋಕದಲ್ಲಿ ಮನು ಮಾನವನ ಜೀವನದ ಅವಶ್ಯಕ ಸಂಸ್ಕಾರವಾದ ವಿವಾಹದ ಎಂಟು ಪ್ರಕಾರಗಳನ್ನು ವಿವರಿಸಿದ್ದಾನೆ. ಅವುಗಳೇ ಬ್ರಹ್ಮ, ದೈವ, ಆರ್ಷ, ಪ್ರಜಾಪತ್ಯ, ಅಸುರ, ಗಾಂದರ್ವ, ರಾಕ್ಷಸ ಹಾಗೂ ಪೈಶಾಚ. ಇವುಗಳಲ್ಲಿ ಪೈಶಾಚ ವಿವಾಹವು ಅತ್ಯಂತ ಅಧಮ ವಿವಾಹವಾಗಿದ್ದು, ಬ್ರಾಹ್ಮ ವಿವಾಹವು ಅತ್ಯಂತ ಯೋಗ್ಯ ಮತ್ತು ಉತ್ತಮ ವಿವಾಹ ಪದ್ಧತಿಯೆನಿಸಿದೆ.

## ವಿವಾಹ ಯೋಗ್ಯಕಾಲ

**'ಉತ್ಕಷ್ಮಾಯಾಭೀರೂಪಾಯ ವರಾಯ ಸದೃಶಾಯಚ ಟ**
**ಅಪ್ರಾಪ್ತಮಪಿ ತಾಂ ತಸ್ಮೈ ಕನ್ಯಾಂ ದದ್ಯಾದ್ಯಥಾವಿಧಿ ಟ ಟ'**

**(ಮನುಸ್ಮೃತಿ 9.88)**

ಮನುಸ್ಮೃತಿಯಲ್ಲಿ ವಿವಾಹ, ವರ, ತಂದೆಯ ಕರ್ತವ್ಯಗಳನ್ನೂ ಸಹ ತಿಳಿಸಲಾಗಿದೆ. ಅದರ ಪ್ರಕಾರ ತಂದೆಯು ಶ್ರೇಷ್ಠನಾದ, ಸುಂದರನಾದ, ಸ್ವಜಾತಿಯ ವರನು ಸಿಕ್ಕರೆ ಆತ ತನ್ನ ಮಗಳು ಅಪ್ರಾಪ್ತ ವಯಸ್ಕಳಾದರೂ ಸಹ ವಿಧಿ ಪ್ರಕಾರ ಕನ್ಯಾದಾನ ಮಾಡಬಹುದು ಎಂದು ಹೇಳಲಾಗಿದೆ. ಹಾಗೆಯೇ ಯೋಗ್ಯ ವರ ಸಿಗದಿದ್ದರೆ ಕನ್ಯೆಯು ಆಜೀವಪರ್ಯಂತ ತಂದೆಯ ಮನೆಯಲ್ಲೇ ಇರಬಹುದು. ಆದರೆ ಗುಣಹೀನನಾದವನಿಗೆ ಮದುವೆ ಮಾಡಿಕೊಡಬಾರದು ಎಂದಿದೆ. ಇದು ಇಂದಿಗೂ ಪ್ರಸ್ತುತ.

ಸ್ತ್ರೀಯರನ್ನು ಕುರಿತು ಮನು ತೋರಿಸಿರುವ ಕಾಳಜಿಯನ್ನು ಮನುಸ್ಮೃತಿಯಲ್ಲಿನ ಶ್ಲೋಕಗಳಿಂದ ತಿಳಿಯಬಹುದು. ಪ್ರಮುಖವಾದವು ಗಳೆಂದರೆ –

- ವಿವಾಹವು ಸ್ತ್ರೀಗೆ ಕಡ್ಡಾಯವಲ್ಲ – ಯೋಗ್ಯ ವರ ಸಿಗದಿದ್ದರೆ ಕನ್ಯೆಯು ಅವಿವಾಹಿತೆಯಾಗಿ ಇರಬಹುದಿತ್ತು.
- ಸ್ತ್ರೀಗೆ ಯೋಗ್ಯ ವರನನ್ನು ಹುಡುಕಿ ವಿವಾಹ ಮಾಡಿಕೊಡುವುದು ತಂದೆಯ ಕರ್ತವ್ಯ
- ತಂದೆಯು ಯೋಗ್ಯ ವರನನ್ನು ಹುಡುಕಲು ಅಸಮರ್ಥನಾದಲ್ಲಿ, ಆ ಸ್ತ್ರೀಯು ತಾನೇ ಯೋಗ್ಯ ವರನನ್ನು ವರಿಸಬಹುದಿತ್ತು. ಅಂದಿನ ಕಾಲಕ್ಕೆ ಮನು ಸ್ತ್ರೀಯರಿಗೆ ನೀಡಿರುವ ಆಯ್ಕೆಯ ಸ್ವಾತಂತ್ರ್ಯ ಇಂದಿಗೂ ಆದರ್ಶ ನಿಯಮವಾದುದು.
- ವಿವಾಹಕ್ಕೆ ವಯಸ್ಸಿನ ನಿರ್ಬಂಧವನ್ನು ಹೇಳಿಲ್ಲ. ಬದಲಾಗಿ ವಧು–ವರರ ಯೋಗ್ಯತೆಯ ಕುರಿತು ಚರ್ಚಿಸಿದ್ದಾನೆ.
- ವಿವಾಹದ ಮುಖ್ಯ ಉದ್ದೇಶ ಉತ್ತಮ ಸಂತತಿಯನ್ನು ಪಡೆದು ಒಳ್ಳೆಯ ಕುಟುಂಬ ಮತ್ತು ಸ್ವಾಸ್ಥ್ಯ ಸಮಾಜದ ನಿರ್ಮಾಣ. ಹಾಗಾಗಿ ಸ್ವಜಾತಿಯ ಕನ್ಯೆಯನ್ನು ವಿವಾಹವಾಗಬೇಕು ಎಂದು ಮನು ತಿಳಿಸಿದ್ದಾನೆ.

***ಉದಾ :*** ಬ್ರಾಹ್ಮಣನು ಬ್ರಾಹ್ಮಣ ಸ್ತ್ರೀಯನ್ನು
ಶೂದ್ರ ಶೂದ್ರಳನ್ನು ವಿವಾಹವಾಗಬೇಕಿದ್ದಿತು.

ಅಂದಿನ ಸಾಮಾಜಿಕ ವ್ಯವಸ್ಥೆಯಲ್ಲಿದ್ದ ವರ್ಣ ಪದ್ಧತಿಗೆ ಅನುಗುಣವಾಗಿ ಮನು ವಿವಾಹದ ನಿಯಮಗಳನ್ನು ರೂಪಿಸಿದ್ದನು. ಏಕೆಂದರೆ ವರ್ಣ ಸಂಕರವು ಸಮಾಜ ಬಾಹಿರವಾಗಿತ್ತು.

- ಸ್ತ್ರೀಗೆ ಕನ್ಯಾದಾನ ಒಮ್ಮೆ ಮಾತ್ರ ಎಂದರೂ, ಪತಿಯಿಂದ ತಿರಸ್ಕೃತಳಾದಾಗ, ವಿವಾಹದ ಕೆಲವೇ ದಿನಗಳಲ್ಲಿ ಪತಿಯನ್ನು ಕಳೆದುಕೊಂಡಾಗ ವಿವಾಹದ ಎಲ್ಲಾ ವಿಧಿ ವಿಧಾನಗಳೊಂದಿಗೆ ಸ್ತ್ರೀಯ ಮರುವಿವಾಹವಾಗಬಹುದು ಎಂದು ತಿಳಿಸಿದ್ದಾನೆ. ವಿಶೇಷತೆಯೆಂದರೆ ಅಂದು ಬಾಲ್ಯ ವಿವಾಹ, ಸತಿ ಪದ್ಧತಿ, ವರದಕ್ಷಿಣೆಯಂತಹ ಸಾಮಾಜಿಕ ಪಿಡುಗುಗಳು ಇಲ್ಲದಿರುವುದು.
- ವಿವಾಹದ ಸಮಯದಲ್ಲಿ ಅಲಂಕೃತಳಾದ ಕನ್ಯೆಯನ್ನು ಮುತ್ತು, ರತ್ನ, ಬಂಗಾರದೊಂದಿಗೆ ದಾನ ಮಾಡುತ್ತಿದ್ದ ಕನ್ಯಾಶುಲ್ಕವನ್ನು ಒಪ್ಪದ ಮನು, ಕನ್ಯಾಶುಲ್ಕವನ್ನು ತೆಗೆದುಕೊಂಡರೆ ಆಕೆಯನ್ನು ಮಾರಿದಂತಾಗುತ್ತದೆ. ಆಕೆಯು ಮಾರಾಟದ ವಸ್ತುವಲ್ಲ, ಆಕೆಗೂ ತನ್ನದೇ ಆದ ವ್ಯಕ್ತಿತ್ವವಿದೆ ಎಂದು ಅಭಿಪ್ರಾಯ ಪಟ್ಟಿದ್ದಾನೆ.

ಭಾರತೀಯ ಸಮಾಜವು ನಿರಂತರ ಬದಲಾವಣೆಯನ್ನು ಆಯಾ ಕಾಲಕ್ಕೆ ತಕ್ಕಂತೆ ಪ್ರಗತಿಯನ್ನು ಕಂಡಿದೆ. ಹಾಗೆಯೇ ಸ್ತ್ರೀಯ ಸ್ಥಾನಮಾನ ಕೂಡ. ಸ್ತ್ರೀಯರ ಜೀವನವೇ ವಿಭಿನ್ನ ಮತ್ತು ವಿಶೇಷವಾದದ್ದು, ಬಾಲ್ಯದಲ್ಲಿ ತನ್ನ ತಂದೆ–ತಾಯಿಯ ಪ್ರೀತಿ, ಆರೈಕೆಯಲ್ಲಿ ಬೆಳೆದು, ಯೌವ್ವನದಲ್ಲಿ ಪತಿಯ ಮನೆಯಲ್ಲಿ ಹೊಸ ಸಂಬಂಧಗಳ ಬೆಸೆದು ಅವರೊಂದಿಗೆ ಹೊಂದಿಕೊಂಡು ಎಲ್ಲಾ ಜವಾಬ್ದಾರಿಗಳನ್ನು ನಿರ್ವಹಿಸಬೇಕಾದ ಅನಿವಾರ್ಯತೆ ಇರುತ್ತದೆ. ಇದು ಎಂದೂ ಬದಲಾಗದ ಸಾಮಾಜಿಕ

ವ್ಯವಸ್ಥೆ. ಮನು ಸ್ತ್ರೀಯೊಬ್ಬಳಿಗೆ ನಿಯಮಗಳನ್ನು ಹೇರದೆ, ಸ್ತ್ರೀ–ಪುರುಷರಿಬ್ಬರ ನೈತಿಕ ಜೀವನವನ್ನು ವ್ಯವಸ್ಥಿತಗೊಳಿಸುವ ಅನೇಕ ನಿಯಮಗಳನ್ನು, ಮೌಲ್ಯಗಳನ್ನು, ವಿಚಾರಗಳನ್ನು ತಿಳಿಸಿದ್ದಾನೆ.

ಇದು ಕೇವಲ ನನ್ನ ಅಭಿಪ್ರಾಯವಾಗಿದ್ದು, ಅಂದಿನ ಸಮಾಜದಲ್ಲಿ ಜಾರಿಯಲ್ಲಿದ್ದ ನೀತಿಸಂಹಿತೆಯನ್ನು ವಿವರಿಸಿದ್ದೇನೆ. ಯಾವುದೇ ಗ್ರಂಥವು ಸಾರ್ವಕಾಲಿಕ ಶ್ರೇಷ್ಠ ಗ್ರಂಥವಾಗಲು ಸಾಧ್ಯವಾಗಬಾರದು. ಇದೇ ರೀತಿಯ ಅಭಿಪ್ರಾಯವನ್ನು ದೇಶದ ಶ್ರೇಷ್ಠ ಚಿಂತಕರಾದ ಕುವೆಂಪುರವರು ತಮ್ಮ ಸಪ್ತಸೂತ್ರಗಳಲ್ಲಿ ವ್ಯಕ್ತಪಡಿಸಿದ್ದಾರೆ. ಸ್ವಾತಂತ್ರ್ಯ ಜವಾಬ್ಧಾರಿಯಾಗಿ ಉಳಿಯಬೇಕು, ಸ್ವೇಚ್ಛೆಯಾಗಬಾರದು ಎಂದು ಉಲ್ಲೇಖಿಸಿದ್ದಾರೆ. ಕಾಲಕ್ಕೆ ತಕ್ಕಂತೆ ಬದಲಾವಣೆ, ಅಗತ್ಯತೆಯ ನಿಲುವುಗಳು ಅವಶ್ಯಕ. ಹಾಗೆಯೇ ಬದಲಾದ ಸಮಾಜದಲ್ಲಿನ ನೀತಿ ಸಂಹಿತೆಯನ್ನು ರಚಿಸುವವರೂ, ಅವುಗಳ ದುರುಪಯೋಗ ಪಡಿಸಿಕೊಳ್ಳದೆ ಹಾಗೆ ರಚಿಸಬೇಕು. ಇಲ್ಲವಾದಲ್ಲಿ ಇವೆಲ್ಲವೂ ಅರ್ಥಹೀನವಾಗಿ ಮನುಸ್ಮೃತಿಗೆ ಒದಗಿದ ಸಂದರ್ಭಗಳೇ ಒದಗಬಹುದು.

## ಆಕರ ಗ್ರಂಥಗಳು


- **J.H Dave** (1972) **:** Manusmriti, Mumbai Bharatiya Vidya Bhavan.
- **P.V Kane :** History of Dharmashastra, Pune Bhandarkar Oriental Research Institute.
- **ಹರಗೋವಿಂದಶಾಸ್ತ್ರಿ** (1980) : ಮನುಸ್ಮೃತಿ, ವಾರಣಾಸಿ ಚೌಕಾಂಬಾ ಸಂಸ್ಕೃತ ಸಿರೀಸ್ ಆಫೀಸ್
- **ಮ. ರಾಮಾಜೋಯಿಸ್** (2005) : ಮನುಸ್ಮೃತಿಯಲ್ಲಿ ಜೀವನಮೌಲ್ಯಗಳು, ಬೆಂಗಳೂರು ಸ್ವಪ್ನ ಬುಕ್‌ಹೌಸ್.
- **ಡಾ. ಕೆ.ಬಿ ಅರ್ಚಕ** (1996) : ಮನುಸ್ಮೃತಿ ಮತ್ತು ಸ್ತ್ರೀ (ಸಂಪಾದಿತ), ಶಿರಸಿ ಸಂಸ್ಕೃತ ಶೋಧ ಸಂಸ್ಥಾನ.
- **ನಾಗೇಶ ಕುಲಕರ್ಣಿ** (1980) : ಯಾಜ್ಞವಲ್ಕ್ಯಸ್ಮೃತಿ, ಧಾರವಾಡ ಸಮಾಜ ಪುಸ್ತಕಾಲಯ.


■■

– 20ನೇ ಪುಟದಿಂದ ಮುಂದುವರೆದುದು

ನಮಗಿಂತ ಹೆಚ್ಚಾಗಿದೆಯೇ? ದುರುದ್ದೇಶದಲ್ಲಿಯೇ ಇಷ್ಟು ಬಲವಿರುವಾಗ ಸದುದ್ದೇಶವಿರುವ ನಮ್ಮಲ್ಲಿ ಎಷ್ಟು ಶಕ್ತಿಯಿರಬೇಡ. ಮಕ್ಕಳಲ್ಲಿ ದೇಶಭಕ್ತಿಯ ಭಾವವನ್ನು ಬೆಳೆಸುವುದರ ಜೊತೆಗೆ ಅವರಿಗೆ ದೇಶದ್ರೋಹದಂತಹ ನಕಾರಾತ್ಮಕ ಚಟುವಟಿಕೆಗಳ ಬಗ್ಗೆಯೂ ಸೂಕ್ಷ್ಮವಾಗಿ ತಿಳಿಸಿ ಹೇಳಬೇಕು. ಉದಾಹರಣೆಗೆ ಖೋಟಾ ನೋಟುಗಳ ಚಲಾವಣೆಯೂ ಒಂದು ದೇಶದ್ರೋಹದ ಕೆಲಸ, ಡ್ರಗ್ಸ್‌ನಂತಹ ಕೆಟ್ಟ ಜಾಲಗಳ ಬಗ್ಗೆ ಅವರನ್ನು ಎಚ್ಚರಿಸಬೇಕು. ಅಂದು ಬ್ರಿಟೀಷರ ಬಿಳಿ ಮೂತಿಯ ಹಿಂದಿನ ಕರಾಳ ಮುಖವನ್ನು ನೋಡಲಾಗದ ಜನರಿಗೆ ತಿಳಿಹೇಳಲು ಸ್ವಾಮಿ ವಿವೇಕಾನಂದ, ಸುಭಾಷಚಂದ್ರ ಬೋಸ್, ಮಹಾತ್ಮಾ ಗಾಂಧೀಜಿ ಮುಂತಾದವರು ಹರಸಾಹಸಪಟ್ಟರು. ಈ ಕಾಲದ ಇಂಟರ್‌ನೆಟ್ ವಾಟ್ಸಾಪ್, ಫೇಸ್‌ಬುಕ್‌ನಂತಹ ಜಾಲ ತಾಣಗಳಿದ್ದಿದ್ದರೆ, ಅನುಕೂಲಗಳು ಆಗ ಇದ್ದಿದ್ದರೆ ಬಹುಶಃ ಅವರು ಅದ್ಭುತಗಳನ್ನು ಮಾಡುತ್ತಿದ್ದರೇನೋ ?

ಇತಿಹಾಸದಲ್ಲಿ ಆಚಾರ್ಯ ಚಾಣಕ್ಯನು ಅಖಂಡ ಭಾರತದ ಸ್ಥಾಪನೆಯ ಕನಸು ಕಂಡು ತನ್ನ ವಿದ್ಯಾರ್ಥಿಗಳಲ್ಲಿ ದೇಶಪ್ರೇಮದ ಕಿಚ್ಚನ್ನು ಹಚ್ಚುವಲ್ಲಿ, ಒಗ್ಗಟ್ಟನ್ನು ಮೂಡಿಸುವಲ್ಲಿ ಸಫಲನಾಗಿದ್ದ. ಚಾಣಕ್ಯನು ರಾಷ್ಟ್ರಪ್ರೇಮ ನಿರ್ಮಾಣದಲ್ಲಿ ಶಿಕ್ಷಕನ ಪಾತ್ರವನ್ನು ಹೀಗೆ ವಿವರಿಸುತ್ತಾನೆ 'ರಾಷ್ಟ್ರವು ಗೌರವಶಾಲಿಯಾದಾಗಲೇ ಶಿಕ್ಷಕನೂ ಗೌರವಶಾಲಿಯಾಗುತ್ತಾನೆ. ರಾಷ್ಟ್ರವು ತನ್ನ ಜೀವನ ಮೌಲ್ಯಗಳನ್ನು, ಪರಂಪರೆಯನ್ನು ನಿರ್ವಹಿಸುವಲ್ಲಿ ಸಫಲ ಹಾಗೂ ಸಕ್ಷಮವಾದಾಗಲೇ ಗೌರವಶಾಲಿಯೆನಿಸುತ್ತದೆ. ಹಾಗೆಯೇ ಶಿಕ್ಷಕನು ತನ್ನ ಉತ್ತರದಾಯಿತ್ವವನ್ನು ನಿರ್ವಹಿಸುವಲ್ಲಿ ಸಫಲನಾದಾಗಲೇ ರಾಷ್ಟ್ರವು ಸಫಲ ಮತ್ತು ಸಕ್ಷೇಮವಾಗುತ್ತದೆ. ಪ್ರತ್ಯೇಕ ವ್ಯಕ್ತಿಯಲ್ಲಿಯೂ ರಾಷ್ಟ್ರೀಯ ಚರಿತ್ರೆಯ ನಿರ್ಮಾಣ ಮಾಡುವುದರಲ್ಲಿ ಸಫಲನಾದಾಗ ಶಿಕ್ಷಕನನ್ನು ಸಫಲನೆಂದು ಹೇಳಬಹುದು. ಒಂದು ದೇಶದ ನಾಗರಿಕನು ರಾಷ್ಟ್ರಭಿಮಾನ ಶೂನ್ಯನಾಗಿದ್ದರೆ, ರಾಷ್ಟ್ರಭಾವದಿಂದ ಹೀನನಾಗಿದ್ದರೆ, ತನ್ನ ರಾಷ್ಟ್ರೀಯತೆಗೆ ಗೌರವ ತರುವವನಾಗಿರದಿದ್ದರೆ ಇದು ಆ ದೇಶದ ಶಿಕ್ಷಕರ ಅಸಫಲತೆಯಾಗಿದೆ. ಶಿಕ್ಷಕರು ಪರಾಜಯವನ್ನು ಸ್ವೀಕರಿಸಿದರೆ ಜಯದ ಭಾವವೇ ಆ ದೇಶದಲ್ಲಿ ಸಮಾಪ್ತಿಯಾಗಿಬಿಡುತ್ತದೆ. ಶಿಕ್ಷಕರೇ ರಾಷ್ಟ್ರೀಯ ಏಕತೆಯ ಸವಾಲನ್ನು ಸ್ವೀಕರಿಸಿ ಅದರೆಡೆಗಿನ ಮಾರ್ಗವನ್ನು ಕಂಡುಕೊಳ್ಳಬೇಕು. ಇಂತಹ ಶಿಕ್ಷಕರ ಉದಾಹರಣೆಗಳು ನಮಗೆ ಪ್ರೇರಣೆ ನೀಡುತ್ತವೆ.

ಭಾರತವು ವಿವಿಧತೆಯಲ್ಲಿ ಏಕತೆಗೆ ಹೆಸರಾದ ದೇಶ. ಭಾರತೀಯ ಪ್ರತಿಯೊಂದು ಸಂಪ್ರದಾಯ, ಆಚರಣೆಗಳ ಹಿಂದೆ ಇರುವ ವೈಜ್ಞಾನಿಕ ಆಧಾರಗಳ ಬಗ್ಗೆ ತಿಳಿಸಿಕೊಡಬೇಕು. ಕ್ರಿಕೆಟ್ ಮ್ಯಾಚ್‌ನ್ನು ನೋಡುವಾಗ ಭಾರತೀಯರು, ಭಾರತೀಯ ತಂಡವನ್ನು ಪ್ರೋತ್ಸಾಹಿಸುತ್ತಾರೆ ಹೊರತು ಯಾವುದೋ ಒಂದು ರಾಜ್ಯದ, ಒಂದು ಧರ್ಮದ ಆಟಗಾರರನನ್ನಲ್ಲ. ಇದೇ ಭಾವನೆಯು ಎಲ್ಲ ಸಮಯದಲ್ಲೂ ಇದ್ದರೆ ಎಷ್ಟು ಚೆನ್ನ. ಯಾವುದೋ ಜಾತ್ರೆ–ಉತ್ಸವಕ್ಕೆ ರಜೆ ಕೊಡದಿದ್ದಾಗ ಮಕ್ಕಳು ಬೇಸರದಿಂದ ಪ್ರತಿಕ್ರಿಯಿಸಿದಾಗ ನಮ್ಮ ಸೈನಿಕರಿಗೆ ಎಷ್ಟು ಕಡಿಮೆ ರಜೆಗಳಿರುತ್ತವೆ, ಅದೆಷ್ಟು ಹಬ್ಬ–ಆಚರಣೆಗಳನ್ನು ಅವರು ಕಳೆದುಕೊಳ್ಳುತ್ತಿರುತ್ತಾರೆ, ಅವರು ಜಾತ್ರೆ ಅಥವಾ ಹಬ್ಬಗಳಲ್ಲಿ ಭಾಗವಹಿಸಿ ದಶಕಗಳೇ ಕಳೆದಿರುತ್ತವೆ ಎಂಬ ಅಂಶವನ್ನು ತಿಳಿಸಬೇಕು. ಗಡಿಗಳನ್ನು ಹಗಲಿರುಳು ಕಾಯುವುದರ ಮೂಲಕ ನಮ್ಮ ರಕ್ಷಣೆಗೆ, ನೆಮ್ಮದಿಗೆ ಕಾರಣರಾದ ಸೈನಿಕರನ್ನು ಗೌರವಿಸುವುದನ್ನು ಕಲಿಸಬೇಕು. ಹಾಗೆಯೇ ಛಳಿ, ಮಳೆ, ಬಿಸಿಲೆನ್ನದೆ ರೈತರ ಪರಿವಾರ ಹಗಲಿರುಳೂ ದುಡಿದು ದೇಶಕ್ಕೆ ಅನ್ನ ನೀಡುತ್ತಾರೆ. ಅವರ ಶ್ರಮದ ಬೆಲೆಯನ್ನು ನಾವು ಮಕ್ಕಳಿಗೆ ತಿಳಿಸಿಕೊಡಬೇಕು.

ನಮ್ಮ ದೇಶದ ಸಂಸ್ಕೃತಿ–ಪರಂಪರೆ ಹಾಗೂ ಸ್ವಾತಂತ್ರ್ಯವನ್ನು ಕಾಪಾಡಿಕೊಳ್ಳುವುದು ಇಂದಿನ ಶಿಕ್ಷಕರ ಹೆಗಲ ಮೇಲಿರುವ ಗುರುತರ ಜವಾಬ್ದಾರಿಯಾಗಿದೆ. ಲಕ್ಷಾಂತರ ದೇಶಪ್ರೇಮಿಗಳ ಬಲಿದಾನದಿಂದ ಸಿಕ್ಕ ಈ ಸ್ವಾತಂತ್ರ್ಯವನ್ನು ಬರೀ ಉಳಿಸಿಕೊಳ್ಳುವುದೇ ನಮಗೆ ಕಷ್ಟವಾದರೆ? ಇದನ್ನು ಪಡೆಯಲು ಅವರು ಎಷ್ಟು ಕಷ್ಟಪಟ್ಟಿರಬೇಕು? ಪ್ರತಿ ಮನೆಯಲ್ಲೂ ದೇಶಭಕ್ತರನ್ನು ತಯಾರು ಮಾಡಬಹುದಾದ ಶಕ್ತಿ–ಅವಕಾಶ ಶಿಕ್ಷಕರ ಬಳಿಯಲ್ಲಿ ಮಾತ್ರ ಇದೆ.

■■

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ವಿಠಲಾಪುರದ ಬೂದಿ ದಿಬ್ಬ ಶೋಧ

✍ ಗೀತಾ ಪಾಟೀಲ ( ಉಪನ್ಯಾಸಕರು, ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಪಿ.ಜಿ. ಅಧ್ಯಯನ ವಿಭಾಗ, ಕೊಪ್ಪಳ. ಕರ್ನಾಟಕ

**ಮಾ**ನವರು ಬದುಕಿನ ಇತಿಹಾಸದಲ್ಲಿ ಸಾಧಿಸಿದ ಪ್ರಗತಿಯನ್ನು ಆದಿಶಿಲಾಯುಗ, ಮಧ್ಯಶಿಲಾಯುಗ, ನವಶಿಲಾಯುಗ, ಶಿಲಾ ತಾಮ್ರಯುಗ ಹಾಗೂ ಕಬ್ಬಿಣದ ಬೃಹತ್ ಶಿಲಾಯುಗವೆಂದು ವಿಂಗಡಿಸಿ ಗುರುತಿಸಲಾಗಿದೆ. ಈ ಪ್ರತಿಯೊಂದು ಕಾಲಘಟ್ಟದಲ್ಲಿಯೂ ಮಾನವರು ಹೊಸ ಹೊಸ ಅವಿಷ್ಕಾರದಿಂದ ತಮ್ಮ ದಿನನಿತ್ಯದ ಜೀವನವನ್ನು ಸುಲಭವಾಗಿಸಿಕೊಂಡರು. ಈ ಕಾಲಘಟ್ಟಗಳಲ್ಲಿ ಅತಿ ಹೆಚ್ಚು ಪ್ರಗತಿ ಸಾಧಿಸಿ ನವಮಾನವ ಜೀವನವನ್ನು ರೂಪಿಸಿಕೊಂಡ ಕಾಲಘಟ್ಟವನ್ನು ನವಶಿಲಾಯುಗವೆಂದು ಗುರುತಿಸಲಾಗಿದೆ. ಈ ಕಾಲಘಟ್ಟದಲ್ಲಿ ಉಪಕರಣಗಳನ್ನು ತಯಾರಿಸುವಲ್ಲಿ ಹೊಸ ತಂತ್ರ ಬಳಸಿದ್ದನ್ನು ಪ್ರಧಾನವಾಗಿ ಗುರುತಿಸಲಾಗುತ್ತದೆ. ನಯಗೊಳಿಸಿದ ಕಲ್ಲಿನ ಉಪಕರಣಗಳ ಬಳಕೆ, ಮೊದಲ ಬಾರಿಗೆ ಮಣ್ಣಿನಪಾತ್ರೆಗಳ ತಯಾರಿಕೆ ಮತ್ತುಉಪಯೋಗಆರಂಭಿಕ ಹಂತದ ಬೇಸಾಯ ಮತ್ತು ಪಶು ಸಾಕಾಣಿಕೆ ಈ ಕಾಲಘಟ್ಟದ ಪ್ರಮುಖ ಲಕ್ಷಣಗಳೆಂದು ಗುರುತಿಸಲಾಗಿದೆ. ಆದರೆ ಗಾರ್ಡನ್ ಚೈಲ್ಡ್‌ನಂತ ಪ್ರಾಕ್ತನ ವಿದ್ವಾಂಸರು ಮೇಲಿನ ತಾಂತ್ರಿಕ ಅಂಶಗಳಿಗಿಂತಲೂ ಸಾಂಸ್ಕೃತಿಕ ಹಿನ್ನೆಲೆ ಸೂಚಿಸುವ ಆರ್ಥಿಕ ಸಾಮಾಜಿಕ ಅಂಶಗಳ ಆಧಾರದ ಮೇಲೆ ನವಶಿಲಾಯುಗದ ಸಂಸ್ಕೃತಿಯನ್ನು ಗುರುತಿಸಿವುದು ಸೂಕ್ತವೆಂದುವಾದಿಸುತ್ತಾರೆ.[1] ಈ ಕಾಲಘಟ್ಟದಲ್ಲಿ ರೂಡಿಸಿಕೊಂಡ ಪಶುಪಾಲನೆ ಮತ್ತು ಬೇಸಾಯದ ಕಾರಣದಿಂದ ಮಾನವರು ಒಂದೆಡೆ ನೆಲೆ ನಿಲ್ಲುವಂತಾಗಿ ಗೃಹ ಉಪಯೋಗಿ ವಸ್ತುಗಳನ್ನು ತಯಾರಿಸಿಕೊಂಡರು. ಈ ಹಂತದಲ್ಲಿ ಸುಟ್ಟು ತಯಾರಿಸಲಾದ ವಸ್ತುಗಳನ್ನು ಬಳಸಿರುವುದು ಕಂಡು ಬಂದಿದೆ. ಈ ಬೂದಿದಿಬ್ಬಗಳು ನೂತನ ಶಿಲಾಯುಗದ ಅವಿಭಾಜ್ಯ ಅಂಗಗಳಾಗಿವೆ. ಇವುಗಳ ಕಾಲಮಾನ ಸುಮಾರು ಕ್ರಿ. ಪೂ. 2000–600ರ ವರೆಗೆಎಂದು ಅಂದಾಜಿಸಲಾಗಿದೆ.

ಕೃಷ್ಣ ನದಿಯ ಬಯಲು, ಭೀಮಾ–ಕೃಷ್ಣಾ–ತುಂಗಭದ್ರಾ ಸಂಗಮ ಪ್ರದೇಶ (ನೆರೆಯ ಆಂಧ್ರಪ್ರದೇಶ) ಭಾಗಗಳು ಸೇರಿದಂತೆ ಹಲವಾರು ಶಿಲಾ–ತಾಮ್ರಯುಗ ಹಂತದಲ್ಲಿಯ ನೂತನ ಶಿಲಾಯುಗ ನೆಲೆಗಳಲ್ಲಿ ಅಥವಾ ಅವುಗಳ ಸಮೀಪ ಅತಿಯಾಗಿ ಸುಟ್ಟ ಬೃಹದಾಕಾರದ ಬೂದಿಕಿಟ್ಟ ದಿನ್ನೆಗಳಿವೆ. ಈ ತರಹದಂತಹ ಬೂದಿದಿಬ್ಬವೊಂದು ಗಂಗಾವತಿ ತಾಲೂಕಿನ ವಿಠಲಾಪುರ ಗ್ರಾಮದಲ್ಲಿದೆ. ಈ ಬೂದಿಬ್ಬದ ಕುರಿತು ಇಲ್ಲಿ ವಿವೇಚಿಸಲಾಗಿದೆ.

## ವಿಠಲಾಪುರದ ಬೂದಿದಿಬ್ಬ

ಗಂಗಾವತಿ ನಗರದ ವಾಯುವ್ಯ ದಿಕ್ಕಿನಲ್ಲಿ ಸುಮಾರು 20 ಕಿ.ಮೀ.ದೂರದಲ್ಲಿ ವಿಠಲಾಪುರ ಗ್ರಾಮವು ಇದೆ. ಈ ಗ್ರಾಮದ ದಕ್ಷಿಣ ಬದಿಯಲ್ಲಿ ಕೊಪ್ಪಳ ಜಿಲ್ಲೆಯಲ್ಲಿಯೇಅತ್ಯಂತ ವಿಸ್ತೃತವಾದ 'ಏಳುಗುಡ್ಡ' ಸಾಲಿನ ಉತ್ತರದ ಅಂಚಿನ ಬೆಟ್ಟಗಳಿವೆ. ಈ ಬೆಟ್ಟಸಾಲುಗಳಲ್ಲಿಗ್ರಾಮದಿಂದ ಸುಮಾರು 2 ಕಿ. ಮೀ. ದೂರದಲ್ಲಿ ಎರಡು ಬೆಟ್ಟಗಳು ಪೂರ್ವ–ಪಶ್ಚಿಮ ಹಾಗೂ ಉತ್ತರ–ದಕ್ಷಿಣಾಭಿಮುಖವಾಗಿ $90^{\circ}$ ಕೋನದಲ್ಲಿ ಸಂಧಿಸುವ ಕಣಿವೆ ಭಾಗದಲ್ಲೊಂದುಬೂದಿದಿಬ್ಬ ನಿವೇಶನವಿದೆ.

ಈ ಬೂದಿದಿಬ್ಬ ನಿವೇಶನವು (ಚಿತ್ರ 1) ಸುಮಾರು ಐದರಿಂದ ಏಳು ಎಕರೆಯಷ್ಟು ವಿಸ್ತಾರವಾಗಿದ್ದುಇದರಲ್ಲಿ ಬೂದಿದಿಬ್ಬವು ಸುಮಾರು ನಾಲ್ಕು ಎಕರೆಯಷ್ಟು ವಿಸ್ತೃತವಾಗಿದೆ. ಪ್ರಸ್ತುತ ಬೂದಿ ದಿಬ್ಬವನ್ನು ಸ್ಥಳೀಯರು ಅಲ್ಲಲ್ಲಿ ಅಗೆದು ಬೂದಿ ಮಿಶ್ರಿತ ಮಣ್ಣನ್ನು ಸಾಕಷ್ಟು ಸಾಗಿಸಿದ್ದಾರೆ. ಇದರಿಂದ ಬೂದಿ ದಿನ್ನೆಯು ಸುಮಾರು 4 ಮೀ. ದಪ್ಪಗಿರುವುದು ಗೋಚರಿಸುತ್ತದೆ. ಬೂದಿದಿಬ್ಬವು ಬೆಟ್ಟದ ಇಳಿಜಾರಿಗೆ ಹೊಂದಿಕೊಂಡಿರುವುದರಿಂದ ಮಳೆಗಾಲದಲ್ಲಿ ಬೂದಿದಿಬ್ಬದ ಮೇಲೆ ಹರಿಯುವ ಬೆಟ್ಟದ ನೀರಿನಿಂದಾಗಿ ಬೂದಿ ಹಾಗೂ ಅದರೊಳಗಿನ ಪ್ರಾಚ್ಯಾವಶೇಷಗಳು ಸುತ್ತಲ ಭೂಮಿಯಲ್ಲಿ ಹರಡಿವೆ. ಬೆಟ್ಟದ ಇಳಿಜಾರಿನ ಅಂಚಿನ ಈ ಭೂಮಿಯನ್ನು ರೈತರು ಉಳುಮೆ ಮಾಡುತ್ತಿದ್ದಾರೆ.[2]



ಚಿತ್ರ 1. ಬೂದಿದಿಬ್ಬ

## ಬೂದಿದಿಬ್ಬದ ಪ್ರಾಚ್ಯಾವಶೇಷಗಳು

ಬೂದಿದಿಬ್ಬದ ಮೇಲ್ಭಾಗ ಹಾಗೂ ಒಳಭಾಗದಲ್ಲಿ ಪ್ರಾಚ್ಯಾವಶೇಷ ಗಳಾದ ಬೂದಿಯ ಮತ್ತುಕಬ್ಬಿಣದ ಕಿಟ್ಟಗಳು, ವಿವಿಧ ರೀತಿಯ ನವಶಿಲಾಯುಗದ ಉಪಕರಣಗಳು ಮತ್ತು ಮಡಕೆ ಚೂರುಗಳುಹಾಗೂ ಅಸ್ಥಿ ಅವಶೇಷಗಳು ಕಂಡು ಬರುತ್ತವೆ. ಅವುಗಳ ವಿವರಣೆಯನ್ನು ಈ ಕೆಳಗೆ ವಿವರಿಸಲಾಗಿದೆ



ಚಿತ್ರ 2. ಬೂದಿಯ ಕಿಟ್ಟಗಳು

**ಸೈದ್ಧಾಂತಿಕ**



**ಚಿತ್ರ 3. ಕಬ್ಬಿಣದ ಕಿಟ್ಟಗಳು**



**ಚಿತ್ರ 5. ಕವಣೆ ಕಲ್ಲುಗಳು**

ಬೂದಿದಿಬ್ಬವು ಕೆಳಭಾಗದಲ್ಲಿ ಕೇವಲ ಬೂದಿಯ ಸ್ತರವನ್ನು ಒಳಗೊಂಡಿದೆ. ಮಧ್ಯದ ಸ್ತರವು ಕಪ್ಪುಮಣ್ಣು ಮಿಶ್ರಿತ ಬೂದಿಯನ್ನು ಹೊಂದಿದೆ.ತೀರಾ ಮೇಲ್ಭಾಗದಲ್ಲಿ ನೈಸರ್ಗಿಕವಾದ ಕೆಂಪು ಮಣ್ಣಿದೆ. ಈ ಕೆಂಪು ಮಣ್ಣು ಬೆಟ್ಟದಿಂದ ಇಳಿದು ಬರುವ ಮಳೆಯ ನೀರಿನೊಂದಿಗೆ ಬಂದು ಬೂದಿ ದಿನ್ನೆಯ ಮೇಲೆ ಸಂಗ್ರಹವಾದ ಮಣ್ಣಿನ ಪದರ.ಈ ಬೂದಿದಿಬ್ಬದ ಮೂರು ಸ್ತರಗಳ ಮಧ್ಯದ ಸ್ತರದಲ್ಲಿ ಬೂದಿಯೊಂದಿಗೆ ಬೂದಿಯ ಕಿಟ್ಟಗಳು (ಚಿತ್ರ 2) ಕಂಡು ಬರುತ್ತವೆ. ಬೂದಿಯು ಪುಡಿರೂಪದಲ್ಲಿದ್ದರೆ ಕಿಟ್ಟಗಳು ಘನೀಕೃತಗೊಂಡಿದ್ದು ನಿರ್ದಿಷ್ಟ ಉಂಡೆಯಾಕಾರದಲ್ಲಿವೆ. ಇವು ತುಂಬಾ ಹಗುರವಾಗಿವೆ. ಅಂದರೆ ಭೌತಿಕಗಾತ್ರಕ್ಕಿಂತಕಡಿಮೆತೂಕವನ್ನು ಹೊಂದಿವೆ. ಇದಲ್ಲದೇ, ಬೂದಿದಿಬ್ಬದಲ್ಲಿ ಕೆಲವು ಕಬ್ಬಿಣದ ಕಿಟ್ಟಗಳು (ಚಿತ್ರ 3) ದೊರೆಯುತ್ತವೆ. ಈ ಕಿಟ್ಟಗಳು ಪೂರ್ಣ ಸುಟ್ಟಂತೆತೋರುವುದಿಲ್ಲ. ಅವು ಘನರೂಪಕ್ಕಿಂತ ಪುಡಿ ಪುಡಿಯಾದ ರೂಪದಲ್ಲೆ ಹೆಚ್ಚಾಗಿ ಕಂಡುಬರುತ್ತಿದ್ದು,ತೂಕದಲ್ಲಿ ಭಾರವಾಗಿವೆ.

ಬೂದಿದಿಬ್ಬದ ಮೇಲ್ಭಾಗ ಹಾಗೂ ಒಳಭಾಗದಲ್ಲಿ ಚಿಕ್ಕ ಹಾಗೂ ಮಧ್ಯಮ ಗಾತ್ರದಕಪ್ಪುಕಲ್ಲಿನ ಕೊಡಲಿಗಳು (ಚಿತ್ರ 4) ಕಂಡು ಬಂದಿವೆ. ಅವುಗಳಲ್ಲಿ ತುಂಡಾದ ಹಾಗೂ ಅಪೂರ್ಣವಾಗಿ ಸಿದ್ಧವಾದ ಕೊಡಲಿಗಳೇ ಅಧಿಕ.ಇದಲ್ಲದೇ, ಬೂದಿದಿಬ್ಬದ ಪ್ರದೇಶದಲ್ಲಿ ಅಲ್ಲಲ್ಲಿ ದುಂಡಾದ ಕವಣೆ ಕಲ್ಲುಗಳು ಮತ್ತು ಒಡೆದು ಹೋಗಿರುವಶಿಲೋಪಕರಣಗಳು (ಚಿತ್ರ 5)ಸಹ ಕಂಡು ಬಂದಿವೆ.

ಬೂದಿ ದಿಬ್ಬದಲ್ಲಿ ವಿವಿಧ ರೀತಿಯ ಮಡಕೆ ಚೂರುಗಳು ಕಂಡು ಬಂದಿವೆ. ದಪ್ಪಗಾತ್ರದ ಕೆಂಪು ತಟ್ಟೆಗಳು (ಚಿತ್ರ 6) ಮತ್ತು ಮಡಿಕೆ (ಚಿತ್ರ 7) ಹಾಗೂ ಕಪ್ಪು–ಕೆಂಪು ದ್ವಿವರ್ಣ ಮಡಕೆಗಳು ಪ್ರಾಯಶಃ ಬೋಳು ಅಂಚಿನ ಬಟ್ಟಲು ಗಿಂಡಿ, ನಳಿಕೆಯುಕ್ತ ಹೂಜಿ ಅಥವಾ ಬಟ್ಟಲು ಮುಂತಾದವುಗಳ ಭಾಗಗಳಿರಬಹುದು.

ಬೂದಿದಿಬ್ಬದಲ್ಲಿಯ ಒಳಸ್ತರಗಳಲ್ಲಿ ಕೆಲವು ಅಸ್ಥಿ ಅವಶೇಷಗಳು ಕಂಡು ಬಂದಿವೆ. ಅವುಗಳು ಬಹುಷಃ ಪಶುವಿನವುಗಳಾಗಿವೆ. ಇವುಗಳಲ್ಲಿ ಕಾಲಿನ ಮಂಡಿಯ ಭಾಗ ಮತ್ತು ಇತರೆ ಎಲುಬುಗಳಿವೆ. ಇವುಗಳಲ್ಲಿಯೂ ವಿವಿಧ ಗಾತ್ರದ ಆಸ್ಥಿ ಅವಶೇಷಗಳಿವೆ.

## ಸಮಾರೋಪ

ಈ ಬೂದಿದಿಬ್ಬಗಳ ನಿರ್ಮಾಣ ಮತ್ತು ಅವುಗಳ ಉದ್ದೇಶಗಳ ಬಗ್ಗೆ ಅನೇಕ ಭಿನ್ನಾಭಿಪ್ರಾಯಗಳಿವೆ.ಈ ಬೂದಿದಿಬ್ಬಗಳು ನವಶಿಲಾಯುಗಕ್ಕೆ ಸೇರಿದ್ದವೆಂದು ಮತ್ತು ಸಗಣಿಯನ್ನು ದೊಡ್ಡ ಪ್ರಮಾಣದಲ್ಲಿ ಸುಡುವದರಿಂದ ಇವುಗಳು ನಿರ್ಮಾಣಗಳಾಗುತ್ತವೆಂದು ಪ್ರಪ್ರಥಮವಾಗಿ ಪ್ರತಿಪಾದಿಸಿದವರು ರಾಬರ್ಟ್ ಬ್ರೂಸ್‌ಫುಟ್. ಬ್ರೂಸ್‌ಫುಟ್‌ರು ಕೆಲವು ಬೂದಿದಿಬ್ಬಗಳನ್ನು, ವಿಶೇಷವಾಗಿ ಕುಡತಿನಿಯ ಬೂದಿದಿಬ್ಬ ಮತ್ತು ಅವುಗಳ ಸುತ್ತಮುತ್ತಲಿನ ನೂತನ ಶಿಲಾಯುಗ ಸಂಸ್ಕೃತಿಗಳ ಅವಶೇಷಗಳನ್ನು ಪರೀಶಿಲಿಸಿದಿರು. ಇದೇ ವೇಳೆ, ಈ ರೀತಿಯ ದಿಬ್ಬಗಳು ಆಫ್ರಿಕಾ ದೇಶದ ಮುಕುಂಗಾವೆಂಬ ಹಳ್ಳಿಯಲ್ಲಿ ಇರುವುದಾಗಿ ಹೆನ್ರಿ ಸ್ಟೆನ್ಲೆರವರ ಇನ್ ಡಾರ್ಕೆಸ್ಟ್ ಆಫ್ರಿಕಾ ಗ್ರಂಥದ (ಎರಡನೇಯ ಸಂಪುಟ) ಮೂಲಕ ತಿಳಿಯುತ್ತಾರೆ.ಈ ಪ್ರದೇಶದ ಹಳ್ಳಿಗಳಲ್ಲಿ ಪಶುಗಳ ಸಗಣಿಯನ್ನು ಕಲೆಹಾಕಿ ಅವುಗಳ ಸುತ್ತ ಝುರಿಬಾವೆಂಬ ಮುಳ್ಳಿನ ಬೇಲಿ ಹಾಕಿರುತ್ತಾರೆ. ಈ ಸಗಣಿಯ ಗುಡ್ಡೆಯನ್ನು ಒಣಗಿದ



**ಚಿತ್ರ 4. ಕೊಡಲಿಗಳು**



**ಚಿತ್ರ 6. ಕೆಂಪು ವರ್ಣದ ತಟ್ಟೆ**

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712



ಚಿತ್ರ 7. ಕೆಂಪು ವರ್ಣದ ಮಡಿಕೆ

ಮೇಲೆ ಸುಡುತ್ತಾರೆ. ಆದ್ದರಿಂದ, ಈ ದಿಬ್ಬಗಳು ಸಗಣಿ ಸುಡುವುದರಿಂದ ನಿರ್ಮಾಣವಾಗುತ್ತವೆಂದು ಮತ್ತು ಅವುಗಳು ನೂತನ ಶಿಲಾಯುಗದ ಕಾಲದ್ದವುಗಳೆಂದು ಅಭಿಪ್ರಾಯಪಡುತ್ತಾರೆ.[3]

ಆಲ್ಚಿನ್ 1952ರಲ್ಲಿ ಪಿಕ್ಲಿಹಾಳಮತ್ತು 1957ರಲ್ಲಿ ಉತ್ತನೂರಗಳಲ್ಲಿಯ ದಿಬ್ಬಗಳ ಉತ್ಖನನ ಮಾಡಿದ್ದಾರೆ. ಅಲ್ಚಿನ್‌ರವರ ಪ್ರಕಾರ ಈ ಬೂದಿದಿನ್ನೆಗಳ ನೆಲೆಗಳು ಮೂಲತಃ ದನಕರುಗಳ ಕೊಟ್ಟಿಗೆ/ಕೊಂಡವಾಡೆಗಳು. ಇಲ್ಲಿ ಕ್ರಮೇಣ ದೊಡ್ಡ ಪ್ರಮಾಣದಲ್ಲಿ ಸಂಗ್ರಹವಾದ ಸಗಣಿಯಿಂದ ನಿರ್ಮಾಣವಾದವುಗಳಾಗಿವೆ.[4] ಮುಜುಮದಾರ ಮತ್ತು ರಾಜಗುರುರವರು 1964–65ರಲ್ಲಿ ಬಳ್ಳಾರಿ ಜಿಲ್ಲೆಯ ಸಂಗನಕಲ್ಲಿನ ಪಕ್ಕದಲ್ಲಿರುವ ಕುಪ್ಪಗಲ್ಲಿನ ಬೂದಿದಿಬ್ಬದ ಉತ್ಖನನ ಮಾಡಿಬೂದಿದಿಬ್ಬಗಳು ಮೂಲತಃ ಕೊಂಡವಾಡೆಗಳಲ್ಲೆಂದು ಹೇಳಿದ್ದಾರೆ. ಕೊಂಡೆವಾಡೆಗಳಿಂದ ಸಗಣಿಯನ್ನು ಸಂಗ್ರಹಿಸಿ ಬೇರೆಡೆಯಲ್ಲಿ ಒಟ್ಟುತ್ತಿದ್ದ ನೆಲೆಗಳೆಂದು ಸಹ ಅಭಿಪ್ರಾಯ ಪಟ್ಟಿದ್ದಾರೆ.[5] 1966–67ರಲ್ಲಿ ಅನಂತಪುರ ಜಿಲ್ಲೆಯ ಪಾಳ್ವಾಯದಲ್ಲಿ ಉತ್ಖನನ ಮಾಡಿರುವ ರಾಮಿರೆಡ್ಡಿಯವರ ಪ್ರಕಾರ ಈ ಬೂದಿಗುಡ್ಡೆಗಳು ಮೂಲದಲ್ಲಿ ಕಬ್ಬಿಣ ಅದಿರನ್ನು ಸಂಗ್ರಹಿಸಿ ಲೋಹ ಮಾಡುವುದಕ್ಕೋಸ್ಕರ ಸುಟ್ಟಿದ್ದರಿಂದ ಉಂಟಾದ ಬೂದಿಗುಡ್ಡೆಗಳಾಗಿವೆ.[6] 1966–67ರಲ್ಲಿ ಪದ್ದಯ್ಯರವರು ಕಲಬುರ್ಗಿ ಜಿಲ್ಲೆಯ ಕೊಡೆಕಲ್ಲಿನಲ್ಲಿ ಬೂದಿದಿಬ್ಬದ ಉತ್ಖನನ ಮಾಡಿದ್ದಾರೆ.ಅವರ ಪ್ರಕಾರಕೊಂಡವಾಡೆ ಮತ್ತು ಸಗಣಿಒಟ್ಟಿದ ನೆಲೆಗಳು ಬೇರೆ ಬೇರೆಯಾಗಿದ್ದರೂ ಒಂದಕ್ಕೊಂದು ಹತ್ತಿರದಲ್ಲಿಯೇಇದ್ದವು.ಆಗಿನ ಕಾಲದಲ್ಲಿ ಕೃಷಿ ನೆಲಕ್ಕೆ ಸಗಣಿ ಗೊಬ್ಬರವನ್ನ ಉಪಯೋಗಿಸುತ್ತಿದ್ದುದ್ದಕ್ಕೆ ಪುರಾವೆಗಳಿಲ್ಲ. ಒಂದು ವೇಳೆ ಉಪಯೋಗಿಸಿದ್ದರೂ ಅದರ ಪ್ರಮಾಣ ಕಡಿಮೆ. ಆ ಜನರು ತಕ್ಕಮಟ್ಟಿಗೆ ದೊಡ್ಡ ಪ್ರಮಾಣದಲ್ಲಿ ದನಕರುಗಳನ್ನು ಸಾಕುತ್ತಿದ್ದದರಿಂದ ಸಗಣಿಯ ಪ್ರಮಾಣವು ಹೆಚ್ಚಾಗಿರುತ್ತಿತ್ತು. ಆದ್ದರಿಂದ ಉಪಯೋಗವಾಗದ ಸಗಣಿಯನ್ನು ಈ ರೀತಿ ಆಗಾಗ್ಗೆ ಸುಡಲಾಗುತ್ತಿತ್ತು. ಇದರ ಬೆಂಕಿಯು ದಿನಗಟ್ಟಲೆ ಇದ್ದುದರಿಂದ ಸಾಕಿದ ಪ್ರಾಣಿಗಳನ್ನು ಹಾಗೂ ಮಾನವರನ್ನು ಹಿಡಿಯಲು ಬರುತ್ತಿದ್ದ ಕಾಡುಪ್ರಾಣಿಗಳನ್ನು ದೂರವಿಡಲು ಇದೊಂದು ಕ್ರಮವಾಗಿತ್ತೆಂದು ಅವರು ಅಭಿಪ್ರಾಯ ಪಡುತ್ತಾರೆ.[7] ಸುಂದರ ಅವರ ಪ್ರಕಾರ ಬಹಳ ಹಿಂದಿನ ಕಾಲದಲ್ಲಿ ಸುಡುವ ವಿಧಾನದಿಂದ ಶವಸಂಸ್ಕಾರ ಮಾಡುತ್ತಿದ್ದ ಜನವರ್ಗಗಳಲ್ಲಿ ಪ್ರಸಿದ್ಧ ಶೂರರ ನೆನಪಿನಲ್ಲಿ ಆಗಾಗ್ಗೆ ಇಂಥ ದೊಡ್ಡ ಪ್ರಮಾಣದ ಸಗಣಿಯನ್ನು ಸುಡುವ ಆಚರಣೆ ಇದ್ದಿರಬೇಕು. ಈ ದಿಬ್ಬಗಳು ದೊಡ್ಡ ಪ್ರಮಾಣದ ಸ್ಮಾರಕ ದಹನಗಳಿಂದ ಉಂಟಾಗಿವೆ. ಇವು ಸಾವಳ್ದ ಇಲ್ಲವೆ ಬೃಹತ್ ಶಿಲಾ ಸಂಸ್ಕೃತಿ ಜನರ ಲೋಹ ತಂತ್ರಗಾರಿಕೆ ಸಂಬಂಧಿಸಿರಬಹುದೆಂಬ ಅಭಿಪ್ರಾಯಪಟ್ಟಿದ್ದಾರೆ.[8]

ವಿಠಲಾಪುರದ ಬೂದಿದಿಬ್ಬವು ಕೂಡ ಈ ಮೇಲಿನ ಮಾದರಿಯಲ್ಲಿಯೇ ನಿರ್ಮಾಣಗೊಂಡಿದೆ. ಇಲ್ಲಿದೊರೆತ ಸ್ಮಾರಕಗಳು ಕೂಡ ನವಶಿಲಾಯುಗದ ಲಕ್ಷಣಗಳನ್ನು ಒಳಗೊಂಡವುಗಳಾಗಿವೆ. ಈ ಬೂದಿದಿಬ್ಬವು ಕೃಷಿಭೂಮಿಯಾಗಿ ಬಳಕೆಯಾಗುತ್ತಿರುವುದರಿಂದ ಇಲ್ಲಿಯ ಅನೇಕ ಅವಶೇಷಗಳು ನಾಶವಾಗಿವೆ. ನವಶಿಲಾಯುಗ ಜನಜೀವನದ ಅವಶೇಷಗಳನ್ನು ಹೊಂದಿರುವ ಈ ಪ್ರಾಗಿತಿಹಾಸ ನೆಲೆಯನ್ನು ಇನ್ನಷ್ಟುಅಧ್ಯಯನಕ್ಕೆ ಒಳಪಡಿಸಬೇಕಾದ ಅಗತ್ಯವಿದೆ.

**ಅಡಿ ಟಿಪ್ಪಣಿಗಳು**

1. ಹಿರಿಯಣ್ಣ, ಅಂಬಳಿಕೆ (ಪ್ರ.ಸ.) 2009:ಕನ್ನಡ ವಿಷಯ ವಿಶ್ವಕೋಶ : ಇತಿಹಾಸ ಮತ್ತು ಪುರಾತತ್ವ, ಮೈಸೂರು: ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ: 523.
2. ಕ್ಷೇತ್ರಕಾರ್ಯದಿಂದ ಮಾಹಿತಿ ಸಂಗ್ರಹ.
3. ಫುಟ್, ರಾಬರ್ಟ್ ಬ್ರೂಸ್: 1979: ಪ್ರಿಹಿಸ್ಟಾರಿಕ್ ಆಂಡ್ ಪ್ರೊಟೊಹಿಸ್ಟಾರಿಕ್ ಆಂಟಿಕುಟಿಸ್ ಆಫ್ ಇಂಡಿಯಾ. (1916 ಮರು ಮುದ್ರಣ). ದೆಹಲಿ: ಲೀಲಾದೇವಿ ಪಬ್ಲಿಕೇಷನ್ಸ್: 94.
4. ಹಿರಿಯಣ್ಣ, ಅಂಬಳಿಕೆ (ಪ್ರ.ಸ.) 2009 ಪೂರ್ವೋಕ್ತ: 668.
5. ಇದೇ. 668.
6. ಇದೇ. 668.
7. ಇದೇ. 668.
8. ಇದೇ. 668.

ವಿದ್ಯಾನಿಧಿ ಪ್ರಕಾಶನ® ಶ್ರೀ ಶಿವಕುಮಾರ ಏಜನ್ಸಿ®
ಶೈಕ್ಷಣಿಕ ಪುಸ್ತಕಗಳ ಪ್ರಕಾಶಕರು ಮತ್ತು ಮಾರಾಟಗಾರರು
ಸ್ಟೇಶನ್ ರೋಡ ಮತ್ತು 'ನನಸು' ಜೆ. ಟಿ. ಮಠ ರೋಡ, ಗದಗ-582 101
ದೂರವಾಣಿ : 08372–237527, 277527
e-mail : vidyanidhiprakashana@gmail.com. www. vidyanidhionline.com


ಸೈದ್ಧಾಂತಿಕ

# ಮಹಾರಾತ್ರಿ : ಬುದ್ಧನೆಂಬ ಮನುಕುಲದ ಮಹಾಬೆಳಕು

✍ **ಮಂಜುನಾಥ ಪಾಟೀಲ**,ಸಂಶೋಧನ ವಿದ್ಯಾರ್ಥಿ, ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನ ಸಂಸ್ಥೆ ರಾಣಿ ಚನ್ನಮ್ಮ ವಿಶ್ವವಿದ್ಯಾನಿಲಯ, ಬೆಳಗಾವಿ.

**ಭಾ**ರತೀಯ ಸಮಾಜ ಹಲವಾರು ಜಾತಿ, ಧರ್ಮಗಳಿಂದ ಕೂಡಿದ ಸಂಕೀರ್ಣ ಸಮಾಜವಾಗಿದ್ದರಿಂದ, ಸಮಾಜ ಸುಧಾರಣೆಯ ಕೆಲಸ ಹಿಂದಿನಿಂದಲೂ ನಡೆಯುತ್ತ ಬಂದಿದೆಯಾದರೂ ಒಂದು ತಾರ್ಕಿಕ ಮಟ್ಟದ ಸುಧಾರಣೆಯನ್ನು ಸಮಾಜ ಕಂಡಿಲ್ಲ. ಭಾರತೀಯ ಸಮಾಜ ಸುಧಾರಣೆಯಲ್ಲಿ ಗುರುತಿಸಿಕೊಂಡವರಲ್ಲಿ ಬುದ್ಧನಿಗೆ ಮೊದಲ ಸ್ಥಾನ; ನಂತರದಲ್ಲಿ ಬಸವಣ್ಣ, ನಾರಾಯಣಗುರು, ಪೆರಿಯಾರ, ಫುಲೆ ದಂಪತಿಗಳು, ಅಂಬೇಡ್ಕರ್ ಇವರನ್ನೆಲ್ಲ ಗುರುತಿಸುವುದುಂಟು. ಸಮಾಜದ ಪ್ರತಿಯೊಬ್ಬ ಪ್ರಜೆಗೂ ತಥಾಗತ ಗೌತಮ ಬುದ್ಧನ ಜೀವನ, ಸಾಧನೆ, ಸಂದೇಶಗಳು, ತತ್ವಗಳು ಪ್ರೇರಣೆಯನ್ನು ನೀಡುತ್ತವೆ. ಬುದ್ಧನನ್ನು 'ಏಷಿಯಾದ ಬೆಳಕು' ಎಂದು ವಿಶ್ವದಾದ್ಯಂತ ಕರೆಯಲಾಗುತ್ತದೆ. ಕುವೆಂಪು ಹೇಳಿದ ಮೊದಲ 'ವಿಶ್ವಮಾನವ' ಬುದ್ಧನೆಂದರೆ ತಪ್ಪಾಗಲಾರದು.

ಭಾರತದ ಮಹಾಪುರುಷ, ಮನುಕುಲದ ಬೆಳಕಾದ ಬುದ್ಧನು ಸತ್ಯ, ಶಾಂತಿ, ಅಹಿಂಸೆಯ ಸಾಕಾರಮೂರ್ತಿಯಾದವನು. ಜಗತ್ತನ್ನು ಅಂಧಕಾರ ದಿಂದ, ಮೌಢ್ಯದಿಂದ ಹೊರತರಲು ಪ್ರಯತ್ನಿಸಿ ಜಗತ್ತಿಗೆ ಹೊಸದಾದ ದಾರಿಯನ್ನು ಕೊಟ್ಟವರು. ಬುದ್ಧನನ್ನು ಕುರಿತು ಕನ್ನಡ ಸಾಹಿತ್ಯದಲ್ಲಿ ಸಾಕಷ್ಟು ನಾಟಕಗಳು, ಕವಿತೆಗಳು, ಲೇಖನಗಳು ಬಂದಿವೆ. ಪ್ರಭುಶಂಕರರ 'ಸುಜಾತ', 'ಆಮ್ರಪಾಲಿ', 'ಅಂಗುಲಿಮಾಲ', 'ಗಾಳಿಯೆಂಬ ಕುದುರೆಯನೇರಿ', ಮಾಸ್ತಿಯವರ 'ಯಶೋಧರೆ', ಮನಜ ಅವರ 'ಜಲ', ಕುವೆಂಪುರ 'ಮಹಾರಾತ್ರಿ', ಬಿ.ಪುಟ್ಟಸ್ವಾಮಯ್ಯರ 'ಗೌತಮ ಬುದ್ಧ', ಕಾರಂತರ 'ಕಿಸಾಗೋತಮಿ', ಈಶ್ವರ ಇಂಗನರ 'ಬುದ್ಧಾಂಕುರ', 'ಜಲ', 'ಧಮ್ಮಚಕ್ರ', 'ಉಪಗುಪ್ತ', 'ಅಹಿಂಸಕ', 'ಕೃಷಾಗೌತಮಿ', ಪ್ರಮುಖ ನಾಟಕಗಳಾದರೆ ಗೋವಿಂದ ಪೈಯವರ 'ವೈಶಾಖ', ಬೇಂದ್ರೆ, ಬರಗೂರು ರಾಮಚಂದ್ರಪ್ಪ ಮತ್ತು ಪುತಿನರವರ 'ಬುದ್ಧ', ಸತ್ಯಾನಂದ ಪಾತ್ರೋಟರ 'ಬುದ್ಧನಿಗೊಂದಿಷ್ಟು ದಾರಿಬಿಡಿ' ಚಂಪಾರವರ 'ಬುದ್ಧನೂ ನಾನೂ', ಕವಿತೆಗಳು ಬುದ್ಧನ ಕುರಿತಾದ ಪ್ರಮುಖ ಬರಹಗಳು. ಹೀಗೆ ಬಂದ ಪ್ರಮುಖ ಬರಹಗಳಲ್ಲಿ ಕುವೆಂಪುರವರ ಮಹಾರಾತ್ರಿ ನಾಟಕವೂ ಒಂದು. ಮಹಾರಾತ್ರಿ ನಾಟಕದ ವಸ್ತು, ವಿಷಯ, ಶೈಲಿ, ತಂತ್ರ ಹಾಗೂ ಪಾತ್ರಗಳನ್ನು ಕುರಿತು ಪ್ರಸ್ತುತ ಲೇಖನದಲ್ಲಿ ಚರ್ಚಿಸಲಾಗಿದೆ.

1931ರಲ್ಲಿ ರಚನೆಯಾದ ಮಹಾರಾತ್ರಿ ನಾಟಕ ಕುವೆಂಪುರವರ ಸೃಜನಶೀಲ ಪ್ರತಿಭೆಗೆ ಹಿಡಿದ ಕನ್ನಡಿಯಂತಿದೆ. ಬುದ್ಧನ ಬದುಕಿನಲ್ಲಿ ನಡೆದ ಅನೇಕ ಘಟನೆಗಳನ್ನಾಧರಿಸಿ ಕೃತಿಗಳು ರಚನೆಯಾದಂತೆ ಮಹಾರಾತ್ರಿ ಕೂಡ ಬುದ್ಧನ ಒಂದು ಘಟನೆಯನ್ನಾಧರಿಸಿದ ನಾಟಕ. ಸಿದ್ಧಾರ್ಥ ಬುದ್ಧನಾಗುವ ಮತ್ತು ಮನಃಪರಿವರ್ತನೆಯ ಕಥನವನ್ನು ಒಳಗೊಂಡಿದೆ. ಬುದ್ಧನು ಐತಿಹಾಸಿಕ ವ್ಯಕ್ತಿಯಾಗಿದ್ದು "ಕಪಿಲವಸ್ತುವಿನ ಲುಂಬಿನಿ ಎಂಬಲ್ಲಿ ಕ್ರಿ.ಪೂ 566 ರಲ್ಲಿ ಜನಿಸಿದನು"[1] (ಪುಟ–31, ಬುದ್ಧ–ಬಸವಣ್ಣನವರ ಸಮಾಜೋ–ಧಾರ್ಮಿಕ ವಿಚಾರಗಳು–2012). ತಂದೆ ಶುದ್ಧೋದನ ತಾಯಿ ಮಾಯಾದೇವಿ. ಸಿದ್ಧಾರ್ಥನ ಜನನ ಸಂದರ್ಭದಲ್ಲಿ ತಾಯಿ ತೀರಿಕೊಂಡಿದ್ದರಿಂದ ಚಿಕ್ಕಮ್ಮ ಪ್ರಜಾಪತಿ ಗೌತಮಿ ಸಾಕಿದಳು; ಆದ್ದರಿಂದ ಇತನಿಗೆ ಗೌತಮ ಎಂಬ ಹೆಸರು ಬಂದಿದೆ. ಈ ಐತಿಹಾಸಿಕ ಹಿನ್ನಲೆಯುಳ್ಳ ವ್ಯಕ್ತಿಗೆ ಕುವೆಂಪು ಮಹಾರಾತ್ರಿಯಲ್ಲಿ ಪೌರಾಣಿಕ ರೂಪವನ್ನು ಕೊಟ್ಟಿದ್ದಾರೆ. ಹೀಗೆ ಬಹುತೇಕ ನಾಟಕಗಳಲ್ಲಿ ಸಾಂಪ್ರದಾಯಿಕ ಬುದ್ಧ ಚರಿತೆಯನ್ನು ಹೇಳುವ ಪ್ರಯತ್ನ ಮಾಡಲಾಗಿ ವೈಚಾರಿಕ ನೆಲೆಗಟ್ಟನ್ನು ಮರೆಮಾಚಲಾಗಿದೆ. ಹೀಗಿರುವಾಗಲೂ ಕುವೆಂಪು ಬುದ್ಧನ ಕುರಿತು ಬಂದ ಸಾಂಪ್ರದಾಯಿಕ ದೃಷ್ಟಿಕೋನವನ್ನೇ ಅನುಸರಿಸಿರುವುದು ಆಶ್ಚರ್ಯ ಮತ್ತು ಸೋಜಿಗ. ನಾವು ಪುರಾಣ ಮತ್ತು ಇತಿಹಾಸವನ್ನು ಗಮನಿಸಿದಾಗ ಇತಿಹಾಸ ಸತ್ಯಕ್ಕೆ ಸಾಕ್ಷಿಯಾಗಿ ವಾಸ್ತವಾಂಶಗಳನ್ನು ಬಿಚ್ಚಿಡುತ್ತದೆ; ಅಂದರೆ ಇತಿಹಾಸ "ವಸ್ತುನಿಷ್ಠ ವಿಚಾರಕ್ಕೆ ನೆಲೆಗಟ್ಟನ್ನು ಒದಗಿಸುತ್ತದೆ"[2] (ಪುಟ–93, ಕುವೆಂಪು ಅವರ ನಾಟಕಗಳು ಒಂದು ಅಧ್ಯಯನ–2013) ಎಂಬ ಮಳಲಿ ವಸಂತಕುಮಾರರ ಮಾತನ್ನು ಗಮನಿಸಬಹುದು. ಹೀಗಿದ್ದರೂ ಸಾಹಿತ್ಯ ಪುರಾಣಕ್ಕೆ ಆದ್ಯತೆ ಕೊಟ್ಟಷ್ಟು ಇತಿಹಾಸದ ವಿಚಾರಗಳಿಗೆ ಕೊಡಲಿಲ್ಲ. "ಮಹಾರಾತ್ರಿ ಅಪ್ಪಟ ಚಾರಿತ್ರಿಕ ವಸ್ತುವಾದರೂ ಸಹ ಕುವೆಂಪು ಅದನ್ನು ಆಧ್ಯಾತ್ಮ ಪ್ರಧಾನವಾಗಿ ಚಿತ್ರಿಸಿದ್ದಾರೆ. ಬುದ್ಧನ ಐತಿಹಾಸಿಕ ಸಾಧನೆಗಿಂತ ಆಧ್ಯಾತ್ಮಿಕ ಸಾಧನೆಯೇ ಹೆಚ್ಚು ವಿಜೃಂಭಣೆಗೊಂಡಿದೆ; ಬುದ್ಧನ ಮಟ್ಟಿಗೆ ಅದು ನ್ಯಾಯವೂ ಆಗಿದೆ"[3] (ಪುಟ–93, ಕುವೆಂಪು ಅವರ ನಾಟಕಗಳ ಒಂದು ಅಧ್ಯಯನ–2013). ಪೌರಾಣಿಕ ಪಾತ್ರಗಳಾದ ಕಿನ್ನರ, ಯಕ್ಷ, ಗಂಧರ್ವ ಕುವೆಂಪುರವರ ಸ್ವಯಂ ಸೃಷ್ಠಿ. ಈ ಪಾತ್ರಗಳ ಮೂಲಕ ಬುದ್ಧನನ್ನು ಪೌರಾಣಿಕಗೊಳಿಸಿರುವುದು ನಾಟಕದ ಪ್ರಾರಂಭದಲ್ಲಿ ನೋಡುತ್ತೇವೆ.

> **"ಕಿನ್ನರ–ಇದು ಮಹಾರಾತ್ರಿ; ಸಿದ್ಧಾರ್ಥ ಬುದ್ಧನಾ**
> **ಗುವ ರಾತ್ರಿ; ಸಗ್ಗದೊಲವಿಳೆಗಿಳಿವ ರಾತ್ರಿ!**
> **ಯಕ್ಷ–ಜೀವಜ್ಯೋತಿಯದೊಂದು ಧರೆಯ ಮೇಲೈತಂದು"[4]**
> **(ಪುಟ–1, ಮಾಹಾರಾತ್ರಿ 2014)**

ಹೀಗೆ ಪೌರಾಣಿಕಗೊಳಿಸುದಕ್ಕೆ ಕಾರಣವೂ ಇದ್ದಿರಬಹುದು. ನಮ್ಮ ಭಾರತೀಯ ಪರಂಪರೆಯ ಮೂಲನಿವಾಸಿಗಳ ನಾಯಕ ಶಿವನ ರೂಪವನ್ನು ಇಲ್ಲಿ ಬುದ್ಧನಿಗೆ ನೀಡಿದಂತೆ ಕಾಣಿಸುತ್ತದೆ. ನಾಟಕದ ಕೊನೆಯಲ್ಲಿ ಬಿಕ್ಷುಕ ಸಿದ್ಧಾರ್ಥನನ್ನು ನೋಡಿ ನೀನು ಸಾಕ್ಷಾತ್ ಶಿವನ ಹಾಗೆಯೇ ಕಾಣುತ್ತಿರುವೆ ಎಂಬ ಮಾತುಗಳಲ್ಲಿಯೂ ಇದು ಸಾಬೀತಾಗುತ್ತದೆ. ಇದನ್ನೇ 'ಕಾಳೇಗೌಡ ನಾಗವಾರ'ರ ಮಾತುಗಳಲ್ಲಿ ನೋಡಬಹುದು. "ಭಾರತೀಯ ಪರಂಪರೆಯಲ್ಲಿ ಕಂಡುಬರುವ ಅತ್ಯಂತ ಹೆಚ್ಚಿನ ಜೀವಪರ ಕಾಳಜಿಗಳ ಸಾಕ್ಷಾತ್ ಪ್ರತೀಕವಾಗಿ ಕಂಗೊಳಿಸುವ ಪುರಾಣಲೋಕದ ಶಿವ ಮತ್ತು ಭಾರತೀಯ ಇತಿಹಾಸದ ತುಂಬ ಮಹತ್ವಪೂರ್ಣ ಭಾಗವಾಗಿರುವ ಬುದ್ಧದೇವನ ಕಾರುಣ್ಯಮಯ ಬದುಕಿನ ಸಾಧನೆಗಳಿಗೆ ಸಾಟಿಯಾದದ್ದು"[5] (ಪುಟ–15, ಸೃಜನಶೀಲ ವೈಚಾರಿಕತೆ–2008). ಹೀಗೆ ಪೌರಾಣಿಕಗೊಳಿಸುವ ತಂತ್ರವನ್ನು ಕುವೆಂಪು ತಮ್ಮ 'ಯಮನ ಸೋಲು', ನಾಟಕದಲ್ಲೂ ಅನುರಿಸಿರುವುದನ್ನು ನೋಡುತ್ತೇವೆ; ಇದು ಅವರ ಶೈಲಿ ಅಷ್ಟೇ ಅಲ್ಲದೇ ಮಹಾರಾತ್ರಿ ನಾಟಕದ ವಸ್ತು ಸಿದ್ಧಾರ್ಥ ಬುದ್ಧನಾಗುವ ಕತೆಯಾದರೂ ಕುವೆಂಪು ನಾಟಕದ ಪ್ರಾರಂಭದಲ್ಲೇ ಇಡೀ ನಾಟಕದ ತಿರುಳನ್ನು ಯಕ್ಷ ಮತ್ತು ಕಿನ್ನರ ಸಂಭಾಷಣೆಯಲ್ಲಿ ವ್ಯಕ್ತಮಾಡಿರುವುದು ಓದುಗರಲ್ಲಿ ಆಸಕ್ತಿಯನ್ನು ಕುಂದಿಸುವಂತಿದೆ. ಇವೇ ಮಾತುಗಳನ್ನು ವಸಂತಕುಮಾರರು ಹೇಳಿರುವುದನ್ನು ಗಮನಿಸಬಹುದು'. "ಮುಂದಿನದನ್ನು ಮೊದಲೇ ತಿಳಿಸಿ ನಾಟಕದ ಕುತೂಹಲವನ್ನು ಅಳಿಸಿಬಿಡುವುದರಿಂದ ಇದು ಅನಗತ್ಯ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಎನಿಸುತ್ತದೆ"[6] (ಪುಟ–95, ಕು.ಅ.ನಾ.ಒ.ಅಧ್ಯಯನ–2013). ಹೀಗಿದ್ದರೂ ಲೇಖಕರು ನಾಟಕವನ್ನು ಕಟ್ಟಿಕೊಡುವ ರೀತಿ ಅದ್ಭುತವಾಗಿದೆ.

ಕಿನ್ನರ, ಯಕ್ಷ, ಗಂಧರ್ವರ ಸಂಭಾಷಣೆಯಿಂದ ನಾಟಕ ಪ್ರಾರಂಭವಾಗುತ್ತದೆ. ಸಿದ್ಧಾರ್ಥನು ಬುದ್ಧನಾಗಲು ಹೊರಟ್ಟಿದ್ದಾನೆ; ಅವನಿಗೆ ಮಂಗಳವಾಗಲಿ ಎಂದೆನ್ನುತ ಸಿದ್ಧಾರ್ಥನಿಗೆ ಮುಂದೆ ಬರುವ ಕಷ್ಟಗಳನ್ನು ಪರಿಹರಿಸಲು ಹೊರಡುತ್ತಾರೆ. ಆ ದಿನ ಸಿದ್ಧಾರ್ಥ ಎಲ್ಲವನ್ನೂ ಬಿಟ್ಟು ಹೊರಡಬೇಕೆಂದು ಮನಸಿನಲ್ಲಿ ಆಲೋಚನೆ ಮಾಡುತ್ತಿರುವಾಗಲೆ ಮಗುವಿನ ಜನನದ ವಾರ್ತೆ ತಿಳಿಯಿತು. ಆಗ "ಮತ್ತೊಂದು ಪಾಶ. ಕಬ್ಬಿಣದ ಸರಪಣಿಯ ಬಂಧನ"[7](ಪುಟ–1, ಮಹಾರಾತ್ರಿ–2014) ಎಂದುಕೊಳ್ಳುತ್ತಾನೆ. ಈ ಬಂಧನಗಳನ್ನು ದಾಟಿ ಸಂಬಂಧಗಳನ್ನು ಕಳೆದುಕೊಳ್ಳಬೇಕೆಂದು ನಿರ್ಧಾರ ಮಾಡಿ ಹೊರಡಲು ಸಿದ್ಧನಾಗುತ್ತಿರಲು ಸಾರಥಿಯಾದ ಚನ್ನನ ಹತ್ತಿರ ಸಹಾಯ ಕೇಳುವನು. ಚನ್ನನಿಗೆ ಆಶ್ಚರ್ಯವಾಗಿ ಎಲ್ಲಿಗೆ, ಎಷ್ಟು ದಿನ ಎಂದೆಲ್ಲ ವಿಚಾರಿಸಿದರೂ ಸಿದ್ಧಾರ್ಥನ ಉತ್ತರ ಗೊತ್ತಿಲ್ಲ ಎಂಬುದಾಗಿತ್ತು. ಚನ್ನ ಸಹಾಯ ಮಾಡಲು ಒಪ್ಪಿಕೊಂಡ. ಸಿದ್ಧಾರ್ಥನಿಗೆ ಹೊರಡುವ ರಾತ್ರಿ, ಸಂಬಂಧಗಳನ್ನು ಬಿಡಲು ಹೊರಟವನಿಗೆ ರಾಹುಲ, ಯಶೋಧರೆ ನೆನಪಾಗಿ ಕತ್ತಲಲ್ಲಿ ಅವರನ್ನು ಹುಡುಕುತ್ತಾನೆ. ಇಬ್ಬರು ಮಲಗಿದ್ದಾರೆ; ಅವರಿಗೆ ಸಾಂತ್ವನದ ಮಾತುಗಳನ್ನು ಆಡುತ್ತನಾದರೂ ಈ ಸಂಬಂಧಗಳನ್ನು ಕಳಚಿಕೊಳ್ಳುವುದು ಸುಲಭವಾಗಿರಲಿಲ್ಲ. ಆತನ ಮನಸ್ಸಿನ ತಳಮಳವನ್ನು ಸೂಕ್ಷ್ಮವಾಗಿ ಚಿತ್ರಿಸಿದ್ದಾರೆ. ಇತ್ತ ಚನ್ನ ಸಿದ್ಧಾರ್ಥನ ಪಯಣವನ್ನು ನಿಲ್ಲಿಸಲು ರಾಲನ ಸಹಾಯವನ್ನು ಕೇಳುತ್ತಾನೆ. ನಾಟಕದಲ್ಲಿ ಮಾರ ಮತ್ತು ಸಿದ್ಧಾರ್ಥನ ಸಂಭಾಷಣೆ ನಾಟಕದ ತಿರುಳನ್ನೇ ಹೇಳುತ್ತದೆ. ಸಿದ್ಧಾರ್ಥನನ್ನು ತನ್ನ ಮಾಯಜಾಲದಲ್ಲಿ ಸಿಕ್ಕಿಸಲು ವಿವಿಧ ಆಮೀಷಗಳನ್ನು ಒಡ್ಡುತ್ತಾನೆ. ಆದರೂ ಸಿದ್ಧಾರ್ಥ ಬುದ್ಧನಾಗಲು ಅಚ್ಚಲನಾಗುತ್ತಾನೆ. ನಂತರ ಚನ್ನ ಮತ್ತು ಸಿದ್ಧಾರ್ಥ ಹೊರಟಿರುವಾಗ ರಾಲನು ಪಯಣವನ್ನು ತಡೆಯುವಲ್ಲಿ ವಿಫಲನಾಗುತ್ತಾನೆ. ಬಹುದೂರ ಬಂದು ವಿಶ್ರಾಂತಿ ಪಡೆಯುತ್ತಿರುವಾಗಲೇ ಸಿದ್ಧಾರ್ಥ ಚನ್ನನನ್ನು ಅಗಲುವನು. ಸಿದ್ಧಾರ್ಥ ಮುಂದೆ ಸಾಗಿ ನಂತರ ಕಂಥಕ ಕುದುರೆಯನ್ನು ಅಲ್ಲಿಯೇ ಬಿಟ್ಟು ಕಾಡನ್ನು ಪ್ರವೇಶಿಸುತ್ತಾನೆ. ಆಗ ದೇವತೆಗಳು ಹರಸುತ್ತಾರೆ.

ಮಾನವನ ಇತಿಹಾಸದಲ್ಲಿಯೇ ಅತ್ಯಂತ ಶ್ರೇಷ್ಠ ವ್ಯಕ್ತಿಯಾಗಿರುವ ಬೋಧಿಸತ್ವ ಗೌತಮ ಬುದ್ಧನು ಪ್ರಜ್ಞೆ ಮತ್ತು ಕರುಣೆಯನ್ನು ಮನುಕುಲಕ್ಕೆ ಬೋಧಿಸಿ ಮಾನವತಾವಾದವನ್ನು ಪ್ರತಿಪಾದಿಸಿದವನು. ಬುದ್ಧನೆಂದರೆ ಜಾಗೃತನಾದವ, ಎಲ್ಲವನ್ನು ತಿಳಿದವ, ವಿಕಸಿತ, ನಿದ್ದೆಯಿಂದ ಎದ್ದವನು ಮತ್ತು ಜ್ಞಾನಿ ಎಂದರ್ಥ. "ಅರಿವು ಎಂದರೆ ಜ್ಞಾನ. ಜ್ಞಾನ ಎಂದರೆ ಬುದ್ಧ, ಬುದ್ಧನೆಂದರೆ ಎಲ್ಲವನ್ನೂ ತಿಳಿದವನು"[8](ಪುಟ–31, ಬುದ್ಧ ಬಸವ ಸಮಜೋ–ಧಾರ್ಮಿಕ ವಿಚಾರಗಳು–2012). ಬುದ್ಧನೆಂದರೆ ಕರುಣೆಯ ಸಮುದ್ರ. ಆತನ ಬದುಕು, ಆರ್ಯ ಸತ್ಯಗಳು, ತತ್ವಗಳು, ಬೋಧನೆಗಳು ಮಾನವ ಕುಲಕ್ಕೆ ಆದರ್ಶವಾಗಿವೆ. ಬುದ್ಧ ನಮ್ಮಂತೆಯೇ ಮನುಷ್ಯ ಎಂಬುದನ್ನು ಸ್ವತಃ ಆತನೇ ಹೇಳಿಕೊಂಡಿದ್ದಾನೆ. ಸ್ವತಃ ಬುದ್ಧನೇ ನಾನು "ದೇವರಲ್ಲ, ದೇವರ ಮಗನಲ್ಲ, ದೇವದೂತನೂ ಅಲ್ಲ ಎಂದು ಸ್ಪಷ್ಟವಾಗಿ ಹೇಳಿದ್ದಾನೆ"[9](ಪುಟ–14, ಬುದ್ಧದರ್ಶನ–2012). "ಆತನ ಹುಟ್ಟು ಯಾರ ಕೃಪೆಯಿಂದಲೂ ಆದುದ್ದಲ್ಲ. ಆತ ದೇವರ ಅವತಾರವೂ ಅಲ್ಲ, ದೇವದೂತನೂ ಅಲ್ಲ"[10](ಪುಟ–42, ಆವರಣ–ಅನಾವರಣ–2005). ಹೀಗೆ ಬುದ್ಧ ತನ್ನ ಸತತ ಪ್ರಯತ್ನಗಳಿಂದ, ಸಾಧನೆಗಳಿಂದ ಪರಿಪೂರ್ಣತೆಯನ್ನು ಸಾಧಿಸಿದ ವ್ಯಕ್ತಿಯಾದರೂ ಕೂಡ ಆತನನ್ನು ಅತಿಮಾನುಷ ದೈವಶಕ್ತಿಯಾಗಿ ಸಾಹಿತ್ಯದಲ್ಲಿ ಕೆಲವು ಕಡೆ ಚಿತ್ರಿಸಿರುವುದು ಸೋಜಿಗದ ಸಂಗತಿ. ಆದರೆ ಈ ಮಹಾರಾತ್ರಿ ನಾಟಕದಲ್ಲಿ ಆತನನ್ನು ಮೇಲುನೋಟಕ್ಕೆ ದೈವದಂತೆ ಚಿತ್ರಿಸಿರುವುದು ಕಂಡು ಬಂದರೂ ಕೂಡಾ ಆತನೊಬ್ಬ ಸಾಮಾನ್ಯ ವ್ಯಕ್ತಿಯಾಗಿದ್ದಾನೆ; ಇದು ಕುವೆಂಪು ಅವರ ಸೃಜನಶೀಲತೆಗೆ ಸಾಕ್ಷಿಯಾಗಿದೆ. ಒಬ್ಬ ಸಾಮಾನ್ಯ ವ್ಯಕ್ತಿಯ ಸಾಧನೆಗೂ ದೈವಗಳು ಖುಷಿಪಡುತ್ತವೆ; ಪ್ರೋತ್ಸಾಹಿಸುತ್ತವೆ ಎಂಬ ಆಶಯ ಇಲ್ಲಿ ವ್ಯಕ್ತವಾಗಿರುವುದನ್ನು ಗಮನಿಸಬೇಕು.

ಕುವೆಂಪು ಅವರ ನಾಟಕದ ಸನ್ನಿವೇಶಗಳು ರಾತ್ರಿಯಲ್ಲಿ ನಡೆಯುವುದರಿಂದ ಹಾಗೂ ಸಿದ್ಧಾರ್ಥ ಬುದ್ಧನಾಗಲು ಹೊರಡುವುದು ರಾತ್ರಿಯಲ್ಲೇ ಆಗಿರುವುದರಿಂದ 'ಮಹಾರಾತ್ರಿ' ಎಂಬ ಹೆಸರು ತುಂಬಾ ಅರ್ಥಪೂರ್ಣವಾಗಿದೆ. ಸಿದ್ಧಾರ್ಥ ತನ್ನ ರಾಜ್ಯ, ಮಡದಿ, ಮಗ ಎಂಬ ವ್ಯಾಮೋಹ ತೊರೆದು ಮನಪರಿವರ್ತನೆಯ ಎಂಬ ಮಹಾಪರಿವರ್ತನೆಯ ಆ ರಾತ್ರಿಯನ್ನು ಕುವೆಂಪು 'ಮಹಾರಾತ್ರಿ' ಎಂದು ಕರೆದದ್ದು ಔಚಿತ್ಯವೇ ಸರಿ. ಈ ರಾತ್ರಿಯ ಸಂಧರ್ಭವನ್ನು ಬೇಂದ್ರೆ ತಮ್ಮ ಕವನದಲ್ಲಿ ವ್ಯಕ್ತಪಡಿಸಿದ್ದಾರೆ.

**"ಬುದ್ಧ, ಬುದ್ಧ**
**ಜಗವೆಲ್ಲ ಮಲಗಿರಲು ಇವನೊಬ್ಬನೆದ್ದ;**
**ಮಡದಿ ಮಗು ಮನೆ–ಮಾರು ರಾಜ್ಯ–ಗೀಜ್ಯ**
**ಹೊತ್ತಿರುವ ಉರಿಯಲಿ ಆಯಿತಾಜ್ಯ**
**ಹಿಂದೆ ಬಿದ್ದವು ಎಲ್ಲೋ ಕುದುರೆ ಕಾಲಾಳು**
**ಬಿಚ್ಚಿ ಉದುರುತು ಎಲ್ಲೋ ಮನದ ಬಾಳು**
**ಹೊರಟ ಹೊರಟೇ ಹೊರಟ, ಹೊರಟನೆತ್ತೋ**
**ಸಾಹಸಿಯ ಗೊತ್ತುಗುರಿ ಅವಗು ಗೊತ್ತೋ!"[11]**

**(ಬುದ್ಧ, ಗಂಗಾವತರಣ–2008).**

ಸಿದ್ಧಾರ್ಥನು ಎಲ್ಲವನ್ನೂ ತೊರೆದು ಕಾಡಿಗೆ ಹೋಗಲು ಕಾರಣವೂ ಇದೆ. ನಾಟಕದಲ್ಲಿರುವ ಆ ಕಾರಣವನ್ನು ಕುವೆಂಪು ಸಮಕಾಲೀನಗೊಳಿಸಿರುವುದು ಅದ್ಭುತವಾಗಿದೆ. ಇದರಿಂದ ಕುವೆಂಪು ಬುದ್ಧನನ್ನು ಕುರಿತು ಸಾಂಪ್ರದಾಯಿಕ ದೃಷ್ಟಿಕೋನವನ್ನು ಅನುಸರಿಸಿರುವುದು ನೆಪಮಾತ್ರಕ್ಕೆ ಎಂಬುದರ್ಥವಾಗುತ್ತದೆ. ಬುದ್ಧನು ಮನೆ ಬಿಡಲು ವೈರಾಗ್ಯದ ಜೊತೆಗೆ ಸಮಾಜದ ಬಡತನ ಮತ್ತು ಮೌಢ್ಯವೇ ಕಾರಣ ಎಂಬುದನ್ನು ಹೇಳುವುದರಲ್ಲಿ ವೈಚಾರಿಕ ದೃಷ್ಟಿಕೋನವು ವ್ಯಕ್ತಾಗಿರುವುದು ಸ್ಪಷ್ಟವಾಗುತ್ತದೆ.

**"ಯಕ್ಷ.............................. ಯಜ್ಞಯಾಗಾದಿಗಳ**
**ಹಿಂಸೆಯಲ್ಲಿ ಬೆಂದು, ಕೃತ್ರಿಮದ ವೈದಿಕರ**
**ದೌಷ್ಟ್ಯದೊಳು ನೊಂದು, ಒಣವೇದ ಪಂಡಿತರ**
**ವಾದದೊಳು ಮುಳು ಮುಳುಗಿ ಗೋಳಿಡುವ ಭಾರತೀಯ**
**ಪುಣ್ಯಗಗನದ ಪೂರ್ವದೊಳು, ನೋಡು, ಹರ್ಷದರು**
**ಣೋದಯವು ಶೋಭಿಸುವುದೆಂತು!"[12]**

**(ಪುಟ–3, ಮಹಾರಾತ್ರಿ–2014).**

ಹೀಗೆ ನಾಟಕ ಬರೆಯಲು ಸಮಕಾಲೀನ ಒತ್ತಾಯವಿರುವುದನ್ನು ಗಮನಿಸಬಹುದು. ಪುರೋಹಿತ ಶಾಹಿಯ ಕಪಿಮುಷ್ಠಿಯಲ್ಲಿ ನರಳುತ್ತಿರುವ ಸಮಾಜಕ್ಕೆ ಬುದ್ಧನೇ ಮಾರ್ಗವಾಗಿದ್ದಾನೆ. ವೇದಕಾಲದಿಂದಲೂ ವರ್ಣವ್ಯವಸ್ಥೆ, ಜಾತಿವ್ಯವಸ್ಥೆ ಇದ್ದು ವೈದಿಕರ ಹೋಮ ಹವನಗಳಿಂದ ಪರಿಸರ ನಾಶವಾಗುವುದರ ಜೊತೆಗೆ ಸಾಮಾನ್ಯ ಜನರಿಗಾಗುವ ತೊಂದರೆ, ವೈದಿಕರ ಬಿತ್ತುವ ಮೌಢ್ಯತೆಯನ್ನು ತೊಡೆದು ಹಾಕಲು ಬುದ್ಧ ಮತ್ತು ಅವನ ಬುದ್ಧ ಮಾರ್ಗ ಅನಿವಾರ್ಯವಾಗಿತ್ತೆಂಬುದು ನಾಟಕದಲ್ಲಿ ವ್ಯಕ್ತವಾಗಿದೆ; ಅದನ್ನು ಕುವೆಂಪು ಚಿತ್ರಿಸಿರುವುದು ಮನೋಜ್ಞವಾಗಿದೆ. ಜಾತಿವ್ಯವಸ್ಥೆ ಬುದ್ಧನ ಕಾಲದಲ್ಲೂ ಇತ್ತೆಂಬುದು 'ಜಲ' ನಾಟಕದಲ್ಲೂ ಉಲ್ಲೇಖವಾಗಿದೆ. ದೇವರುಗಳ ಹೆಸರಿನಲ್ಲಿ ಮೌಢ್ಯಕ್ಕೆ ತಳ್ಳುವ, ಮೋಸ ಮಾಡುವ ವಂಚನೆಯನ್ನು ದೈವಗಳೆ ವಿರೋಧಿಸುವಂತೆ ಮಾಡಿ ಇದಕ್ಕೆ ಬುದ್ಧನ ಉದಯವಾಗಬೇಕೆಂದು ದೈವಗಳೇ ಸಂಭಾಷಿಸುವಂತೆ ಚಿತ್ರಣ ಮಾಡಿರುವುದರಲ್ಲಿ ಕುವೆಂಪುರವರ ಕೈಚಳಕ ಗೊತ್ತಾಗುತ್ತದೆ. ಅಷ್ಟೇ ಯಾಕೆ

ಸ್ವತಃ ಕುವೆಂಪು ಈ ಮೇಲು ಕೀಳು, ಅಜ್ಞಾನ, ಮೂಢನಂಬಿಕೆಗಳನ್ನು ವಿರೋಧಿಸಿರುವುದನ್ನು ಅವರ ಸಾಹಿತ್ಯದಲ್ಲಿ ಕಾಣುತ್ತೇವೆ.

**"ಗುಡಿ ಚರ್ಚು ಮಸಜೀದಿಗಳ ಬಿಟ್ಟು ಹೊರಬನ್ನಿ,**
**ಬಡತನವ ಬುಡಮಟ್ಟ ಕೀಳ ಬನ್ನಿ**
**ಮೌಢ್ಯತೆಯ ಮಾರಿಯನ್ನು ಹೊರದೂಡಲೈ ತನ್ನಿ,**
**ವಿಜ್ಞಾನ ದೀವಿಗೆಯ ಹಿಡಿದು ಬನ್ನಿ".**

ಸಿದ್ಧಾರ್ಥನು ಮನೆತೊರೆಯಲು, ಮೌಢ್ಯದಲ್ಲಿ ಬೆಂದಿರುವ ಭಾರತೀಯ ಸಮಾಜವನ್ನು ಮೌಢ್ಯದಿಂದ ವಿಮುಕ್ತಿಗೊಳಿಸುವುದೇ ಕಾರಣವಾಗಿತ್ತು; ಎಂಬುದು ಸಿದ್ಧಾರ್ಥನ ಕೆಳಗಿನ ಮಾತುಗಳಲ್ಲಿ ಮತ್ತಷ್ಟು ಸ್ಪಷ್ಟವಾಗುತ್ತದೆ.

**"ಸಿದ್ಧಾರ್ಥ–ಚನ್ನಜ್ಞ, ನಾನೊಬ್ಬ ಸುಖಿಯಾದರೇನಾಯ್ತು? ಲೋಕವೇ**
**ಬೊಬ್ಬಿರಿಯುತಿಹುದಲ್ಲ ಬೆಂದು ಬಡತನದಲ್ಲಿ,**
**ಮೌಢ್ಯಾಂಧಕಾರದೊಳು ಸಿಕ್ಕಿ, ದಾರಿಯ ತಪ್ಪಿ,**
**ಕಾಡುಪಾಲಾಗಿಹಳು ಭಾರತಾಂಬೆಯು, ಚನ್ನ,**
**ಕಾಡುಪಾಲಾಗಿಹಳು!"[13] (ಪುಟ–7, ಮಹಾರಾತ್ರಿ–2014).**

ಸಿದ್ಧಾರ್ಥ ಇಲ್ಲಿ ಭಾರತಾಂಬೆಯ ಸ್ಥಿತಿಯನ್ನು ಕುರಿತು ಹೇಳುತ್ತಿರುವ ಮಾತುಗಳು ಸಮಕಾಲೀನ ಸಂದರ್ಭವನ್ನು ನೆನಪಿಸುತ್ತವೆ. ನಾನೊಬ್ಬನೇ ಸುಖಿಯಾಗಿದ್ದರೆ ಸಾಲದು, ಬಡತನದಲ್ಲಿ ಬೆಂದು ಮೌಢ್ಯದಲ್ಲಿ ಸಿಕ್ಕು ತನ್ನ ದಾರಿಯನ್ನೇ ತಪ್ಪಿದ ಸಮಾಜವನ್ನು ಎಚ್ಚರಿಸಬೇಕಾಗಿದೆ. ಇಲ್ಲಿ ಸಾಮಾಜಿಕ ಆಶಯ ವ್ಯಕ್ತವಾಗಿರುವ ಪರಿ ಅಭೂತಪೂರ್ವವಾಗಿದೆ. ಸ್ವತಃ ಸಿದ್ಧಾರ್ಥನು ವೈಚಾರಿಕ ದೃಷ್ಟಿಕೋನದ ವ್ಯಕ್ತಿಯಾಗಿದ್ದನು ಎಂಬುದು ಇದರಿಂದ ಸಾಭಿತಾಗುತ್ತದೆ. "ಜೀವಪ್ರೇಮದ ಹೆಮ್ಮರವಾಗಿರುವ ಬುದ್ಧನು ವಾಸ್ತವವಾಗಿ ವೈಚಾರಿಕತೆಯ ಹಾದಿಯಲ್ಲಿ ನಡೆದ ಹಿರಿಯಣ್ಣನೇ ಸರಿ"[14](ಪುಟ–214, ಸೃಜನಶೀಲ ವೈಚಾರಿಕತೆ–2008). ಹೀಗೆ ಬುದ್ಧ ವೈಚಾರಿಕ ವ್ಯಕ್ತಿಯಾಗಿ ಕಾಣಿಸಿಕೊಳ್ಳುತ್ತಾನೆ. ದೇವರ ಪ್ರಶ್ನೆ ಬಂದಾಗ ಮೌನವನ್ನು ವಹಿಸುತ್ತಾನೆ. "ಜೀವನಕ್ಕೆ ಅಗತ್ಯವಲ್ಲದ ಪ್ರಶ್ನೆಗಳ ಬಗ್ಗೆ ಜಿಜ್ಞಾಸೆ ಮಾಡುವುದು ವ್ಯರ್ಥ. ಧರ್ಮವನ್ನು ನಾವು ವೈಜ್ಞಾನಿಕ ದೃಷ್ಟಿಕೋನದಲ್ಲಿ ಪರಿಗಣಿಸಬೇಕು. ಧರ್ಮವೇ ಜೀವನವಲ್ಲ. ಅದು ಜೀವನಕ್ಕೆ ಸಹಕಾರಿ" ಎಂದು ವೈಜ್ಞಾನಿಕ ಅಭಿಪಾಯ ಹಾಕಿಕೊಟ್ಟಿದ್ದಾನೆ. "ದೇವರುಗಳೆಂಬ ಅಗೋಚರ ವ್ಯಕ್ತಿಗಳ ಹಿಡಿತದಿಂದ ನಮ್ಮನ್ನು ಸ್ವತಂತ್ರವಾಗಿ ಮಾಡಿದ"[15](ಪುಟ–53,ಆವರಣ–ಅನಾವರಣ–2005). ಆದರೆ ಇಂದು ಪ್ರಸ್ತುತ ದಿನಗಳಲ್ಲಿ ಯಾವ ಸಮಾಜವನ್ನು ಮೌಢ್ಯದಿಂದ ಹೊರತರಲು ಬುದ್ಧನು ಮನೆ ತೊರೆದನೋ ಅದೇ ಜನಗಳು ಇವತ್ತು ಹೆಚ್ಚು ಮೌಢ್ಯಕ್ಕೆ ಒಳಗಾಗಿರುವುದು ವಿಷಾಧಕರ ಸಂಗತಿ. ದಿನಬೆಳಗಾದರೆ ದೂರದರ್ಶನದಲ್ಲಿ ಮೌಢ್ಯವನ್ನು ಬಿತ್ತುವ ಕೆಲಸವಾಗುತ್ತಿರುವುದು ವಿಪರ್ಯಾಸ. ಹೀಗೆ ಬಡತನದಲ್ಲಿ ಬೆಂದು ಮೌಢ್ಯಕ್ಕೆ ಒಳಗಾದ ಸಮಾಜಕ್ಕೆ ನಾಟಕದ ಮೂಲಕ ಚಾಟಿಯನ್ನು ಬೀಸುದರ ಜೊತೆಗೆ ಇದಕ್ಕೆಲ್ಲ ಕಾರಣ ಬಡತನ ಎಂಬುದನ್ನು ತಿಳಿಸಿದ್ದಾರೆ. ಬಡತನ ಹೊಡೆದೋಡಿಸುವ ಕೆಲಸ ನಿರಂತರವಾಗಿ ನಡೆಯುತ್ತಿದೆಯಾದರೂ ಅದನ್ನು ಹೋಗಲಾಡಿಸಲು ಸಾಧ್ಯವಾಗಿಲ್ಲ; ಇದಕ್ಕೆ ಸಾಂಪ್ರದಾಯವಾದಿಗಳು ಮತ್ತು ಬಂಡವಾಳಶಾಹಿಗಳು ಕಾರಣ.

ಸಿದ್ಧಾರ್ಥ ತನ್ನ ಒಳತುಮುಲುಗಳ ಮೀರಿ ಆತನು ತೆಗೆದುಕೊಳ್ಳುವ ನಿರ್ಧಾರಗಳು ನಾಟಕದಲ್ಲಿ ಮುಖ್ಯವಾಗುತ್ತವೆ. ಸಿದ್ಧಾರ್ಥ ಅರಮನೆಯನ್ನು ಬಿಟ್ಟು ಹೊರಡುವ ನಿರ್ಧಾರ ತೆಗೆದುಕೊಂಡ ನಂತರ ಆತನ ತಳಮಳಗಳನ್ನು ಕಾಣಬಹುದು.

**"ಇಲ್ಲ; ಇನ್ನಿಲ್ಲಿ ಇರಲಾರೆ. ಇರಲಾರೆ!**
**ಎಳೆಯ ಕರೆಯನು ಕೇಳಿಯೂ ಸುಮ್ಮನಿರಲಾರೆ.**
**ಆತ್ಮದಾಮಂತ್ರಣವನೋದಿಯೂ ಭೋಗಭಿ**
**ಲಾಷೆಯಿಂದಿನ್ನು ನಾನಿರಲಾರೆ. ವರಧರ್ಮ**
**ದೇವತೆಯು ಗುಡಿಗಳಿಂ, ಹೊಲಗಳಿಂ, ವನಗಳಿಂ,**
**ಸೌಧಸೌಧಂಗಳಿಂ ಕೈಬೀಸಿ ಗೋಳಾಡಿ**
**ಕರೆವುದನು ಕಂಡೂ ಮೊದ್ದನಾಗಿರಲಾರೆ.**
**.... .... .... .... .... .... .... .... .... .... ....**
**.... .... .... .... .... .... ನಾಳೆ ನಾಳೇ ಎಂದು**
**ವರ್ಷಗಳ ಕಳೆದಾಯ್ತು! ನಾಳೆ ಎಂದಿಗು ನಾಳೆ!"[16]**
**(ಪುಟ–5, ಮಹಾರಾತ್ರಿ–2014).**

ಸಿದ್ಧಾರ್ಥ ಹಲವು ಬಾರಿ ರಾಜ್ಯಭೋಗವನ್ನು ತ್ಯಜಿಸಲು ನಿರ್ಧರಿಸಿದ್ದರೂ ಆಗಿರಲಿಲ್ಲ. ಇಂದು ಮಾತ್ರ ಏನೇ ಆದರೂ ರಾಜ್ಯ ಬಿಡಬೇಕು ಎಂದುಕೊಳ್ಳುತ್ತಾನೆ. ಮೇಲಿನ ಮಾತುಗಳಿಂದ ಸಿದ್ಧಾರ್ಥನ ಮನಸ್ಸಿನಲ್ಲಿ ನಡೆವ ಗೊಂದಲಗಳು ಅರ್ಥವಾಗುತ್ತವೆ. ತನ್ನ ಮನಸಿಗೆ ಆತ್ಮವಂಚನೆ ಮಾಡಿಕೊಳ್ಳದೆ ಮನಸು ಹೇಳಿದಂತೆ ಕೇಳಲು ತನ್ನ ಮನಸಿನೊಂದಿಗೆ ತಾನೇ ಹೋರಾಟ ಮಾಡುತ್ತಿದ್ದಾನೆ. ಹೀಗೆ ಗೊಂದಲದಲ್ಲಿ ಇರುವಾಗಲೇ ಚನ್ನ ಮಗುವಿನ ಜನನದ ವಾರ್ತೆ ತರುತ್ತಾನೆ. ಈ ಶುಭ ಸುದ್ದಿಯನ್ನು ಆತನು "ಮತ್ತೊಂದು ಪಾಶ. ಕಬ್ಬಿಣದ ಸರಪಣಿಯ ಬಂಧನ" ಎನ್ನುತ್ತಾನೆ. ರಾಜ್ಯವನ್ನು ಏಂದೋ ತ್ಯಜಿಸಬೇಕಾಗಿತ್ತು; ಆದರೆ ಮದುವೆ ಅಡ್ಡಿ ಬಂದಿತು. ಈಗ ಮಗುವಿನ ಜನನದ ಘಟನೆ ನನಗೆ ತಡೆಯನ್ನುಂಟು ಮಾಡಬಾರದೆಂದುಕೊಳ್ಳುತ್ತಾನೆ. ಇನ್ನೊಂದು ನಾವು ನಾಟಕದಲ್ಲಿ ಗಮನಿಸಬೇಕಾದ ವಿಷಯವೆಂದರೆ ಸಿದ್ಧಾರ್ಥನು ಮಗು ಹುಟ್ಟಿದ ದಿನವೆ ರಾಜ್ಯತ್ಯಾಗಕ್ಕೆ ಸಿದ್ಧನಾಗುತ್ತಿದ್ದಾನೆ. ಆದರೆ ಜಲ ಮತ್ತು ಬುದ್ಧ ದರ್ಶನ ಕೃತಿಗಳನ್ನು ಗಮನಿಸಿದಾಗ ರಾಹುಲ ಹುಟ್ಟಿ ಬೆಳೆದು 4–5 ವರ್ಷಗಳಾದ ಮೇಲೆ ಸಿದ್ಧಾರ್ಥ ಗೃಹತ್ಯಾಗ ಮಾಡುತ್ತಾನೆಂಬ ಬರಹಗಳಿವೆ. ಹುಟ್ಟಿದ ದಿನವೇ ಮಗುವಿಗೆ ರಾಹುಲ ಎಂದು ಸಂಭೋದಿಸುತ್ತಾನೆ. ಹುಟ್ಟಿದ ದಿನವೇ ಹೆಸರಿಡಲು ಹೇಗೆ ಸಾಧ್ಯ?. ಹಾಗಾದರೆ ಮಹಾರಾತ್ರಿಯಲ್ಲಿ ಲೇಖಕರು ಮಾರ್ಪಾಟ್ಟು ಮಾಡಿಕೊಂಡಿರುವುದು ಸ್ಪಷ್ಟವಾಗಿ ಗೋಚರವಾಗುತ್ತದೆ. ಅಂದರೆ ಮಗು ಹುಟ್ಟಿದ ಬಹಳ ದಿನಗಳ ನಂತರ ಸಿದ್ಧಾರ್ಥ ರಾಜ್ಯ ತ್ಯಜಿಸಿದ್ದರೂ ನಾಟಕದಲ್ಲಿ ಲೇಖಕರು ರಾಹುಲ ಹುಟ್ಟಿದ ದಿನವೇ ಸಿದ್ಧಾರ್ಥನ ಗೃಹತ್ಯಾಗ ಸನ್ನಿವೇಶ ಸೃಷ್ಟಿಸಿರುವುದು ಕುವೆಂಪುರ ಸೃಜನಶೀಲತೆಗೆ ಸಾಕ್ಷಿಯಾಗುದರ ಜೊತೆಗೆ ಅದಕ್ಕೆ ಒಂದು ಹಿನ್ನಲೆಯೂ ಇರಬಹುದು. ಹೇಗೆಂದರೆ ಮಗು ಹುಟ್ಟಿದ ದಿನ ಮತ್ತು ಸಿದ್ಧಾರ್ಥನ ಗೃಹತ್ಯಾಗ ಎರಡು ಅದೇ ರಾತ್ರಿ ನಡೆಯುತ್ತಿವೆ. ಇವೆರಡು ಪ್ರಮುಖ ಘಟನೆಗಳಾಗಿವುದರಿಂದ ನಾಟಕಕ್ಕೆ ಮಹಾರಾತ್ರಿ ಎಂಬ ಹೆಸರು ಸೂಚಿಸಿರಬಹುದು; ಮತ್ತು ಇದು ಸೂಕ್ತವೂ ಆಗಿದೆ. ಅದೇನೆ ಇದ್ದರೂ ಸಹ ಈ ಸಂಬಂಧಗಳು ಬಂಧನವನ್ನು ಸೃಷ್ಟಿಸುತ್ತವೆ. ಇವನ್ನು ಮೀರಿ ಹೋಗಬೇಕು; ಎಂದು ಸಿದ್ಧಾರ್ಥನು ನಿರ್ಧರಿಸುತ್ತಾನೆ. ಈ ನಿರ್ಧಾರ ಮಾಡಿದರೂ ಸಹ ಸಿದ್ಧಾರ್ಥ ಸಂಬಂಧಗಳೆಂಬ ಬಲೆಯಲ್ಲಿ ಸಿಕ್ಕು ಒದಾಡುತ್ತಿರುವುದು ಆತನ ಮನಸ್ಸಿನಲ್ಲಿ ನಡೆದ ಯುದ್ಧದಿಂದ ತಿಳಿಯಬಹುದು. ಇದು ಇನ್ನೂ ಸ್ಪಷ್ಟವಾಗಿ ಸಿದ್ಧಾರ್ಥ ರಾಹುಲ ಮತ್ತು ಯಶೋಧರೆಯನ್ನು ನೋಡಲು ಹಂಬಲಿಸುವ ದೃಶ್ಯದಲ್ಲಿ ಗೊತ್ತಾಗುತ್ತದೆ. ಸಂಬಂಧಗಳನ್ನು ಮೀರಿ ಹೋಗಬೇಕೆಂದುಕೊಂಡು ಮತ್ತೆ ಮಡದಿ, ಮಗುವನ್ನು ನೋಡಲು ಹೋಗುತ್ತಾನೆ; ಇದರಿಂದ ಸಿದ್ಧಾರ್ಥನಿಗೂ ಸಂಬಂಧಗಳನ್ನು ಮೀರುವುದು ಕಷ್ಟಸಾಧ್ಯವಾಗಿತ್ತು ಎಂಬುದು ಸತ್ಯವಾದ ಸಂಗತಿ. ಆದರೂ ಇದನ್ನೆಲ್ಲ ಮೀರಲು ಆತನು ತನ್ನ ಮನಸ್ಸಿನಲ್ಲೇ ಭಾವನಾತ್ಮಕ ಹೋರಾಟದ ಜೊತೆಗೆ ಸಾಮಾಜಿಕ ನೆಲೆಯಲ್ಲಿ ನಿಂತೂ ಹೋರಾಟ ಮಾಡುತ್ತಿರುವುದು ಗಮನಾರ್ಹ ಸಂಗತಿ. ಮನಸಿನ ಈ ತೋಳಲಾಟದಿಂದ ಪಾರಾಗಲು ಚನ್ನನ ಸಹಾಯವನ್ನು ಬೇಡುತ್ತಾನೆ. ಚನ್ನನಿಗೆ ಸಿದ್ಧಾರ್ಥನ ಈ ಬದಲಾವಣೆ ಆಶ್ಚರ್ಯವನ್ನುಂಟು ಮಾಡಿದಾಗ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಅದನ್ನು ತಿಳಿಯಲು ಚನ್ನ ಪ್ರಶ್ನೆಗಳನ್ನು ಕೇಳಿದರೆ ಸಿದ್ಧಾರ್ಥನ ಗೊತ್ತಿಲ್ಲ ಎಂಬುತ್ತರ ಗೊಂದಲವನ್ನುಂಟು ಮಾಡಿದರೂ ಸಹ ಸಿದ್ಧಾರ್ಥ ಏನನ್ನೂ ಮಾಡುತ್ತಿದ್ದಾನೆ ಎಂಬುದು ಅರ್ಥವಾಗದೇ ಹೋದರೂ ಸಹ ಏನೋ ಮಹತ್ವದ್ದನ್ನೇ ಸಾಧಿಸಲು ಹೊರಟಿದ್ದಾನೆ ಎಂಬ ಅರಿವಾಗಿದೆ. ಆದರೂ ಹೆದರಿ ಚನ್ನ ಈ ವಿಷಯವನ್ನು ರಾಜರಿಗೆ ತಿಳಿಸಲು ಇಚ್ಛಿಸಿದಾಗ ಸಿದ್ಧಾರ್ಥನ ಪ್ರತಿಕ್ರಿಯೆ ಅದ್ಭುತವಾಗಿರುತ್ತದೆ. ನಿಲ್ಲು ಚನ್ನ ಇದು ಗುಟ್ಟಾದ ಪಯಣ ಎಂದು ಹೇಳುತ್ತ ವೈರಾಗ್ಯಕ್ಕೆ ಕಾರಣವಾದ ಘಟನೆಗಳನ್ನು ನೆನಪಿಸುತ್ತಾನೆ.

**"ಮುದುಕನೊಬ್ಬನ ಕಂಡ ಪುಣ್ಯದಿನ!**
**ರೋಗಿಯನ್ನು ಕಂಡ ದಿನ! ಸತ್ತವನ ಕಂಡ ದಿನ!**
**ಯೋಗೀಶನೊಬ್ಬನನು ಕಂಡತುಳ ಪುಣ್ಯದಿನ!**
**ಆ ದಿನದ ನೆನಪಿದೆಯೇ ನಿನಗೆ?"[17] (ಪುಟ–8, ಮಹಾರಾತ್ರಿ)**

ಸಿದ್ಧಾರ್ಥನು ಈ ಘಟನೆಗಳು ಜರುಗಿದ ದಿನವನ್ನು ಪುಣ್ಯದಿನವೆಂದು ಕರೆಯುವಾಗಲೇ ಈ ಘಟನೆಗಳಿಂದಲೇ ಸಿದ್ಧಾರ್ಥನಿಗೆ ವೈರಾಗ್ಯ ಬರುತ್ತದೆ ಎಂದು ಜೋಯಿಸನು ನುಡಿದಿದ್ದನೆಂದು ಚನ್ನ ಹೇಳುವನು. ಹಾಗಾದರೆ ಜ್ಯೋತಿಷ್ಯ ನಿಜವಾಯಿತೆ? ಎಂಬ ಪ್ರಶ್ನೆ ಬರುವುದು ಸಹಜ. ಆದರೂ ಈ ಕ್ಷುಲ್ಲಕ ಕಾರಣಗಳಿಂದ ಸಿದ್ಧಾರ್ಥ ಮನೆಬಿಡಲು ಸಾಧ್ಯವೇ ಇಲ್ಲ. ಈ ಕಾರಣಗಳನ್ನು ನಾವು ಸಾಂಪ್ರದಾಯಿಕ ನೆಲೆಗಟ್ಟಿನ ಮೇಲೆ ರಚನೆಯಾದ ಕೃತಿಗಳಲ್ಲಿ ನೋಡಬಹುದಾದರೂ ಈ ಕಾರಣಗಳು ಕೇವಲ ನೆಪ ಮಾತ್ರವೇ ಆಗಿವೆ. ರಾಜ್ಯಭೋಗ ತ್ಯಜಿಸಲು ಈ ಘಟನೆಗಳೇ ಕಾರಣವೆಂದು ಹಲವರ ಅಭಿಪ್ರಾಯವಾಗಿದೆ. "ಅಸ್ವಸ್ಥತೆ, ವೃದಾಪ್ಯ, ಸಾವು ಇವು ಮೂರು ಅವನ ಮನಸಿನ ಮೇಲೆ ಗಾಢ ಪರಣಾಮ ಬೀರಿದವು"[18](ಪುಟ–32, ಬು.ಬ.ಸ.ಧಾ.ವಿಚಾರಗಳು–2002). "ಹಣ್ಣಣ್ಣು ಮುದುಕನನ್ನು ನೋಡಿದ, ಮುಪ್ಪಿನ ಬಗ್ಗೆ ಚಿಂತೆ ಹತ್ತಿತ್ತು"[19](ಪುಟ–43, ಆವರಣ–ಅನಾವರಣ–2005). ಹೀಗೆ ಈ ಘಟನೆಗಳು ಸಿದ್ಧಾರ್ಥನು ಬದುಕಿನ ಬಗ್ಗೆ ಚಿಂತೆ ಮಾಡಲು ಪ್ರೇರೆಪಿಸಿದವು. ಜೀವನದಲ್ಲಿನ ಕಷ್ಟಗಳಿಂದ ಪಾರಾಗಲು ಏನು ಮಾಡಬೇಕೆಂದು ಯೋಚಿಸಿ ಈ ಅರಮನೆಯಲ್ಲಿ ಇದ್ದರೆ ಕಷ್ಟಗಳಿಂದ ಪಾರಾಗುವುದು ಸಾಧ್ಯವಿಲ್ಲ ಎಂಬ ನಿರ್ಧಾರಕ್ಕೆ ಬಂದು ರಾಜ್ಯತ್ಯಾಗಕ್ಕೆ ಅಣಿಯಾಗುವನು. ಆ ಕ್ಷಣದಿಂದ ಯೋಚಿಸುತ್ತ ಒಂದು ದಿನ ಉದ್ಯಾನವನಕ್ಕೆ ಹೋದಾಗ ಶೀರೋಮುಂಡನ ಮಾಡಿಸಿಕೊಂಡ ಪಬ್ಬಜಿತನನ್ನು ಕಂಡು ಪ್ರೇರಿತನಾಗಿ ತಾನು ಪಬ್ಬಜಿತನಾಗಲು ಯೋಚಿಸುತ್ತಾನೆ. ಪಬ್ಬಜಿತನೆಂದರೆ ಸನ್ಯಾಸಿ. ಆದರೂ ಈ ಘಟನೆಗಳಿಗಿಂತ ಎರಡು ರಾಜ್ಯಗಳ ನಡುವಿನ ನೀರು ಹಂಚಿಕೆ ವಿವಾದ ಆತನು ರಾಜ್ಯ ಬಿಡಲು ಪ್ರಮುಖ ಕಾರಣವಾಗುತ್ತದೆ. "ರೋಹಿಣಿ ನದಿ ನೀರಿನ ಹಂಚಿಕೆಯಲ್ಲಿ ಎರಡೂ ರಾಜ್ಯಗಳು ವೈಮನಸ್ಸನ್ನು ಬೆಳೆಸಿಕೊಂಡವು"[20] (ಪುಟ–33,ಬು.ಬ.ಸ.ಧಾ.ವಿಚಾರಗಳು–2012). ಇದರ ಜೊತೆಗೆ ಬುದ್ದಣ್ಣ ಹಿಂಗಮಿರೆಯವರ 'ಬುದ್ದ ಕಾವ್ಯದರ್ಶನ' ಮಹಾಕಾವ್ಯದಿಂದ ಮತ್ತು ಮನಜ ಅವರ 'ಜಲ' ನಾಟಕದಿಂದಲೂ ನೀರು ಹಂಚಿಕೆ ವಿವಾದಕ್ಕೆ ಸಿದ್ಧಾರ್ಥ ರಾಜ್ಯತ್ಯಾಗ ಮಾಡಿದನೆಂದು ಸ್ಪಷ್ಟವಾಗುವುದು. ನದಿ ನೀರಿನ ಬಿಕ್ಕಟ್ಟಿನಿಂದಾದ ಸಮಸ್ಯೆ ಯುದ್ದಕ್ಕೆ ಕಾರಣವಾಗುತ್ತದೆ. ಆದರೆ ಸಿದ್ಯಾರ್ಥನಿಗೆ ಯುದ್ದ ಮಾಡುವ ಮನಸಿಲ್ಲದ ಕಾರಣ ಶಾಕ್ಯ ಸಂಘ ನಿಯಮದ ಪ್ರಕಾರ ಸಿದ್ಧಾರ್ಥ ಗೃಹತ್ಯಾಗ ಮಾಡಬೇಕಾಗುತ್ತದೆ. ಈ ಎರಡೂ ಪ್ರಸಂಗಗಳು ಆತನ ಜೀವನದಲ್ಲಿ ನಡೆದಿವೆಯಾದರೂ ಯಾವುದು ಮೊದಲು ಎಂಬುದು ಅಸ್ಪಷ್ಟವಾಗಿದೆ. ಆದರೂ ಈ ಮೂರು ಘಟನೆಗಳು ಗೃಹತ್ಯಾಗಕ್ಕೆ ನೆಪಮಾತ್ರವಾಗಿದ್ದು ಪ್ರಮುಖವಾಗಿ ನೀರಿನ ಸಮಸ್ಯೆಯೇ ಸಿದ್ಧಾರ್ಥನ ರಾಜ್ಯತ್ಯಾಗಕ್ಕೆ ಕಾರಣವಾಗಿದೆ ಎಂಬುದು ಸ್ಪಷ್ಟ.

ಮಹಾರಾತ್ರಿ ನಾಟಕದಲ್ಲಿ ಗೃಹತ್ಯಾಗದ ವಿಷಯವನ್ನು ಯಾರಿಗೂ ತಿಳಿಸದೆ ಹೊರಡಲು ಸಿದ್ದನಿರುತ್ತಾನೆ. ಚನ್ನನಿಗೆ ಮಾತ್ರ ಈ ವಿಷಯವನ್ನು ಹೇಳುತ್ತಾನೆಂದರೆ ತನ್ನ ಹೆಂಡತಿ, ತಂದೆ ತಾಯಿಗಳಿಗಿಂತ ಚನ್ನನ ಜೊತೆ ಉತ್ತಮ ಸಂಬಂಧವಿತ್ತೆಂಬುದಕ್ಕೆ ಇದು ಸಾಕ್ಷಿಯಾಗುತ್ತದೆ. ಹೆಂಡತಿ ಯಶೋಧರೆ, ತಂದೆ ಶುದ್ಧೋದನರ ಜೊತೆಗೆ ನಾಟಕದಲ್ಲಿ ಸಂಭಾಷಣೆ ಯಿಲ್ಲ. ಹೊರಡುವ ವಿಷಯವನ್ನು ಇವರೊಂದಿಗೆ ಹಂಚಿಕೊಂಡಿಲ್ಲ. ಯಾಕೆಂದರೆ ಇವರು ಸಿದ್ಧಾರ್ಥನಿಗೆ ತಡೆಯನ್ನುಂಟು ಮಾಡಬಹುದೆಂಬ ಕಾರಣವಿರಬಹುದು. ಮಾಹಾರಾತ್ರಿ ನಾಟಕದಲ್ಲಿ ಸಿದ್ಧಾರ್ಥನ ಗೃಹತ್ಯಾಗ ಚನ್ನನಿಗೆ ಮಾತ್ರ ಗೊತ್ತುಂಟು. ಉಳಿದವರಾರಿಗೂ ಗೊತ್ತಿಲ್ಲ, ಅಷ್ಟೇ ಅಲ್ಲ ಯಾರೊಂದಿಗೂ ಸಂಭಾಷಿಸದೆ, ಅಪ್ಪಣೆಯನ್ನು ಪಡೆಯದೆ ಹೊರಟ್ಟಿದ್ದಾನೆ. ಆದರೆ 'ಜಲ' ನಾಟಕವನ್ನು ಗಮನಿಸಿದಾಗ ಅಲ್ಲಿ ಮನೆಯವರೊಂದಿಗೆ ಮಾತನಾಡಿ ಅವರನ್ನು ಒಪ್ಪಿಸಿದ ನಂತರವೇ ರಾಜ್ಯತ್ಯಾಗ ಮಾಡುತ್ತಾನೆ. 'ಜಲ' ನಾಟಕದಲ್ಲಿ ಯಶೋಧರೆ, ಶುದ್ಧೋದನ ಪಾತ್ರಗಳು ಮಾತನಾಡುತ್ತವೆ. ಆದರೆ ಇವು ಮಹಾರಾತ್ರಿ ನಾಟಕದಲ್ಲಿ ಮೂಕ ಪಾತ್ರಗಳಾಗಿವೆ. ಜ. ಹೋ. ನಾರಾಯಣಸ್ವಾಮಿ ಅವರ ಲೇಖನದಲ್ಲಿ ಎಲ್ಲರ ಒಪ್ಪಿಗೆ ಪಡೆದು ಹೊರಡುವ ಉಲ್ಲೇಖವಿದೆ. "ತಂದೆ, ಸಾಕುತಾಯಿ, ಹೆಂಡತಿ, ಬಂಧು ಬಳಗ ಬೇಡವೆಂದು ಬೇಡಿಕೊಂಡರೂ ಸಿದ್ಧಾರ್ಥ ಮುಂಡನ ಮಾಡಿಕೊಂಡ. ನನ್ನ ಗುರಿ ಸಾಧನೆಯಲ್ಲಿ ಸಹಕರಿಸಿ ಎಂದು ಎಲ್ಲರನ್ನೂ ಬೇಡಿಕೊಂಡ"[21] (ಪುಟ–43, ಆವರಣ–ಅನಾವರಣ–2005). ಆದರೆ ಮಹಾರಾತ್ರಿಯಲ್ಲಿ ಮಾತ್ರ ಸಿದ್ಧಾರ್ಥ ಚನ್ನನನ್ನು ಬಿಟ್ಟು, ಯಾರಿಗೂ ಹೇಳದೆ, ಒಪ್ಪಿಗೆ ಪಡೆಯದೆ ಹೊರಟಿದ್ದಾನೆ. ಅದೇನೆ ಇದ್ದರೂ ಬಂಧನದಿಂದ ಬಿಡುಗಡೆ ಪಡೆಯಲು ಸಿದ್ಧಾರ್ಥನಿಗೆ ಚನ್ನ ನಿಷ್ಠಾವಂತ ವ್ಯಕ್ತಿಯಾಗಿದ್ದಾನೆ. ಈತನ ಮೇಲೆ ಸಿದ್ಧಾರ್ಥನಿಗೆ ತುಂಬಾ ನಂಬಿಕೆ ಮತ್ತು ಪ್ರೀತಿ ಇರುವುದು ಇದರಿಂದ ಅರ್ಥವಾಗುತ್ತದೆ.

ಸಿದ್ಧಾರ್ಥ ಸಂಬಂಧಗಳನ್ನು ಮೀರಬೇಕೆಂದು ನಿರ್ಧರಿಸಿದಾಗಲೂ ಮನಸ್ಸಿನಲ್ಲಿ ಗೊಂದಲಗಳು ಉಂಟಾಗುತ್ತವೆ. ಅಂತರಂಗದಲ್ಲಿ ತಳಮಳಗೊಳ್ಳುತ್ತಾನೆ. ತನ್ನನ್ನು ತಾನೇ ಸಂತೈಸಿಕೊಳ್ಳುವ, ಧೈರ್ಯ ಹೇಳಿಕೊಳ್ಳುವ ಪರಿಯನ್ನು ಕಾಣಬಹುದು.

**"ಹಿಂಜರಿಯದಿರು, ಮನವೇ. ಕಲ್ಲಾಗು, ಎದೆಯೆ.**
**ಬೆಣ್ಣೆಯಾಗುವೆ ಮುಂದೆ! ವ್ಯಾಮೋಹವೇ, ಸಾಯಿ!**
**ವೈರಾಗ್ಯವೇ ಕಾಯಿ! ಮುಕ್ತಿದೇವತೆ, ತಾಯಿ,**
**ಬಂದನ್ನೆ ಹೃದಯಕಮಲದಿ ನೃತ್ಯವಾಡು.**
**ಮಾಯೆಯನು ದೂಡು, ಶಕ್ತಿಯನ್ನು ನೀಡು"[22]**

**(ಪುಟ–11, ಮಹಾರಾತ್ರಿ).**

ಹೀಗೆ ತನ್ನ ಮನವನ್ನು ಈಗ ಕಲ್ಲಾದರೆ ಮುಂದೆ ಬೆಣ್ಣೆಯಾಗುವೆ. ಈ ವ್ಯಾಮೋಹಕ್ಕೆ ಒಳಗಾಗಬೇಡವೆಂದು ಬೇಡಿಕೊಳ್ಳುವ ಪರಿಯನ್ನು ನೋಡಿದರೆ ಸಿದ್ಧಾರ್ಥನಿಗೂ ಸಮಾಜ ಬಂಧನ ಮೀರುವುದು ಸುಲಭವಾಗಿರಲಿಲ್ಲ ಎನಿಸುತ್ತದೆ. ಮುಂದಿನ ದೃಶ್ಯದಲ್ಲಿ ಕಾವಲುಗಾರ ಕೈಲಾಸನೊಂಗಿನ ಸಂಭಾಷಣೆಯಲ್ಲಿ ಸಿದ್ಧಾರ್ಥನ ಮಾತುಗಳು ಕೈಲಾಸನಿಗೆ ಅಚ್ಚರಿಯನುಂಟು ಮಾಡಿದರೂ ಸಹ ಅರ್ಥಪೂರ್ಣವಾಗಿವೆ. ನಂತರ ಚನ್ನನಿಗೆ ಹೊರಡಲು ಸಿದ್ದನಾಗುವಂತೆ ಹೇಳಿ ದೀಪವನ್ನು ಹಿಡಿದುಕೊಂಡು ಆಡುವ ಮಾತುಗಳು ಸಿದ್ಧಾರ್ಥ ಸಮಾಜಕ್ಕೆ ತನನ್ನು ತಾನು ಅರ್ಪಿಸಿಕೊಳ್ಳುವುದನ್ನು ಸೂಚಿಸುವಂತಿವೆ.

**"ಬಾ, ಬೆಳಕೆ, ಬಾ ಬೇಗ, ನೀನು ಹೊರಗಿನ ಬೆಳಕು;**
**ಜ್ಞಾನ ಒಳಗಿನ ಬೆಳಕು. ನೀನಡಿಗಳಿಗೆ ದಾರಿ**
**ತೋರಿಸುವೆ. ಅರಿವಾದರಾತ್ಮನನು ಕೈಹಿಡಿದು ನಡೆಸುವುದು"[23]**

**(ಪುಟ–14, ಮಹಾರಾತ್ರಿ).**

ಈ ಮಾತುಗಳು ಸಿದ್ಧಾರ್ಥ ಬುದ್ದನಾಗಲು ಹೊರಟ್ಟಿರುವುದನ್ನು ಸೂಚಿಸುತ್ತವೆ. ಇಲ್ಲಿ ಸಿದ್ಧಾರ್ಥ ಬುದ್ದನಾಗಲು ಮಾನಸಿಕವಾಗಿ ತಯಾರಾಗಿರುವುದನ್ನು ಈ ಮಾತುಗಳು ಸಮರ್ಥಿಸುತ್ತವೆ. ಒಳಗಿನ

ಬೆಳಕಾದ ಜ್ಞಾನವನ್ನು ಪಡೆಯಲು ಹೊರಟಿರುವ ಸಿದ್ಧಾರ್ಥ ಸಿದ್ದನಾಗಿದ್ದಾನೆ. ಆ ಒಳಗಿನ ಜ್ಞಾನ ಪಡೆಯಲು, ಅಂಧಕಾರವನ್ನು ಹೊರಹಾಕಲು ಹೊರಗಿನ ಬೆಳಕಿನ ಸಹಾಯವನ್ನು ಕೇಳುದರ ಮೂಲಕ ಆತ್ಮದ ಅಭೀಪ್ಸೆಯನ್ನು ವ್ಯಕ್ತಗೊಳಿಸಿರುವುದು ಮನೋಜ್ಞವಾಗಿದೆ.

ಸಿದ್ಧಾರ್ಥನ ಆಕಸ್ಮಿಕ ಸವಾರಿ ಚನ್ನನಿಗೆ ಆಂತಕ ಸೃಷ್ಠಿಸಿದೆ. ಒಡೆಯನ್ನು ಹುಚ್ಚನಾದರೆ ಏನು ಮಾಡುವುದೆಂದುಕೊಂಡು ಸಿದ್ಧಾರ್ಥನನ್ನು ತಡೆಯಲು ಕುದುರೆಯ ಕಾಸ್ತಾರನಾದ ರಾಲನ ಸಹಾಯವನ್ನು ಕೇಳುವುದರೊಳಗೆ ಸಿದ್ಧಾರ್ಥ ಬರುತ್ತಾನೆ. ಸಿದ್ಧಾರ್ಥನಲ್ಲಿ ರಾಹುಲ ಯಶೋಧರೆ ನೋಡಬೇಕೆಂಬ ಹಂಬಲ ಬಲಗೊಳ್ಳುತ್ತಿರುವುದು ಮನೋವಿಶ್ಲೇಷನಾತ್ಮಕ ವಾಗಿದೆ. ಒಂದು ಕಡೆ ಮಾನಸಿಕವಾಗಿ ತಯಾರಾಗುತ್ತಿರುವುದು ಇನೊಂದು ಕಡೆ ವ್ಯಾಮೋಹಗೊಳುತ್ತಿರುವುದು ಮನೋವಿಜ್ಞಾನದ ಹಿನ್ನೆಲೆಯಲ್ಲಿ ನಾಟಕ ರಚನೆಯಾಗಿದೆ; ಎಂಬುದನ್ನು ಸಾಕ್ಷೀಕರಿಸುತ್ತವೆ. ಸಿದ್ಧಾರ್ಥ ತಳಮಳಗೊಳ್ಳುದರಲ್ಲಿ, ಮನಸಿಗೆ ನೆಮ್ಮದಿ ಹೇಳುತ್ತ ಕಡೆಯ ಸಲ ನೋಡಿ ಕಣ್ಣಿನಾಸೆಯನ್ನು ತೀರಿಸಿಕೊಳ್ಳಲು ಬಯಸುತ್ತಿರುವುದರಲ್ಲಿ ಇದಿನ್ನು ಸ್ಪಷ್ಟವಾಗುತ್ತದೆ. ಇಲ್ಲಿ ಮಾನವನ ದೌರ್ಬಲ್ಯಗಳನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸಲಾಗಿದೆ. 'ಮೋಹಬಂಧನದಿಂದ ಬಿಡುಗಡೆಗೊಳ್ಳುವ ಜೀವದ ತಳಮಳವನ್ನು, ಮಾನವೀಯ ದೌರ್ಬಲ್ಯಗಳ ಸಹಜವಾದ ಹಿನ್ನೆಲೆಯಲ್ಲಿ ಚಿತ್ರಿಸಿರುವುದು'[24](ಪುಟ–89, ಕುವೆಂಪು ಅವರ ನಾಟಕಗಳು–2010). ಹೀಗೆ ಸಿದ್ಧಾರ್ಥನ ತಳಮಳ ಕಂಡು ರಾಲ ಇವರೇನಾ? ದೊರೆಯ ಮಕ್ಕಳು?. ಲಾಯದಾನೆಗೂ ಹಣವಂತರಿಗೆ ಹುಚ್ಚು ಎನ್ನುವ ಮಾತಿನಲ್ಲಿ ಬಡತನದ ಮುಖವನ್ನು ಅನಾವರಣಗೊಳಿಸಲಾಗಿದೆ. ಮುಂದೆ ಸಿದ್ಧಾರ್ಥ ಹೆಂಡತಿ, ಮಗನನ್ನು ಕಾಣಲು ಹೋಗುವ ದೃಶ್ಯ ಮನೋಜ್ಞವಾಗಿದೆ. ಮನಸಿನಲ್ಲಿ ಮತ್ತೆ ಕಸಿವಿಸಿಗೊಂಡು ಅವರಿಬ್ಬರ ಮುಖ ನೋಡಲು ಧೈರ್ಯವಿಲ್ಲದಿದ್ದರೂ ನೋಡುತ್ತಾನೆ. ಹೀಗೆ ಪದೇ ಪದೇ ಸಿದ್ಧಾರ್ಥನ ಮನಸಿನ ತಳಮಳಗಳನ್ನು ಚಿತ್ರಿಸುದರಲ್ಲಿ ಇದೊಂದು ಮನೋವೈಜ್ಞಾನಿಕ ನಾಟಕದಂತೆ ಅನಾವರಣಗೊಳ್ಳುತ್ತದೆ.

**"ಮುಟ್ಟಲಾರೆನು. ಮುಟ್ಟಿದರೆ ಸುಟ್ಟು ಬಿಡುವೆ;**
**ಅಲ್ಲಿಹುದು ಎನ್ನ ಮುದ್ದಿನ ಕೆಂಡ!"[25]**

**(ಪುಟ–19, ಮಹಾರಾತ್ರಿ).**

ಈ ಮಾತುಗಳಲ್ಲಿ ಆತನ ಮನಸಿನ ತಳಮಳ ಜೊತೆಗೆ ಮೋಹಬಂಧನದಿಂದ ಬಿಡುಗಡೆಗೊಳ್ಳಲು ಹವಣಿಸುತ್ತಿರುವುದನ್ನು ಕಾಣಬಹುದು. ಮಗುವನ್ನು ಮುಟ್ಟಬೇಕೆಂದು ಆಸೆ ಇದ್ದರೂ ಮುಟ್ಟಲಾರ. ಕೆಂಡ ಎಷ್ಟೇ ಸುಂದರವಾದರೂ ಸುಡುವುದು ಅದರ ಗುಣವಾಗಿದೆ. ಲೇಖಕರು ಇಲ್ಲಿ ಕೆಂಡ ಎಂಬ ರೂಪಕ ಬಳಸಿರುವುದು ಉಚಿತವಾಗಿದೆ. ಮಗುವಿನ ವ್ಯಾಮೋಹ ಗುರಿ ಸಾಧನೆಗೆ ಬೆಂಕಿಯಾಗುತ್ತದೆಂಬ ಅರ್ಥವನ್ನು ಕೊಡಲಾಗಿದೆ. ಮಗುವಿನಿಂದ ಹೀಗೆ ಬಿಡುಗಡೆ ಪಡೆದರೆ ಹೆಂಡತಿಯಿಂದ ಇನ್ನೊಂದು ರೀತಿಯಲ್ಲಿ ಬಿಡುಗಡೆ ಹೊಂದುತ್ತಾನೆ. "ನಿದ್ರಿಸು ಯಶೋಧರಾ, ನಿದ್ರಿಸಲೆ ತಾಯಿ; ಇಂದು ನಾ ನಿನ್ನ ಸುತ, ಪತಿಯಲ್ಲ" ಎಂಬ ಮಾತುಗಳಲ್ಲಿ ಸಿದ್ಧಾರ್ಥ ಲೌಕಿಕತೆಯ ಭವ ಬಂಧನಗಳನ್ನು ತೊರೆದು ಜಾಗೃತಿ ಉಚ್ಛ್ರಾಯ ಸ್ಥಿತಿ ತಲುಪಿ ಮೋಹಬಂಧನದಿಂದ ಹೊರ ಬರುತಿರುವುದು ಸ್ಪಷ್ಟವಾಗುತ್ತದೆ. ಆದರೆ ಮೋಹಿನಿ ಮಗ ಮಾರ ಮತ್ತೆ ಸಿದ್ಧಾರ್ಥನನ್ನು ವ್ಯಾಮೋಹಕ್ಕೆ ಒಳಗಾಗುವಂತೆ ಪ್ರೇರೇಪಿಸಿದರೂ ಈಗಾಗಲೇ ಬುದ್ಧ ಜಾಗೃತಿಯನ್ನು ಪಡೆದ ಸಿದ್ಧಾರ್ಥ ಅವನ್ನೆಲ್ಲ ಮೀರಿ ನಿಲ್ಲುತ್ತಾನೆ. "ಕಪಿಲವಸ್ತುವಿನಗಲ ಸಾಲದೇ ನಿನಗೆ ? ಹಾಗಾದರೀ ಧರೆಯ ನಿನಗೀವೆ, ಹಿಂತಿರುಗು, ಸಿದ್ಧಾರ್ಥ" ಎಂಬ ಮಾರನ ಮಾತುಗಳ ಮುಖಾಂತರ ಸಿದ್ಧಾರ್ಥನನ್ನು ಲೌಕಿಕ ಆಕರ್ಷಣೆಗೆ ಒಳಮಾಡುವ ಪರಿ ಮಾರ್ಮಿಕ ವಾಗಿದೆ. ಈ ದೃಶ್ಯ ನಾಟಕದ ಮುಖ್ಯ ಭಾಗವಾಗಿದೆ. "ನಾಟಕದ ಕೇಂದ್ರ ವಸ್ತುವಿದ್ದು; ಸಾಧಕನೊಬ್ಬ ಎದುರಿಸುವ ಅತ್ಯಂತ ಬಿಕ್ಕಟ್ಟಿನ ಸನ್ನಿವೇಶವನ್ನು ಕುವೆಂಪು ಎದುರಿಸುತ್ತಿದ್ದಾರೆ"[26] (ಪುಟ–111, ಕುವೆಂಪು ನಾಟಕಗಳ ಅಧ್ಯಯನ–2011). ಮಾರನ ಮೋಹಕ್ಕೆ ಒಳಗಾಗದೆ ಇದ್ದಾಗ ಸಂಬಂಧಗಳನ್ನು ಬಿಟ್ಟು ಹೊರಡುವ ಹೇಡಿ ನಿನು ಎಂದು ಮಾರ ಬೈಯ್ಯಲು "ಬೈಯದಿರು ಮಾರ ಕಡಲಾಗಿ ಹಿಂತಿರುಗಲೆಂದೇ ಹನಿಯಾಗಿ ಹೊರಟಿಹೆನು ಹನಿಯೊಂದು ಎನಿತು ಕೊಳಕೊಡ್ಡಂ ತೊಳೆಯಬಲ್ಲುದು" ಎನ್ನುವಲ್ಲಿ ಸಿದ್ಧಾರ್ಥ ಸಾಮಾಜಿಕ ಜವಾಬ್ದಾರಿಯನ್ನು ನೆನಪಿಸುತ್ತಾನೆ. ಇಹ–ಪರಗಳ ಚಿಂತನೆಗಳನ್ನು ಕುವೆಂಪು ಇಲ್ಲಿ ಮುಖಾಮುಖಿಗೊಳಿಸಿದ್ದಾರೆ. ಇಹ ಮತ್ತು ಪರ ಇವುಗಳಲ್ಲಿ ಯಾವುದಾದರೂ ಒಂದರ ಕಡೆಗಿನ ನಿಲುವು ಸಮಂಜಸವಾದುದಲ್ಲ. "ಮಹತ್ವದ್ದನ್ನು ಸಾಧಿಸಿ ಮತ್ತೆ ಈ ಬದುಕಿಗೆ ಹಿಂತಿರುಗಿ, ಬದುಕನ್ನು ಹಸನುಗೊಳಿಸುವ ಪ್ರಗತಿಪರ ಇತ್ಯಾತ್ಮಕ ನಿಲುವಿರುವುದನ್ನು ಗಮನಿಸಬೇಕು"[27] (ಪುಟ–115, ಕುವೆಂಪು ನಾಟಕಗಳ ಅಧ್ಯಯನ–2011). ಈ ಮೇಲಿನ ಸಂಭಾಷಣೆಗಳಲ್ಲಿ ಮಹಾರಾತ್ರಿ ನಾಟಕದ ಶಯವೇ ಅಡಗಿರುವುದು ತಿಳಿಯುತ್ತದೆ.

ಸಿದ್ಧಾರ್ಥನ ನಿಲುವನ್ನು ಅರಿತ ಮಾರ ಆತನನ್ನು ಪ್ರಶಂಸಿಸುತ್ತಾನೆ. ನಂತರದ ದೃಶ್ಯದಲ್ಲಿ ರಾಲ ಸಿದ್ಧಾರ್ಥನನ್ನು ತಡೆಯಲಾಗದೆ ವಿಫಲನಾಗುವ ಪ್ರಸಂಗವಿದೆ. ಕೊನೆಗೆ ಸಿದ್ಧಾರ್ಥ ಚನ್ನರ ಪ್ರಯಾಣ ಪ್ರಾರಂಭವಾಗುತ್ತದೆ. ಹೀಗೆ ಸಿದ್ಧಾರ್ಥ ಅಹಂಕಾರ ತ್ಯಜಿಸಿ ಬುದ್ಧನಾಗಲು ಹೊರಟ್ಟಿರುವ ಸಂದರ್ಭದಲ್ಲಿ ಸಿದ್ಧಾರ್ಥನಿಂದ ಬರುವ ಕೆಲ ಮಾತುಗಳು ಅಹಂಕಾರವನು ಸ್ವಪ್ರಶಂಸೆಯನ್ನು ಸಾರುತ್ತವೆ. ಈ ಮಾತುಗಳು ಇಲ್ಲಿ ಅನಾವಶ್ಯಕವೆನಿಸುತ್ತವೆ.

**"ನಿಶೆಯ ಗರ್ಭವ ಹೊಕ್ಕು ಜಗಕೆ ಬೆಳಕನು ತಂದೆ**
**ಎಂಬ ಕೀರ್ತಿಯು ನಿನ್ನದಾಗುವುದು; ಎಲೆ ಹಯವೆ**
**ನಡೆ ಮುಂದೆ, ಮುಂದೆ. ಬೇಡ ಭೀತಿಯು ನಿನಗೆ**
**ಬೆನ್ನಿನೊಳು ಜಗದ ಜ್ಯೋತಿಯು ಕುಳಿತು ತಳಿಸುತಿದೆ.**
**ನಿಶೆಯ ಗರ್ಭಂಬೊಕ್ಕು ನಡೆ, ಹಯವೆ. ನೀನಿಂದು**
**ಇಳೆಯ ತಿಮಿರವ ಹರಿವ ಪೊಂಜುಗಾರನು, ತೇಜಿ.**
**ಜಗದ ಪುಣ್ಯದ ಭಾರ ನಿನ್ನ ಬೆನ್ನಿನಮೇಲೆ"[28] (ಪುಟ–28,ಮಹಾರಾತ್ರಿ)**

ಈ ಮಾತುಗಳು ಸ್ವಪ್ರಶಂಸೆಯಿಂದ ಕೂಡಿದ್ದು ಸಿದ್ಧಾರ್ಥನ ವ್ಯಕ್ತಿತ್ವವನ್ನು ಒರೆಗೆ ಹಚ್ಚುತ್ತವೆಯಾದರೂ ಸಾಧಕನಾಗಲು ಹೊರಟಿರುವ ವ್ಯಕ್ತಿಯಿಂದ ಬರುವ ಈ ಮಾತುಗಳು ಸಾಧಕನಿಗೆ ಸಮಂಜಸವಾಗುವುದಿಲ್ಲ. ಹೀಗೆ ಸಿದ್ಧಾರ್ಥನ ಪ್ರಯಾಣ ಸಾಗುತ್ತಿರಲು ಚನ್ನ ಎಷ್ಟೇ ಪ್ರಯತ್ನಿಸಿದರೂ ಸಿದ್ಧಾರ್ಥನ ಮನ ಬದಲಿಸಲು ಆಗಲಿಲ್ಲ. ಪ್ರಯಾಣಿಸಿ ದನಿದು ಮಲಗಿದ ಚನ್ನನನ್ನು ಅಗಲುವುದು ಸಿದ್ಧಾರ್ಥನಿಗೆ ಮಗ, ಹೆಂಡತಿಯನ್ನು ಅಗಲುವಿಕೆಗಿಂತ ಕಷ್ಟವಾಗುತ್ತದೆ. ಆದರೆ ಮಗ, ಹೆಂಡತಿಯನ್ನು ಅಗಲುವಾಗಿನ ತಳಮಳ ಮಾತ್ರ ಗೋಚರವಾಗುವುದಿಲ್ಲ. ಚನ್ನನನ್ನು ಅಗಲಿದ ನಂತರ ಕಂಥಕನನ್ನು ಅಗಲುವಿಕೆ ಬಂದಾಗ ಸಿದ್ಧಾರ್ಥನಿಗೆ ಮನುಷ್ಯ ಸಂಬಂಧಗಳ ಅಗಲುವಿಕೆಗಿಂತ ಕುದುರೆಯನ್ನು ಅಗಲುವುದು ಕಷ್ಟಸಾಧ್ಯವಾಗುತ್ತದೆ. ಕೊನೆಗೆ ಬಿಕ್ಷುಕನ ವೇಷ ಧರಿಸಿದಾಗ ಆತನು ಸಾಕ್ಷಾತ್ ಶಿವನ ರೂಪವನ್ನೆ ಹೋಲುತ್ತಾನೆ. ಶಿವನಂತೆ ತ್ಯಾಗಮೂರ್ತಿ ಮತ್ತು ಸಾಧನಕನೆಂಬುದನ್ನು ಇದರ ಮೂಲಕ ಚಿತ್ರಿಸಲಾಗಿದೆ. ಕೊನೆಯಲ್ಲಿ ಯಕ್ಷ, ಗಂಧರ್ವರು 'ಬುದ್ಧನ ತ್ಯಾಗವೇ ಮಹಾತ್ಯಾಗ' ಎನ್ನುವುದರ ಮೂಲಕ ಸಿದ್ಧಾರ್ಥ ಬುದ್ಧನಾದ ಎಂಬುದನ್ನು ಸಂಕೇತಿಸುತ್ತದೆ.

ಹೀಗೆ ನಾಟಕದಲ್ಲಿ ಸಿದ್ಧಾರ್ಥ ಬುದ್ಧನಾಗುವ ಕಾರ್ಯಕ್ಕೆ ದೈವದ ಬೆಂಬಲ, ನೆರವು ದೊರಕುವುದು ವಿಶೇಷವಾಗಿದೆ. ಮನುಷ್ಯ ಏನಾಗಬೇಕು? ಎಂಬುದನ್ನು ದೈವಗಳ ಮೂಲಕ ಚಿತ್ರಿಸಿ, ದೈವಗಳ ಮೂಲಕವೇ ಈ ಮೂಢನಂಬಿಕೆಯನ್ನು ವಿರೋಧಿಸಿ ತಮ್ಮ ಸ್ವಾರ್ಥಕ್ಕಾಗಿ ದೇವರುಗಳ

– 41ನೇ ಪುಟಕ್ಕೆ ಮುಂದುವರೆದುದು

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಮಹಿಳಾ ಮೀಸಲಾತಿ ಮತ್ತು ರಾಷ್ಟ್ರಾಭಿವೃದ್ಧಿ

✍ ಡಾ. ಸುಮಂಗಲ ಆರ್.ಕೆ., ಸಹಾಯಕ ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಗುಬ್ಬಿ.

## ಪೀಠಿಕೆ

ಒಬ್ಬ ಕವಿವಾಣಿಯಂತೆ

**"ಬತ್ತಿ ತಾನತ್ತಿ ಉರಿವಾಗ ನೊಂದಿತ್ತು,**
**ತನ್ನ ಒಡಲ ಬೀಜವೇ ಎಣ್ಣೆಯಾಯಿತೆಂದು"**

ತಾನು ಎತ್ತಿ ಆಡಿಸಿದಂತ ಕೈಗಳಿಂದ ಬೇಡಿಕೊಳ್ಳುವ ಸ್ಥಿತಿಯನ್ನು ಈ ಸಮಾಜ ತಂದಿದೆ ಎಂದರೆ ಪುರಾಣ ಕಾಲಗಳಿಂದಲೂ ಸ್ತ್ರೀಯ ಸ್ಥಾನವನ್ನು ಗಮನಿಸುತ್ತಾ ಹೋದಾಗ ಸ್ತ್ರೀ ಕೇವಲ ಯಂತ್ರಮಾನವಳಾಗಿ (ರೋಬೋ) ಬದುಕುತ್ತಿರುವುದು ಜಗತ್ ಜಾಹೀರಾತಾಗಿರುವುದರಲ್ಲಿ ಸಂಶಯವಿಲ್ಲ. ಇತಿಹಾಸದ ಪುಟಗಳಲ್ಲಿ ಹಬ್ಬಗಳು ಬರುವಂತೆ ಅಲ್ಲೋ ಇಲ್ಲೋ ಮಿಂಚುವ ಕೆಲ ಸ್ತ್ರೀಯರನ್ನು ಹೊರತಾಗಿಸಿದರೆ ಅದರಲ್ಲೂ ಆ ಸ್ತ್ರೀಯರ ಹಾದಿ ಹೂವಿನ ಹಾಸಾಗಿರದೆ ಮುಳ್ಳಿನ ಹಾಸಲ್ಲೇ ನೋವನ್ನುಂಡು ನಗುವನ್ನು ಚೆಲ್ಲಿದ ಕಥಾನಕಗಳೇ ಆಗಿವೆ. "ಜಗವೆಲ್ಲಾ ನಗುತಿರಲಿ ಜಗದಳುವು ನನಗಿರಲಿ" ಎಂಬ ವಿಶಾಲ ಭಾವನೆಯ ಸ್ತ್ರೀಗೆ ನಗುವ ಅವಕಾಶ ಸಿಗಲೆಂಬ ಆಶಯ ಕುಟುಂಬದಿಂದ ರಾಷ್ಟ್ರದವರೆಗೂ ಸಮಾಜದ ಎಲ್ಲಾ ಜನರಲ್ಲೂ ಒಡಮೂಡಿಸುವ ಆಶಯವನ್ನು ಹೊತ್ತು ಸ್ತ್ರೀ ಇಂದು ಹೋರಾಟದ ಹಾದಿ ಹಿಡಿದಿದ್ದಾಳೆ.

## ಭಾರತದ ಸಂವಿಧಾನ ಸಭೆಯಲ್ಲಿ ಮಹಿಳೆಯರು

ಭಾರತ ಬ್ರಿಟೀಷರ ದಾಸ್ಯದಿಂದ ಮುಕ್ತಿಹೊಂದಿ ಸ್ವಾತಂತ್ರ್ಯ ಹೊಂದಿದ ನಂತರ ಸ್ವತಂತ್ರ ಆಳ್ವಿಕೆಯ ಸಲುವಾಗಿ ತನ್ನದೇ ಆದ ಕಾನೂನು ಕಟ್ಟಳೆಗಳ ಸಂಹಿತೆಯಾದ ಸಂವಿಧಾನವನ್ನು ರಚಿಸಿಕೊಳ್ಳಲು ಸಂವಿಧಾನ ಸಭೆಗೆ ಸದಸ್ಯರ ಆಯ್ಕೆ ಪ್ರಕ್ರಿಯೆಯು ಸ್ವತಂತ್ರ ಪೂರ್ವದಲ್ಲಿ ನಡೆದ ಸಂದರ್ಭದಲ್ಲಿ ಸಂವಿಧಾನ ಸಭೆಗೆ ಸುಮಾರು 15 ಮಹಿಳೆಯರು ಆಯ್ಕೆಯಾಗಿದ್ದಿದ್ದು ಸಂತೋಷದಾಯಕ ಸಂಗತಿ. ಅವರು ಸ್ವತಂತ್ರ ಹೋರಾಟಗಾರ್ತಿಯರು ವಿವಿಧ ಸಮಿತಿಗಳಲ್ಲಿ ಅಧ್ಯಕ್ಷರಾಗಿ ಹಾಗೂ ವಿವಿಧ ಉಪಸಮಿತಿಗಳಲ್ಲಿ ಸಂವಿಧಾನ ಸಭೆಯಲ್ಲಿ ಕಾರ್ಯ ನಿರ್ವಹಿಸಿದ್ದರು.

ಆ ಮಹಿಳೆಯರು ವಕೀಲೆಯರು, ವೈದವ್ಯ ಕೌಟುಂಬಿಕ ದೌರ್ಜನ್ಯ, ಹಿಂಸೆ, ಆಸ್ತಿ ಕಬಳಿಕೆ, ಜಾತಿ ದಬ್ಬಾಳಿಕೆ, ಶೋಷಣೆ ಇತ್ಯಾದಿಗಳಿಂದ ನೊಂದು ಅದನ್ನು ಮೆಟ್ಟಿ ಮಹಿಳಾ ತುಳಿತವನ್ನು ನಿಯಂತ್ರಿಸುವ ಆಶಯ ಹೊತ್ತು ವಿವಿಧ ಭಾಷೆ, ಧರ್ಮ, ಜಾತಿಗಳವರಾದರೂ ಮಹಿಳೆಯರ ಬಗ್ಗೆ ಕಾಳಜಿ ಹೊಂದಿ ಕಾನೂನು ರಚನೆಯಲ್ಲಿ ಕಾರ್ಯೋನ್ಮುಖರಾಗಿದ್ದರು. ಆ ಹದಿನೈದು ಮಹಿಳೆಯರು ಮತ್ತು ಅವರ ಕ್ಷೇತ್ರಗಳು ಹಾಗೂ ವಿವಿಧ ಸಮಿತಿಗಳ ಸದಸ್ಯತ್ವದೊಂದಿಗೆ ಸಂವಿಧಾನ ಸಭೆಯಲ್ಲಿ ಅವರು ಚರ್ಚೆಗಳಲ್ಲಿ ಪಾಲ್ಗೊಂಡ ವಿವಿಧ ವಿಷಯಗಳು ಇಂತಿವೆ.

1. **ಅಮ್ಮು ಸ್ವಾಮಿನಾಥನ್** : ಮದರಾಸು, ಮೂಲಭೂತ ಹಕ್ಕು ನಿರ್ದೇಶಕ ತತ್ವಗಳ ಮೇಲಿನ ಚರ್ಚೆ.
2. **ಆನಿ ಮಸ್ಕರೇನೆ** : ತಿರುವಾಂಕೂರು ಕೊಚಿನ್ ಯೂನಿಯನ್ ಸಂಸ್ಥಾನಗಳ ವಿಲೀಕರಣ ಹಾಗೂ ಸಂಸತ್ತಿನ ವೇಳಾಪಟ್ಟಿ ನಿಗದಿ.
3. **ಬೇಗಂ ಐಜಾಜ್‌ರಸೂಲ್:** ಯುನೆಟೆಡ್ ಪ್ರಾವಿನ್ಸ್, ಅಲ್ಪಸಂಖ್ಯಾತರ ಹಕ್ಕು ಪಕ್ಷದಾಚೆ ಮಂತ್ರಿಗಳ ಸ್ವಯತ್ತತೆ, ಸುಮಾರು 12ಕ್ಕೂ ಹೆಚ್ಚು ವಿಷಯಗಳಲ್ಲಿ ಚರ್ಚೆಗಳಲ್ಲಿ ಪಾಲ್ಗೊಂಡಿದ್ದರು.
4. **ದಾಕ್ಷಾಯಿಣಿ ವೇಲಾಯುಧನ್** : ಮದರಾಸು ಜೀತಮುಕ್ತಿ, ಹರಿಜನರಿಗೆ ಪ್ರತ್ಯೇಕ ಮೀಸಲಾತಿ, ಪ್ರತ್ಯೇಕ ಮತಕ್ಷೇತ್ರ, ಸಂವಿಧಾನದಾಚೆಗೂ ಅಸ್ಪೃಶ್ಯತೆ ವಿರುದ್ಧ ಹೋರಾಟ.
5. **ದುರ್ಗಾಬಾಯಿ ದೇಶ್‌ಮುಖ್** : ಮದರಾಸು ನ್ಯಾಯಾಧೀಶರ ನೇಮಕ, ಹೈಕೋರ್ಟ್‌ಗಳ ಸ್ಥಾಪನೆ, ದೇವದಾಸಿ ಪದ್ಧತಿ ನಿರ್ಮೂಲನೆ ಇತ್ಯಾದಿಗಳ ಕುರಿತು ಚರ್ಚೆ.
6. **ಹನ್ಸಾ ಮೆಹ್ತಾ** : ಮುಂಬೈ ಮಹಿಳೆಗೆ ಸಾಮಾಜಿಕ ಆರ್ಥಿಕ, ರಾಜಕೀಯ ನ್ಯಾಯ, ರಾಷ್ಟ್ರಧ್ವಜದ ಕುರಿತು ಹಾಗೂ ಪ್ರಜಾ ಜವಾಬ್ದಾರಿ ಕುರಿತು ಚರ್ಚೆ.
7. **ಕಮಲಾ ಚೌಧರಿ** : ಯುನೈಟೆಡ್ ಪ್ರಾವಿನ್ಸ್, ಹೆಣ್ಣಿನ ಕಷ್ಟಗಳು ತುಮಲಗಳನ್ನು ತನ್ನ ಕಾದಂಬರಿಗಳ ಮೂಲಕ ಕೇಳಿಸುತ್ತಾ ರಾಜಕಾರಣಕ್ಕಿಂತ ಮಹಿಳಾ ಅಸ್ಮಿತೆಯ ಅರಿವಿರುವ ಗಂಭೀರ ಸಾಹಿತಿಯಾಗಿ ಸಂವಿಧಾನ ಸಭೆಯಲ್ಲಿದ್ದರು.
8. **ಲೀಲಾರಾಯ್** : ಪಶ್ಚಿಮ ಬಂಗಾಳ, ಬಂಗಾಳದ ಮಹಿಳಾ ಮತಾಧಿಕಾರಿ ಸಮಿತಿಯ ಅಧ್ಯಕ್ಷೆಯಾಗಿ ಮಹಿಳಾ ಹಕ್ಕುಗಳ ಕುರಿತು ಹೋರಾಟ ನಡೆಸಿ ಬಂಗಾಳ ಪ್ರಾಂತ್ಯ, ಕಾಂಗ್ರೆಸ್ ಮಹಿಳಾ ಸಂಘ ನಿರ್ಮಿಸಿದ ಕೀರ್ತಿ ಇವರಿಗಿದೆ.
9. **ಮಾಲತಿದೇವಿ ಚೌಧರಿ** : ಒರಿಸ್ಸಾ, ಆದಿವಾಸಿಗಳ ಭೂಮಿಹಕ್ಕು, ನಿರಂಕುಶಾಧಿಪತ್ಯ, ಮೌಢ್ಯ, ಅನಕ್ಷರತೆಯ ವಿರುದ್ಧ ಹೋರಾಡಿದ ಮೊದಲ ಮಾರ್ಕ್ಸ್‌ವಾದಿ ಮಹಿಳೆ.
10. **ಪೂರ್ಣಿಮಾ ಬ್ಯಾನರ್ಜಿ** : ಯುನೈಟೆಡ್ ಪ್ರಾವಿನ್ಸ್ ಮೇಲ್ಮನೆಯ ಪ್ರಾಮುಖ್ಯತೆ ಸಂಸತ್ತಿನಲ್ಲಿ ತೆರವಾದ ಮಹಿಳೆಯರ ಸ್ಥಾನಕ್ಕೆ ಮಹಿಳೆಯರನ್ನೇ ತುಂಬುವುದು ಇತ್ಯಾದಿ ಮಹಿಳಾಪರ ಚಿಂತನೆಗೆ ಆದ್ಯತೆ.
11. **ರಾಜಕುಮಾರಿ ಅಮೃತ್‌ಕೌರ್** : ಸೆಂಟ್ರಲ್ ಪ್ರಾವಿನ್ಸ್ ಬೇರಾರ್, ಏಕರೂಪ ನಾಗರೀಕ ಸಂಹಿತೆಯ ಕುರಿತು ವಾದಿಸಿದವರಲ್ಲಿ ಪ್ರಮುಖರು, ಸ್ವತಂತ್ರ ಭಾರತದಲ್ಲಿ 10 ವರ್ಷಗಳ ಕಾಲ ಆರೋಗ್ಯ ಸಚಿವರಾಗಿ ಸೇವೆ ಸಲ್ಲಿಸಿದ್ದರು.
12. **ರೇಣುಕಾ ರೇ** : ಪಶ್ಚಿಮ ಬಂಗಾಳ ಮಹಿಳಾ ಸಮಾನತೆ, ಮಹಿಳಾ ನ್ಯಾಯ, ಧರ್ಮ ನಿರಪೇಕ್ಷೆ, ಮಹಿಳಾ ಸಾಗಾಟ, ದೇವದಾಸಿ ಪದ್ಧತಿ ನಿರ್ಮೂಲನೆ ಇತ್ಯಾದಿಗಳ ಕುರಿತು ಚರ್ಚೆ, ಹೋರಾಟ.
13. **ಸರೋಜಿನಿ ನಾಯ್ಡು** : ಬಿಹಾರ, ಎಲ್ಲರನ್ನೂ ಒಳಗೊಳ್ಳುವ ಸಂವಿಧಾನ ಸಭೆ ಇರಬೇಕು, ರಾಷ್ಟ್ರಧ್ವಜ ಸಮಿತಿಯಲ್ಲಿ ಕಾರ್ಯನಿರ್ವಹಣೆ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್‌ನ ಮೊದಲ ಅಧ್ಯಕ್ಷರು, ವುಮೆನ್ ಇಂಡಿಯನ್ ಅಸೋಸಿಯೇಷನ್ ಸ್ಥಾಪಕ ಸದಸ್ಯರಾಗಿದ್ದರು. ಸ್ವತಂತ್ರ ಭಾರತದ ಅಗ್ರಾ-ಅವಾದ್ ಪ್ರಾಂತ್ಯದ ಗೌರ್ನರ್ ಆಗಿದ್ದರು.
14. **ಸುಚೇತ ಕೃಪಲಾನಿ** : ಯುನೈಟೆಡ್ ಪ್ರಾವಿನ್ಸ್, ಮಹಿಳಾ ಕಾಂಗ್ರೆಸ್‌ನ್ನು ಮಹಿಳಾ ಕೋಶವಾಗಿ ಮುನ್ನಡೆಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. ವಂದೇ ಮಾತರಂ ಗೀತೆಗೆ ಪ್ರಾಧಾನ್ಯತೆ, ಸ್ವತಂತ್ರ ಭಾರತದ ಮೊದಲ

ಮಹಿಳಾ ಮುಖ್ಯಮಂತ್ರಿಯಾಗಿ ಉತ್ತರ ಪ್ರದೇಶ ಸರ್ಕಾರವನ್ನು 1963 ರಿಂದ 1967 ರವರೆಗೆ ಮುನ್ನಡೆಸಿದರು.

**15. ವಿಜಯಲಕ್ಷ್ಮಿ ಪಂಡಿತ್ :** ಯುನೈಟೆಡ್ ಪ್ರಾವಿನ್ಸ್ ವಸಾಹತೋತ್ತರ ವಿಶ್ವ ಏಷ್ಯಾದ ಪ್ರಾಮುಖ್ಯತೆ, ಭಾರತದ ಮೊದಲ ಕ್ಯಾಬಿನೆಟ್ ಮಂತ್ರಿಯಾಗಿದ್ದ ಕೀರ್ತಿಗೆ ಭಾಜನರು ಇವರು, ನೆಹರೂ ಸಹೋದರಿ ವಿಶ್ವಸಂಸ್ಥೆ ಸಾಮಾನ್ಯ ಸಭೆಗೆ ಭಾರತದಿಂದ ಆಯ್ಕೆಯಾದ ಹಾಗೂ ವಿಶ್ವ ಮಹಿಳಾ ಪ್ರಥಮ ಬಾರಿ ಅಧ್ಯಕ್ಷೆಯಾದ ಕೀರ್ತಿ ಇವರಿಗೆ ಸಲ್ಲುತ್ತದೆ.

ಈ 15 ಜನ ಮಹಿಳಾ ಮಣಿಗಳೂ ಸಂವಿಧಾನ ಸಭೆಯಲ್ಲಿ ಮಹಿಳಾ ಹಕ್ಕುಗಳು, ಸಮಾನತೆ, ನ್ಯಾಯ, ಶೋಷಣೆಯ ವಿರುದ್ಧದ ಧ್ವನಿಯನ್ನು ಎತ್ತಿ ಹೋರಾಟ ನಡೆಸಿದ್ದರಲ್ಲದೆ, ಸಮಾಜದಲ್ಲಿಯೂ ಮಹಿಳಾ ಧ್ವನಿಯಾಗಿ ಹೋರಾಡಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಇವರುಗಳ ಹೋರಾಟದ ಬದುಕಿನ ಇತಿಹಾಸ ಇಂದಿನ ಮಹಿಳೆಯರಿಗೆ ಮಾರ್ಗಸೂಚಿಯಾಗುತ್ತದೆ.

**ಸಂಸತ್ತಿನಲ್ಲಿ ಮಹಿಳಾ ಮೀಸಲಾತಿ ಮಸೂದೆ ಜಾರಿಯ ಪ್ರಯತ್ನಗಳು**

ಸ್ವಾತಂತ್ರ್ಯಾ ನಂತರದಲ್ಲಿ ಗ್ರಾಮೀಣಾಭಿವೃದ್ಧಿಗಾಗಿ ದೇಶವ್ಯಾಪಿ ಸಮುದಾಯಾಭಿವೃದ್ಧಿ ಯೋಜನೆಯನ್ನು ಬೃಹತ್ ಪ್ರಮಾಣದಲ್ಲಿ ಜಾರಿಗೆ ತರಲು ಯೋಜಿಸಿದಾಗ ಅಂತಹ ಯೋಜನೆಯಲ್ಲಿ ಗ್ರಾಮೀಣ ಜನತೆಯು ಸ್ವಯಂ ಪಾಲ್ಗೊಳ್ಳುವ ಅಗತ್ಯ ಕಂಡುಬಂದಿತು. ಕೇಂದ್ರ ಸರ್ಕಾರ ರಚಿಸಿದ ಪಂಚಾಯತ್ ರಾಜ್ ವ್ಯವಸ್ಥೆ ಮತ್ತು ಸಮುದಾಯ ಅಭಿವೃದ್ಧಿ ಅಧ್ಯಯನ ಸಮಿತಿ ಪ್ರಥಮ ಬಾರಿಗೆ ಆಡಳಿತ ವ್ಯವಸ್ಥೆಯಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆಗೆ ಆದ್ಯತೆ ನೀಡಿತು.

1957ರಲ್ಲಿ ರಚನೆಯಾದ ಬಲವಂತರಾಯ್ ಮೆಹ್ತಾ ರವರ ಅಧ್ಯಕ್ಷತೆಯ ಈ ಸಮಿತಿಯು ಪಂಚಾಯತ್ ಸಂಸ್ಥೆಗಳ ಅಭಿವೃದ್ಧಿಗೆ ಹಾಗೂ ಸಮುದಾಯದ ಅಭಿವೃದ್ಧಿ ಯೋಜನೆಗಳು ಯಶಸ್ವಿಯನ್ನು ಕಾಣಬೇಕೆಂದರೆ ಮಹಿಳಾ ಪಾಲ್ಗೊಳ್ಳುವಿಕೆ ಅಗತ್ಯವಾಗಿದೆ ಎಂದು ಸ್ಪಷ್ಟೀಕರಿಸಿದರು.

ಸ್ಥಳೀಯ ಸಂಸ್ಥೆಗಳು ಬಲಗೊಳ್ಳಬೇಕೆಂದರೆ ಸಮಾಜ ಕಲ್ಯಾಣ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವ ಇಬ್ಬರು ಮಹಿಳೆಯರನ್ನು ನಾಮಕರಣ ಮಾಡಬೇಕೆಂದು ಆ ಸಮಿತಿ ಸೂಚಿಸಿತು.

1975ರ ಮಹಿಳೆಯರ ಸ್ಥಿತಿ–ಗತಿ ಕುರಿತಾದ ರಾಷ್ಟ್ರೀಯ ವರದಿ ಮಹಿಳೆಯರ ರಾಜಕೀಯ ಪ್ರವೇಶಕ್ಕೆ ಹೊಸ ತಿರುವು ನೀಡಿದ ವರದಿಯೆನ್ನಬಹುದು. ಅಂತರರಾಷ್ಟ್ರೀಯ ಮಹಿಳಾ ದಶಕದ ಸಂದರ್ಭದಲ್ಲಿ ಬಂದ ಈ ವರದಿ ಮಹಿಳೆಯರ ಮೇಲಿನ ದೌರ್ಜನ್ಯ ತಡೆಗೆ ಅನೇಕ ಕಾಯ್ದೆ ಜಾರಿಗೆ ತರಲು ನೆರವಾಯಿತು. ಕಾನೂನು ರಚನೆಯ ಸ್ಥಾನಗಳಲ್ಲಿ ಮಹಿಳೆಯರ ಪ್ರಾತಿನಿಧ್ಯ ಹೆಚ್ಚಾಗುವುದರಿಂದ ಮಾತ್ರ ಮಹಿಳೆಯರ ಸ್ಥಾನಮಾನ ಸುಧಾರಿಸುತ್ತದೆ ಎಂದು ಪ್ರತಿಪಾದಿಸಿತು.

1978ರ ಪಂಚಾಯತ್ ವ್ಯವಸ್ಥೆ ಕುರಿತು ಅಧ್ಯಯನ ನಡೆಸಿದ್ದ ಅಶೋಕ್ ಮೆಹ್ತಾ ನೇತೃತ್ವದ ವರದಿಯೂ ಬಲವಂತರಾಯ್ ಮೆಹ್ತಾ ವರದಿಯಲ್ಲಿ ತಿಳಿಸಿದ್ದ ಮಹಿಳಾ ಆಡಳಿತದಲ್ಲಿ ಪಾಲ್ಗೊಳ್ಳುವಿಕೆಯನ್ನು ಬೆಂಬಲಿಸಿತು. ಪಂಚಾಯಿತಿ ಚುನಾವಣೆಗಳಲ್ಲಿ ಇಬ್ಬರು ಮಹಿಳೆಯರನ್ನು ಆಯ್ಕೆ ಮಾಡಬೇಕು, ಇಲ್ಲದಿದ್ದರೂ ಇಬ್ಬರು ಮಹಿಳೆಯರನ್ನು ಪಂಚಾಯಿತಿ ಆಡಳಿತಕ್ಕೆ ನಾಮಕರಣ ಮಾಡಬೇಕು ಎಂದು ಶಿಫಾರಸ್ಸು ಮಾಡಿತು.

ಇಂತಹ ನಾಮಕರಣವನ್ನು ವಿರೋಧಿಸಿದ ಮಹಿಳಾ ಸಂಘಟನೆಗಳು ನಾಮಕರಣದ ಬದಲು ಚುನಾವಣೆಯಲ್ಲಿ ಸ್ಪರ್ಧಿಸಲು ಮೀಸಲಾತಿ ಕಲ್ಪಿಸಬೇಕೆಂದು ಆಗ್ರಹ ಪಡಿಸಿದವು.

ಪಂಚಾಯತ್ ವ್ಯವಸ್ಥೆಯಲ್ಲಿ ಮಹಿಳೆಗೆ ಶಾಸನಬದ್ಧ ಮೀಸಲಾತಿ ನೀಡುವ ಕ್ರಾಂತಿಕಾರಿ ಪ್ರಯತ್ನ ಮೊದಲು ನಡೆದದ್ದು ಕರ್ನಾಟಕದಲ್ಲೇ. 1983 ರಲ್ಲಿ ಜನತಾದಳ ಸರ್ಕಾರ ಜಾರಿಗೆ ತಂದ ಪಂಚಾಯತ್ ರಾಜ್ ತಿದ್ದುಪಡಿ ಮಸೂದೆ ಮಹಿಳೆಯರಿಗೆ 25% ಮಿಸಲಾತಿ ನೀಡಿತ್ತು. ಇದು 1987ರ ಚುನಾವಣೆಯಲ್ಲಿ ಜಾರಿಗೆ ಬಂದಾಗ ದೇಶದಲ್ಲೇ ಮೊದಲ ಬಾರಿಗೆ ನೂರಾರು ಮಹಿಳೆಯರು ಪಂಚಾಯತ್ ರಾಜ್‌ಗೆ ಆಯ್ಕೆಯಾಗಿ ಬಂದರು.

ಮಹಿಳೆಯರನ್ನು ಕುರಿತಾದ 1988ರ ರಾಷ್ಟ್ರೀಯ ದೃಷ್ಟಿಕೋನ ಯೋಜನೆಯು ಆಡಳಿತ ವ್ಯವಸ್ಥೆಯ ಎಲ್ಲಾ ಸ್ತರಗಳಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆ ಹೆಚ್ಚಾಗುವುದರ ಅಗತ್ಯವನ್ನು ಪುನರ್ ಪ್ರತಿಪಾದಿಸಿತು. ಪಂಚಾಯತ್ ವ್ಯವಸ್ಥೆಗಳಲ್ಲಿ ಪಾಲ್ಗೊಳ್ಳುವಿಕೆಯ ಉದಾಹರಣೆಯ ಬುನಾದಿಯ ಮೇಲೆ ಪಂಚಾಯತ್ ನಿಂದ ಹಿಡಿದು ಲೋಕಸಭೆಯವರೆಗೆ ಎಲ್ಲಾ ಚುನಾಯಿತ ಸಂಸ್ಥೆಯಲ್ಲಿ ಮಹಿಳೆಯರಿಗೆ 1/3 ಭಾಗ ಮೀಸಲಾತಿ ನೀಡಬೇಕೆಂದು ಒತ್ತಿ ಹೇಳಿತು.

1978ರಿಂದಲೂ ಯಶಸ್ವಿ ಪಂಚಾಯತ್ ವ್ಯವಸ್ಥೆಯನ್ನು ರೂಢಿಸಿಕೊಂಡು ಬಂದಿದ್ದ ಪಶ್ಚಿಮ ಬಂಗಾಳ ಸರ್ಕಾರ 1992ರಲ್ಲಿ ಮಹಿಳೆಯರಿಗೆ 1/3 ಮೀಸಲಾತಿ ನೀಡಿ ದೇಶಕ್ಕೆ ಮಾದರಿಯಾಯಿತು.

1993ರ ಏಪ್ರಿಲ್ ನಲ್ಲಿ ಜಾರಿಗೆ 73 ಮತ್ತು 74ನೇ ಸಂವಿಧಾನದ ತಿದ್ದುಪಡಿ ಮಸೂದೆಗಳು ಎಲ್ಲಾ ರಾಜ್ಯಗಳಲ್ಲಿ ಗ್ರಾಮ ಹಾಗೂ ನಗರಗಳಲ್ಲಿ ಏಕರೂಪದ ಮಹಿಳಾ ಮೀಸಲಾತಿಯನ್ನು ಜಾರಿಗೆ ತಂದಿತು.

ಇಂದು ಪ್ರಸ್ತುತ ಸಂಸತ್ತಿನ ಅಂಗೀಕಾರದೊಂದಿಗೆ 50% ರಷ್ಟು ಮೀಸಲಾತಿಯನ್ನು ಗ್ರಾಮೀಣ ಮತ್ತು ನಗರ ಆಡಳಿತದಲ್ಲಿ ಮಹಿಳೆಯರಿಗೆ ಅವಕಾಶ ಕಲ್ಪಿಸಿರುವುದು ಸ್ವಾಗತಾರ್ಹ. ಇದರಿಂದ ಸ್ಥಳೀಯ ಹಂತದಲ್ಲಿ ಮಹಿಳೆಯರು ಅಧಿಕಾರದ ಚುಕ್ಕಾಣಿ ಹಿಡಿಯಲು ಅವಕಾಶ ಸಿಕ್ಕಂತಾಗಿದೆ.

ಆದರೂ ಮಹಿಳೆಯರ ಸ್ಥಿತಿ–ಗತಿಗಳ ಸುಧಾರಣೆಯ ಪಾಲು ಸುಧಾರಿಸದಿರುವುದು ವಿಷಾದನೀಯ ಸಂಗತಿ. ಮಹಿಳೆಯರ ದುಃಸ್ಥಿತಿಯ ಬಗ್ಗೆ ಅಧ್ಯಯನ ನಡೆಸಿ ಪರಿಹಾರ ಮಾರ್ಗೋಪಾಯಗಳನ್ನು ರೂಪಿಸುವ ಉದ್ದೇಶದಿಂದ ಕೇಂದ್ರ ಸರ್ಕಾರ ಅಂದಿನ ಕಾಂಗ್ರೆಸ್ ನ ಹಿರಿಯ ಸಂಸತ್ ಸದಸ್ಯೆ ಫುಲರೇಣು ಗುಹಾ ನೇತೃತ್ವದಲ್ಲಿ ಸಮಿತಿಯೊಂದನ್ನು 1974ರಲ್ಲಿ ರೂಪಿಸಿತು. ಈ ಸಮಿತಿ ರಚನೆಗೆ ಪ್ರೇರಣೆ 1975ನ್ನು ಮಹಿಳಾ ವರ್ಷವನ್ನಾಗಿ ಘೋಷಿಸುವ ನಿರ್ಧಾರವನ್ನು ವಿಶ್ವಸಂಸ್ಥೆ ತೆಗೆದುಕೊಂಡಿದ್ದು.

ಇವರ ನೇತೃತ್ವದ ಸಮಿತಿಯು ಮಹಿಳೆಯರಿಗೆ ನಡೆಯುತ್ತಿರುವ ದೌರ್ಜನ್ಯಗಳ ಕುರಿತು ಸಂಶೋಧನಾ ಅಧ್ಯಯನಗಳನ್ನು ನಡೆಸಿ ಆಡಳಿತಾತ್ಮಕವಾಗಿ ಸಂಸತ್ತಿನಲ್ಲೂ ಮಹಿಳೆಗೆ ಪಾಲು ಕೊಟ್ಟಾಗ ಅವಳ ಶೋಷಣೆ ಹಾಗೂ ದುಃಸ್ಥಿತಿಗೆ ಅಂತ್ಯ ಹಾಡಲು ಸಾಧ್ಯ ಎಂದು ತಿಳಿಸಿತು.

ಶಾಸನ ಸಭೆಯಲ್ಲಿ ಮೀಸಲಾತಿ ಬೇಕೆಂಬ ಬೇಡಿಕೆಯನ್ನು ಆರಂಭದಲ್ಲಿ ಅಷ್ಟೊಂದು ಗಂಭೀರವಾಗಿ ಪರಿಗಣಿಸಿರಲಿಲ್ಲ. ಆದರೆ 1975ರಿಂದ 1995 ರವರೆಗೆ ನಾಲ್ಕು ಜಾಗತಿಕ ಮಹಿಳಾ ಸಮ್ಮೇಳನಗಳನ್ನು ವಿಶ್ವಸಂಸ್ಥೆ ನಡೆಸಿದರ ಹಿನ್ನೆಲೆ.

(1) 1975 ಮೆಕ್ಸಿಕೋ, (2) 1980 ಕೋಪನ್ಹೇಗನ್, (3) 1985 ನೈರೋಬಿ, (4) 1995 ಬೀಜಿಂಗ್.

ಈ ನಾಲ್ಕು ಕಡೆ ನಡೆದ ಸಮ್ಮೇಳನಗಳು ಆಡಳಿತಾತ್ಮಕವಾಗಿ ಮಹಿಳೆ ಪಾಲ್ಗೊಂಡಾಗ ಮಾತ್ರ ಮಹಿಳಾ ಸಮಸ್ಯೆಗಳ ನಿರ್ಮೂಲನೆ ಸಾಧ್ಯ ಎಂಬ ಚಿಂತನೆಯನ್ನು ಬೆಂಬಲಿಸಿದ್ದರ ಫಲವಾಗಿ ಮಹಿಳಾ ಚಳುವಳಿಯ ಒಂದು ಭಾಗ ರಾಜಕೀಯ ಸಬಲೀಕರಣ ಎಂಬುದನ್ನು ಮಹಿಳೆಯರು ಅರಿಯುವಂತೆ ಮಾಡಿತು. ಸಮಾಜ ಮತ್ತು ರಾಜಕೀಯ ಪರಿವರ್ತನೆಯಲ್ಲಿ

ISSN : 2249-2429

RNI REG.NO.KARKAN/2011/38712

ತನ್ನದು ಮಹತ್ವದ ಪಾತ್ರ ಎನ್ನುವ ಮಹಿಳಾ ಚಳುವಳಿ ಈ ರಾಜಕೀಯ ಮೀಸಲಾತಿಯನ್ನು ತನ್ನ ಮುಖ್ಯ ಧ್ಯೇಯ ಮಾಡಿಕೊಂಡಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸರ್ಕಾರ ಮುಖ್ಯ ಪಾತ್ರ ವಹಿಸುವುದರಿಂದ ಮಹಿಳೆಯರು ಈ ಸರ್ಕಾರದ ಭಾಗವಾಗಬೇಕಾಗಿರುವುದು ಸಹಜವೇ ಆಗಿದೆ.

1996 ರಲ್ಲಿ ಸಂಯುಕ್ತ ರಂಗ ಸರ್ಕಾರವು ಸಂವಿಧಾನದ 81ನೇ ತಿದ್ದುಪಡಿ ಮಸೂದೆಯನ್ನು ಸಿದ್ಧಗೊಳಿಸಿತು. ಈ ತಿದ್ದುಪಡಿಯು ಲೋಕಸಭೆಯಲ್ಲಿ 1/3 ಭಾಗದ ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಿರಿಸುವ ಪ್ರಯತ್ನವಾಗಿತ್ತು. ಈ ಪ್ರಯತ್ನಕ್ಕೂ ಮೊದಲೇ ಎಲ್ಲಾ ರಾಜಕೀಯ ಪಕ್ಷಗಳೂ ತಮ್ಮ ಚುನಾವಣಾ ಪ್ರಣಾಳಿಕೆಗಳಲ್ಲಿ ಮಹಿಳೆಯರಿಗೆ ತಮ್ಮ ಪಕ್ಷಗಳಲ್ಲಿ ಮೀಸಲಾತಿ ನೀಡುವುದಾಗಿ ಮಹಿಳೆಯರಿಗೆ ಆಶ್ವಾಸನೆ ನೀಡಿದ್ದವು.

ಕಮ್ಯುನಿಸ್ಟ್ ಪಕ್ಷದ ಹಿರಿಯ ಸಂಸತ್ ಸದಸ್ಯರಾದ ಗೀತಾ ಮುಖರ್ಜಿಯವರ ನೇತೃತ್ವದ ಜಂಟಿ ಸದನ ಸಮಿತಿಗೆ ಈ ಮಸೂದೆಯನ್ನು ಪರಾಮರ್ಶೆಗಾಗಿ ಒಪ್ಪಿಸಲಾಗಿತ್ತು. ಈ ಸದನ ಸಮಿತಿ ತುಂಬಾ ಪರಿಶ್ರಮ ವಹಿಸಿ ಕೆಲವೊಂದು ತಿದ್ದುಪಡಿಗಳನ್ನು ಅಳವಡಿಸಿ ವರದಿಯನ್ನು ಸಲ್ಲಿಸಿತು. ಈ ತಿದ್ದುಪಡಿಗಳೆಂದರೆ ಲೋಕಸಭೆಯಲ್ಲಿ 3 ಸ್ಥಾನಕ್ಕಿಂತ ಕಡಿಮೆ ಸ್ಥಾನಗಳಿರುವ ರಾಜ್ಯದಲ್ಲಿ ಈ ಮೀಸಲಾತಿ ಅನ್ವಯಿಸದು. ಮೊದಲ ಎರಡು ಚುನಾವಣೆಯಲ್ಲಿ ಸ್ಥಾನಗಳನ್ನು ಆವರ್ತನ ಮಾಡಲಾಗುವುದು ಮತ್ತು 3ನೆಯ ಚುನಾವಣೆಯಲ್ಲಿ 2 ಸ್ಥಾನಗಳು ಸಾಮಾನ್ಯವಾಗಿರುತ್ತವೆ. ಒಂದೇ ಸ್ಥಾನವಿರುವ ರಾಜ್ಯಗಳಲ್ಲಿ 3 ವರ್ಷಗಳಿಗೊಮ್ಮೆ ಮಹಿಳೆಯರಿಗಾಗಿ ಒಂದು ಸ್ಥಾನವನ್ನು ಮೀಸಲಿಡಲಾಗುವುದು.

ಓ.ಬಿ.ಸಿ ಗಳಿಗೆಂದು ಮೀಸಲಾತಿಯನ್ನು ನೀಡಬೇಕೆಂಬುದನ್ನು ಜಂಟಿ ಸಮಿತಿ ತಳ್ಳಿ ಹಾಕಿತು. ಆದರೂ ಸಮಿತಿಯ ಕೆಲವು ಮಂದಿ ಪ್ರತ್ಯೇಕವಾಗಿ ಈ ಪ್ರಶ್ನೆಯನ್ನು ಎತ್ತಿದರು. ಆದರೂ ಸಮಿತಿಯು ತನ್ನ ಶಿಫಾರಸ್ಸಿನಲ್ಲಿ ಸೂಕ್ತ ಸಮಯ ಬಂದಾಗ ಅಗತ್ಯ ಬಿದ್ದರೆ ಸಂಸತ್ತು ಯಾವುದಾದರೂ ಹಂತದಲ್ಲಿ ಓ.ಬಿ.ಸಿ ಮಹಿಳೆಯರಿಗೆ ಮೀಸಲಾತಿಯ ಲಾಭವನ್ನು ದೊರಕಿಸಿಕೊಡುವ ತಿದ್ದುಪಡಿ ಮೂಲಕ ದೊರೆಯಲು ಅವಕಾಶ ಮಾಡಲು ಸರ್ಕಾರವನ್ನು ಕೋರಿತು.

ಈ ಮರುಮಂಡಿಸಿದ ಮಸೂದೆಯು 1997 ಮತ್ತು 1998 ರಲ್ಲಿ ಸದನದಲ್ಲಿ ಈ ಮಸೂದೆ ಜಾರಿಯಾಗದಂತೆ ತಡೆಹಿಡಿಯಲಾಗಿದೆ. ಪ್ರತಿಯೊಂದು ಅಧಿವೇಶನ ಆರಂಭವಾದಾಗಲೂ ಈ ವಿಷಯ ಪ್ರಸ್ತಾಪಿತವಾದರೂ ಆಡಳಿತಕ್ಕೆ ಬಂದ ಅಸ್ಥಿರ ಸರ್ಕಾರಗಳಿಂದಾಗಿ ಯಾರೂ ಈ ಮಸೂದೆಯನ್ನು ಮಂಡಿಸುವ ಧೈರ್ಯ ಮಾಡಿಲ್ಲ. 1999 ರಲ್ಲಿ ವಾಜಪೇಯಿ ನೇತೃತ್ವದ ಸರ್ಕಾರವು ಈ ಮಸೂದೆಯನ್ನು ಮತ್ತೆ ಮಂಡಿಸಿತು. 2002 ರಲ್ಲಿ ಒಮ್ಮೆ ಮತ್ತು 2003 ರಲ್ಲಿ 2 ಬಾರಿ ಈ ಮಸೂದೆಯನ್ನು ಮಂಡಿಸಲಾಯಿತು. 2004 ರಲ್ಲಿ ಯು.ಪಿ.ಎ ಸರ್ಕಾರವು ಈ ಮಸೂದೆಯ ಮಂಡನೆಯನ್ನು ತನ್ನ ಕಾರ್ಯಕ್ರಮದಲ್ಲಿ ಸೇರಿಸಿಕೊಂಡಿತು. 2008 ರಲ್ಲಿ ಸರ್ಕಾರ ರಾಜ್ಯ ಸಭೆಯಲ್ಲಿ ಈ ಮಸೂದೆಯನ್ನು ಮಂಡಿಸಿ ಚರ್ಚೆಗೆ ಇಡುವುದರಲ್ಲಿ ಯಶಸ್ವಿಯಾಯಿತು. 2010 ರಲ್ಲಿ ಮತ್ತೆ ರಾಜ್ಯ ಸಭೆಯಲ್ಲಿ ಮಂಡಿತವಾದ ಈ ಮಸೂದೆ ಸರ್ವಾನುಮತದಿಂದ ಅಂಗೀಕಾರವಾಗಿ ಒಂದು ಇತಿಹಾಸವನ್ನೇ ಸೃಷ್ಟಿಸಿತು. ನಂತರ ಲೋಕಸಭೆಯ ಅಂಗೀಕಾರಕ್ಕಾಗಿ ಕಾದು ಕುಳಿತಿರುವ ಈ ಮಸೂದೆಯ ಬಗ್ಗೆ ಸರ್ವಪಕ್ಷಗಳ ಒಮ್ಮತದ ಅಭಿಪ್ರಾಯ ಮೂಡಿಸಲು ಸ್ಪೀಕರ್ ಮೀರಾಕುಮಾರ್ ಸಭೆಯೊಂದನ್ನು ಕರೆದಿದ್ದರು. ಎಂದಿನಂತೆ ಈ ಸಭೆಗೆ ಸಮಾಜವಾದಿ ಮತ್ತು ಬಿ,ಎಸ್ಪಿ ಪಕ್ಷಗಳು ಗೈರು ಹಾಜರಾಗಿ ತಮ್ಮ ಅಸಮ್ಮತಿಯನ್ನು ತೋರಿದವು.

ಈಗ ಹಿಂದುಳಿದ ಮತ್ತು ಅಲ್ಪಸಂಖ್ಯಾತ ಮಹಿಳೆಯರ ಪ್ರಾತಿನಿಧ್ಯಕ್ಕೆ ಧಕ್ಕೆ ಬರುವುದೆಂದು ಮಹಿಳಾ ಮೀಸಲಾತಿ ಮಸೂದೆ ನೆನೆಗುದಿಗೆ ಬಿದ್ದಿರುವಾಗ–ಈ ಒಳಸುಳಿಗಳನ್ನು ಅರ್ಥಮಾಡಿಕೊಳ್ಳಬೇಕಿದೆ.

## ಮಹಿಳೆ ಮತ್ತು ಅಭಿವೃದ್ಧಿ

ಸೃಷ್ಟಿಯ ಮೂಲ ಸ್ತ್ರೀ, ಅದರ ಒಡೆಯ ಪುರುಷನಾಗಿದ್ದಾನೆ. ಮನುಷ್ಯ ಸಮಾಜದಲ್ಲಿ ಸ್ತ್ರೀ, ಪುರುಷ ಎಂಬ 2 ಪ್ರಮುಖ ಲಿಂಗಗಳು ಮನುಕುಲದ ಬೆಳವಣಿಗೆಗೆ ಪೂರಕವಾಗಿವೆ. ಮಾನವ ಸೃಷ್ಟಿಗೆ ಇರ್ವರೂ ಸಮಪಾಲುದಾರರೇ, ಸಮಾನ ಜವಾಬ್ದಾರರೆ. ಆದರೆ ಪಾಲುಗಾರಿಕೆ, ಜವಾಬ್ದಾರಿಗಿಂತ ಒಡೆತನಕ್ಕೆ ಹೆಚ್ಚು ಕಾತೊರೆಯುವ ದಾಷ್ಟ್ಯ ಮನಸ್ಥಿತಿ ಪುರುಷ ಸಮಾಜ ಬೆಳೆಸಿಕೊಳ್ಳುತ್ತಿದೆ. ಇದಕ್ಕೆ ಕಾರಣವಿಲ್ಲದಿಲ್ಲ, ದೈಹಿಕ ಭಿನ್ನತೆ ಹಾಗೂ ದೈಹಿಕ ಶಕ್ತಿ ಸಾಮರ್ಥ್ಯದ ಹೆಚ್ಚಳಿಕೆಯೇ ಈ ಒಡೆತನ ಬಿಟ್ಟುಕೊಡಲು ಪುರುಷ ಸಮಾಜ ಒಪ್ಪಿಕೊಳ್ಳದೆ ಅನಾದಿ ಕಾಲದಿಂದ ಅಲಿಖಿತ ರೂಪದಲ್ಲಿಯೇ ಮಹಿಳೆಯನ್ನು ನಿಯಂತ್ರಿಸುತ್ತಾ ಬರುತ್ತಿದೆ.

ಪ್ರಸ್ತುತ ಪ್ರಜಾಪ್ರಭುತ್ವ ಸರ್ಕಾರ ಪದ್ಧತಿಗಳಲ್ಲಿ ಸಮಾನ ಮತದಾನದ ಹಕ್ಕು ನೀಡಿರುವುದೇ ಮಹಿಳೆಗೆ ನೀಡಿರುವ ದೊಡ್ಡ ಔದಾರ್ಯವೆಂದು ಭಾವಿಸುವಂತಹ ಪರಿಸ್ಥಿತಿಯನ್ನು ಮೀರಿ ಮಹಿಳೆ ಹೋರಾಟ ಚಳುವಳಿಗಳ ಮೂಲಕ ಆಡಳಿತದಲ್ಲಿ ಪಾಲು ಪಡೆಯಲು ತೊಳಲಾಟ ನಡೆಸುತ್ತಿದ್ದಾಳೆ. ಸ್ವಾತಂತ್ರ್ಯ ನಂತರ ಭಾರತದಲ್ಲಿ ಲೋಕಸಭೆಗೆ ಆಯ್ಕೆಯಾದ ಮಹಿಳಾ ಪ್ರತಿನಿಧಿಗಳ ಸಂಖ್ಯೆಯನ್ನು ಗಮನಿಸುವುದಾದರೆ.

| | |
|---|---|
| 1952 – 24 ಮಹಿಳೆಯರು | 1962 – 37 ಮಹಿಳೆಯರು |
| 1971 – 28 ಮಹಿಳೆಯರು | 1977 – 21 ಮಹಿಳೆಯರು |
| 1980 – 32 ಮಹಿಳೆಯರು | 1984 – 45 ಮಹಿಳೆಯರು |
| 1989 – 28 ಮಹಿಳೆಯರು | 1991 – 42 ಮಹಿಳೆಯರು |
| 1996 – 41 ಮಹಿಳೆಯರು | 1998 – 44 ಮಹಿಳೆಯರು |
| 1999 – 52 ಮಹಿಳೆಯರು | 2004 – 52 ಮಹಿಳೆಯರು |
| 2009 – 69 ಮಹಿಳೆಯರು | 2014 – 66 ಮಹಿಳೆಯರು |
| 2019 – 10 ಮಹಿಳೆಯರು | |

ಈ ಪಟ್ಟಿಯಲ್ಲಿರುವ ಮಹಿಳಾ ಸದಸ್ಯರ ಸಂಖ್ಯೆಯನ್ನು ಗಮನಿಸಿದಾಗ ಸ್ಪಷ್ಟವಾಗುತ್ತದೆ ಮಹಿಳಾಪರ ಕಾನೂನು ರಚನೆಗೆ ಯಾವ ರೀತಿ ಆದ್ಯತೆ ಸಿಗುತ್ತದೆಂಬುದು. ಮಹಿಳಾ ಮೀಸಲಾತಿಗೆ ಸಂಬಂಧಿಸಿದಂತೆಯೂ ಮಹಿಳಾ ಸದಸ್ಯರ ಕೊರತೆಯೇ ಮಸೂದೆ ಅಂಗೀಕಾರ ಪಡೆಯದಿರಲು ಕಾರಣವೆಂಬುದು ಸ್ಪಷ್ಟವಾಗುತ್ತಿದೆ. ರಾಷ್ಟ್ರಾಭಿವೃದ್ಧಿಗೆ ಸಂಬಂಧಿಸಿದಂತೆ ಮಾತನಾಡುವುದಾದರೆ ನೈಜ ಅಭಿವೃದ್ಧಿಯ ಮೂಲ ಅರಿತಿರುವ ಮಹಿಳೆಗೆ ಸಂಸತ್ತಿನಲ್ಲಿ ಅವಕಾಶ ಕಲ್ಪಿಸಿ ಕೊಡದಿರುವುದೇ ಆಗಿದೆ.

ರಾಷ್ಟ್ರಾಭಿವೃದ್ಧಿಗೆ ಪೂರಕವಾದ ಸಂವಿಧಾನದ ತಿದ್ದುಪಡಿಗಳನ್ನು ತರುವಲ್ಲಿ ಬಹುಮತದ ಕೊರತೆಯಿಂದ ನೆನೆಗುದಿಗೆ ಬಿದ್ದಿರುವ ಮಸೂದೆಗಳನ್ನು ನೋಡುವುದಾದರೆ –

- ಮಧ್ಯಪಾನ ನಿಷೇಧ ಮಸೂದೆ
- ಲೋಕಪಾಲ್ ಮಸೂದೆ
- ಮಹಿಳಾ ಮೀಸಲಾತಿ ಮಸೂದೆ

ಮಧ್ಯಪಾನ ನಿಷೇದ ಮಸೂದೆಯನ್ನು ಜಾರಿಗೆ ತರಲು ಸಂವಿಧಾನದ 4ನೇ ಭಾಗದಲ್ಲಿ ಬರುವ ರಾಜ್ಯ ನಿರ್ದೇಶಕ ತತ್ವಗಳಲ್ಲಿನ 47 ವಿಧಿಯಲ್ಲಿ ಮಧ್ಯಪಾನ ನಿಷೇಧವನ್ನು ಮಾಡಿ ಮನುಕುಲದ ಆರೋಗ್ಯ ಸಂರಕ್ಷಣೆಗೆ ಆದ್ಯತೆ ನೀಡಬೇಕೆಂದು ಮಾರ್ಗದರ್ಶನ ನೀಡಿದೆ. ಆದರೆ ಸರ್ಕಾರಗಳು ಮಧ್ಯಪಾನ ನಿಷೇಧ ಮಾಡುವುದನ್ನು ಒಪ್ಪಿಕೊಳ್ಳಲು ತಯಾರಿಲ್ಲ, ಕಾರಣ ಈ ಮಧ್ಯಪಾನದಿಂದ ಬರುವ ಆದಾಯವೇ ರಾಷ್ಟ್ರಾಭಿವೃದ್ಧಿಗೆ ಸಹಾಯವಾಗುತ್ತಿದೆ. ಬಹುಪಾಲು ತೆರಿಗೆ ಈ ಮಧ್ಯಪಾನದಿಂದಲೇ ಬರುತ್ತಿರುವುದರಿಂದ ನಿಷೇಧ ಮಾಡಿದಲ್ಲಿ ಅಭಿವೃದ್ಧಿಗೆ ಕಂಟಕವೆಂದು ಸರ್ಕಾರಗಳು ಉತ್ತರಿಸುತ್ತಿವೆ. ಮಸೂದೆ ಮಂಡನೆಯಾದರೂ ಬಹುಮತದ

ಕೊರತೆ ಕಾಣುತ್ತಿದೆ. ಕಾರಣ ನೈಜ ಅಭಿವೃದ್ಧಿಯ ಕಡೆ ಒಲವಿರದ ಪುರುಷ ಜನ ಪ್ರತಿನಿಧಿಗಳು ಹಾಗೂ ತಮ್ಮ ಸ್ವಂತ ಮದ್ಯ ತಯಾರಿಕಾ ಘಟಕಗಳನ್ನು ಹೊಂದಿರುವವರು, ಜನಪರ ಕಾಳಜಿ ಇವರಲ್ಲಿ ಎಲ್ಲಿಂದ ಬರಲು ಸಾಧ್ಯ.

ದೇಶ ರಾಜ್ಯವಾಳುವವರಿಗೆ ಮದ್ಯದಂಗಡಿ ಬೇಕು, ಆದರೆ ಸುಭದ್ರ ಸಮಾಜ ಬೇಕೆನ್ನುವವರಿಗೆ ಹೆಣ್ಣು ಮಕ್ಕಳ ಮೇಲೆ ಹಿಂಸೆ ನಿಲ್ಲಲಿ, ಮಕ್ಕಳು ಹೊಟ್ಟೆ ತುಂಬ ಉಣ್ಣಲಿ, ಅವರಿಗೆ ಒಳ್ಳೆಯ ಶಿಕ್ಷಣ ಸಿಗಲಿ ಮನೆಯ ಮಕ್ಕಳು ಹಾಳಾಗದಿರಲಿ ಎನ್ನುವವರಿಗೆ ಮುಖ್ಯವಾಗಿ ಜನಸಂಖ್ಯೆಯ 50% ರಷ್ಟಿರುವ ಹೆಣ್ಣು ಮಕ್ಕಳಿಗೆ ಮದ್ಯದಂಗಡಿಗಳು ಬೇಡ.

ಲೋಕ ಸಭೆಯಲ್ಲಿ ಮಹಿಳಾ ಪ್ರತಿನಿಧಿಗಳು ಹೆಚ್ಚು ಇದ್ದಾಗ ಈ ಮಸೂದೆ ಅಂಗೀಕಾರಗೊಂಡು ಗಾಂಧೀಜಿಯ ಕನಸು ನನಸಾಗಿ ನೈಜ ರಾಷ್ಟ್ರಾಭಿವೃದ್ಧಿಗೆ ಪೂರಕವಾಗುತ್ತದೆ.

## ಲೋಕಪಾಲ್ ಮಸೂದೆ

ಈ ಮಸೂದೆ ಕುರಿತು ಮಾತನಾಡುವುದೆಂದರೆ ಕೇಂದ್ರ ಸರ್ಕಾರಿ ನೌಕರರು ಮತ್ತು ರಾಜಕಾರಣಿಗಳು ಭ್ರಷ್ಟಾಚಾರದಲ್ಲಿ ತೊಡಗಿದಾಗ ಅವರನ್ನು ನಿಯಂತ್ರಿಸಿ ಶಿಕ್ಷಿಸಲು ಪೂರಕವಾಗುವ ಕಾಯ್ದೆಗೆ ಸಂಬಂಧಿಸಿದ ಮಸೂದೆಯಾಗಿದೆ. ಈ ಮಸೂದೆಯ ತಿದ್ದುಪಡಿಗೂ ಬಹುಮತ ಸಂಸತ್ತಿನಲ್ಲಿ ಸಿಗುತ್ತಿಲ್ಲ. ಕಾರಣ ಹೇಳಲೇ ಬೇಕಿಲ್ಲ. ಎಲ್ಲ ರಾಜಕಾರಣಿಗಳು ರಾಜಕಾರಣದ ಅರ್ಥವರಿತು ಆಡಳಿತ ನಡೆಸುತ್ತಿಲ್ಲ. ತಮ್ಮ ಸ್ವಾರ್ಥ ಸಾಧನೆಯೇ ರಾಜಕಾರಣವೆಂದು ಭಾವಿಸಿ ಕುತಂತ್ರದ ಆಡಳಿತವನ್ನು ನಡೆಸುತ್ತಿರುವುದು ರಾಜಕಾರಣ ಅಥವಾ ರಾಜಕೀಯವೆಂದರೆ ಉತ್ತಮ ಆಡಳಿತ ನಿರ್ವಹಣಾ ತಂತ್ರವಿಧಾನ. ಇದನ್ನು ಮರೆತು ರಾಜಕಾರಣಿಗಳು ಸ್ವಾರ್ಥಿಗಳಾಗಿರುವುದು ಈ ಮಸೂದೆ ಅಂಗೀಕಾರಗೊಳ್ಳದಿರಲು ಕಾರಣವಾಗಿದೆ. ಜೊತೆಗೆ ಮಹಿಳಾ ಪ್ರತಿನಿಧಿಗಳ ಸಂಖ್ಯೆ ಹೆಚ್ಚಿಗೆ ಇದ್ದಿದ್ದರೆ, ಅವರು ಈ ಮಸೂದೆಯ ಅಂಗೀಕಾರಕ್ಕೆ ತಮ್ಮ ಒಪ್ಪಿಗೆ ಸೂಚಿಸಿ ರಾಷ್ಟ್ರಾಭಿವೃದ್ಧಿ ಕಾರ್ಯದಲ್ಲಿ ಜನಪ್ರತಿನಿಧಿಗಳು ನೈಜವಾಗಿ ಪಾಲ್ಗೊಳ್ಳಲು ಬೆಂಬಲಿತರಾಗುತ್ತಿದ್ದರು. ತನ್ಮೂಲಕ ರಾಷ್ಟ್ರಾಭಿವೃದ್ಧಿಯಾಗುತ್ತಿತ್ತು.

## ಮಹಿಳಾ ಮೀಸಲಾತಿ ಮಸೂದೆ

ಮಹಿಳಾ ಹೋರಾಟಗಳು, ಚಳುವಳಿಗಳು, ಆಂದೋಲನಗಳು ವಿಶ್ವಮಟ್ಟದಲ್ಲೇ ನಡೆಯುತ್ತಿದ್ದರೂ ಈ ಮೀಸಲಾತಿ ಮಸೂದೆಯನ್ನು ಅಂಗೀಕಾರ ಮಾಡುವ ಪಕ್ಷಭೇದ ಮರೆತು 50% ರಷ್ಟಿರುವ ಮಹಿಳೆಯರನ್ನು ಕೇಂದ್ರ ಆಡಳಿತ ಚುಕ್ಕಾಣಿ ಹಿಡಿಯದಂತೆ ಪುರುಷ ಪ್ರತಿನಿಧಿಗಳು ನಿಯಂತ್ರಿಸುತ್ತಿದ್ದಾರೆ.

ಈ ಮಸೂದೆ ಜಾರಿಗೆ ಬರಬೇಕೆಂದರೆ ಸ್ಥಳೀಯ ಸರ್ಕಾರಗಳ ಹಂತಗಳಲ್ಲಿ ನೀಡಿರುವ ಮೀಸಲಾತಿಗಳನ್ನು ಮಹಿಳಾ ಪ್ರತಿನಿಧಿಗಳು ಸದ್ಬಳಕೆ ಮಾಡಿಕೊಳ್ಳುವಲ್ಲಿ ಹೆಚ್ಚು ಕಾರ್ಯತತ್ಪರರಾಗಬೇಕಿದೆ. ಹಾಗೂ ಮಹಿಳಾ ರಾಜಕೀಯ ಪಕ್ಷಗಳ ಅಸ್ತಿತ್ವದ ಅಗತ್ಯ ಸ್ಥಳೀಯ ಹಂತದಿಂದಲೂ ಸಂಘಟಿತಗೊಂಡು ಜನಸಂಖ್ಯೆಯ ಅರ್ಧಭಾಗವಿರುವ ಮಹಿಳೆಯರು ನೈಜ ರಾಷ್ಟ್ರಾಭಿವೃದ್ಧಿ ಕಾರ್ಯದಲ್ಲಿ ಧೈರ್ಯದಿಂದ ಮುನ್ನುಗ್ಗುವ ಕಾರ್ಯದಲ್ಲಿ ತೊಡಗಿಸಿಕೊಳ್ಳಬೇಕಿದೆ. ಈ ರೀತಿಯ ಧೈರ್ಯಯುತ ಮಹಿಳಾಪರ ಹೋರಾಟಗಳು ಸಕ್ರಿಯಗೊಂಡಾಗ ಮಹಿಳಾ ಅಭಿವೃದ್ಧಿಯ ಜೊತೆ ರಾಷ್ಟ್ರಾಭಿವೃದ್ಧಿ ಸಾಕಾರಗೊಳ್ಳುತ್ತದೆ. ಲಂಚ, ಭ್ರಷ್ಟಾಚಾರ, ಸ್ವಜನ ಪಕ್ಷಪಾತ, ಸ್ವಾರ್ಥವಿಲ್ಲದ ನಿಸ್ವಾರ್ಥ ಆಡಳಿತಕ್ಕೆ ಅವಕಾಶವಾದಾಗ ರಾಷ್ಟ್ರಪ್ರಗತಿ ಸಾಕಾರಗೊಳ್ಳುತ್ತದೆ.

ಸಾಮಾಜಿಕ ನೆಮ್ಮದಿ ಕೊಡುವ ಉತ್ತಮ ಮಸೂದೆಗಳು ಅಂಗೀಕಾರಗೊಂಡು ಕುಟುಂಬ ನೆಮ್ಮದಿಯನ್ನು ಕಾಣುತ್ತದೆ. ಕುಟುಂಬಗಳ ಒಕ್ಕೂಟವಾದ ಗ್ರಾಮ ನೆಮ್ಮದಿಯ ನೆಲೆಯಾಗುತ್ತದೆ. ಗ್ರಾಮಗಳ ಒಕ್ಕೂಟವಾದ ರಾಜ್ಯವು, ಸುಖಕರವೂ ಹಾಗೂ ನೆಮ್ಮದಿಯುತವಾದ ಬದುಕನ್ನು ತನ್ನ ಸರ್ಕಾರದ ಮೂಲಕ ಪ್ರಜೆಗಳಿಗೆ ಒದಗಿಸುತ್ತದೆ.

## ಉಪಸಂಹಾರ

ಹೆಣ್ಣೆಂಬ ಕೀಳರಿಮೆ ಭಾವನೆಗಳು ಸಮಾಜದಲ್ಲಿ ಕುಟುಂಬಗಳಲ್ಲಿ ಸ್ತ್ರೀ-ಪುರುಷರಿಬ್ಬರಲ್ಲಿ ಹೊರಟು ಹೋಗಿ ಬದುಕಿಗೆ ಇಬ್ಬರ ಅವಶ್ಯಕತೆಯೂ ಇದೆ ಎಂಬ ಭಾವನಾತ್ಮಕತೆಯ ಎಲ್ಲರ ಮನಸ್ಸಿನಲ್ಲಿ ಸ್ಥಿರವಾಗಿ ಒಡಮೂಡಿ ಬೇರುಬಿಟ್ಟು ಗಟ್ಟಿಯಾದಾಗ ಪುಸ್ತಕಗಳಲ್ಲಿ, ಬರವಣಿಗೆಗಳಲ್ಲಿ, ಭಾಷೆಗಳಲ್ಲಿ, ಸಂವಿಧಾನದ ದಾಖಲೆಗಳಲ್ಲಿ ಮೀಸಲಾತಿಯ ಒಡಮೂಡಿಕೆಯ ಅಗತ್ಯವಿಲ್ಲ. ಸ್ತ್ರೀ ಸಮಾನಗಳು ಎಂಬ ಸತ್ಯ ಅಂತರಾಳಗಳಲ್ಲಿ ನಿಂತ ನೀರಾಗದೆ ಹರಿಯುವ ನದಿಯಾಗಿ ಎಲ್ಲೆಲ್ಲೂ ಹರಿಯುತ್ತಾ, ಚುಮ್ಮುತ್ತಾ ಹೊಸ ಸೃಷ್ಟಿಯ ಪ್ರಜ್ವಲತೆಗೆ ಕಾರಣಳಾಗಿ ಸಮಾಜದ ಅಭಿವೃದ್ಧಿಗೆ ರಾಷ್ಟ್ರದ ಅಭಿವೃದ್ಧಿಗೆ ಸ್ತ್ರೀ ಮಾನಸಿಕ ಹಾಗೂ ದೈಹಿಕವಾಗಿ ಸ್ಥಿರಳಾಗಿ ಕುಟುಂಬದಿಂದ ರಾಷ್ಟ್ರದವರೆಗೆ ಹೊಸಬೆಳಕನ್ನು ಮೂಡಿಸುತ್ತಾಳೆ.

**"ಕಣ್ಣಿರದೆ ರವಿಯೇನು? ರವಿ ಇರದೆ ಕಣ್ಣೇನು? ಅನ್ಯೋನ್ಯ ಸಹಕೃತಿಯನುಭವ ಸಾರ್ಥಕತೆ"** ಎಂಬ **ಡಿ.ವಿ.ಜಿ** ಯವರ ನುಡಿಯ ಅರ್ಥವನ್ನು ಸ್ತ್ರೀ ಪುರುಷರೀರ್ವರು ಅರಿತಾಗ ರಾಷ್ಟ್ರಾಭಿವೃದ್ಧಿ ತಂತಾನೇ ಕಾರ್ಯೋನ್ಮುಖವಾಗುತ್ತದೆ.

## ಆಕರ ಗ್ರಂಥಗಳು


- **ಡಾ. ಎನ್. ಗಾಯತ್ರಿ :** ಮಹಿಳಾ ಮೀಸಲಾತಿ ಮತ್ತು ಲಿಂಗ ರಾಜಕಾರಣ
- **ಶಾರದಗೋಪಾಲ :** ಮಹಿಳೆ ಮತ್ತು ಅಭಿವೃದ್ಧಿ
- **ಕನಕ್ ಮುಖರ್ಜಿ, ಅನುವಾದ ರಾಹು :** ಭಾರತೀಯ ಮಹಿಳಾ ವಿಮೋಚನೆಯ ಆಂದೋಲನ
- **ಡಾ. ಎಚ್.ಎಸ್. ಅನುಪಮಾ :** ಸಂವಿಧಾನ ಮತ್ತು ಮಹಿಳೆ
- **ಪ್ರಜಾವಾಣಿ :** ವೃತ್ತಪತ್ರಿಕೆ ಲೇಖನಗಳು
- **The Hindu -** Articles.


■■


ವಿದ್ಯಾನಿಧಿ VPG ಪ್ರಕಾಶನ ®
ಶ್ರೀ ಶಿವಕುಮಾರ ಏಜನ್ಸಿ®
ಶೈಕ್ಷಣಿಕ ಪುಸ್ತಕಗಳ ಪ್ರಕಾಶಕರು ಮತ್ತು ಮಾರಾಟಗಾರರು
ಸ್ಟೇಶನ್ ರೋಡ ಮತ್ತು 'ನನಸು' ಜೆ. ಟಿ. ಮಠ ರೋಡ,
ಗದಗ-582 101
ದೂರವಾಣಿ : 08372-237527, 277527
e-mail : vidyanidhiprakashana@gmail.com. www.vidyanidhionline.com

ISSN : 2249-2429 ಸಂಶೋಧನೆ RNI REG.NO.KARKAN/2011/38712

# ಗೂಗಲ್ ಕ್ಲಾಸ್‌ರೂಮ್ ಕಲಿಕಾ ನಿರ್ವಹಣಾ ವ್ಯವಸ್ಥೆಯಲ್ಲಿ (LMS) ಬೋಧನಾ–ಕಲಿಕಾ ಪ್ರಕ್ರಿಯೆ

✍ **ಡಾ. ಪಿ. ಎಸ್. ಹೆಗಡಿ,** ಸಹಾಯಕ ಪ್ರಾಧ್ಯಾಪಕರು, ಕೆ.ಎಸ್.ಎಸ್. ವಿಜಯನಗರ ಶಿಕ್ಷಣ ಮಹಾವಿದ್ಯಾಲಯ, ಹುಬ್ಬಳ್ಳಿ – 580031.

*ಸಾರಾಂಶ*

*ಕೋವಿಡ್–19 ವೈರಾಣು ಜೀವನದ ಪ್ರತಿಯೊಂದು ಕ್ಷೇತ್ರವನ್ನು ತಲ್ಲಣಗೊಳಿಸಿ, ಪ್ರತಿಯೊಬ್ಬರ ದೈನಂದಿನ ಕಾರ್ಯಗಳ ಜೊತೆಗೆ ಇನ್ನಿತರ ಜವಾಬ್ದಾರಿಗಳನ್ನು ನಿಷ್ಕ್ರೀಯಗೊಳಿಸಿದೆ. ಎಲ್ಲ ಕ್ಷೇತ್ರಗಳಂತೆ ಶಿಕ್ಷಣ ಕ್ಷೇತ್ರಕ್ಕೂ ದೊಡ್ಡ ಪೆಟ್ಟು ನೀಡಿದ್ದು, ಭೋದಿಸುವಿಕೆ, ಕಲಿಕೆ ಮತ್ತು ಮಾಪನ ಪ್ರಕ್ರಿಯೆಗಳು ಕೆಲವು ಕಾಲ ಸಂಪೂರ್ಣವಾಗಿ ಸ್ಥಬ್ದಗೊಂಡಿದ್ದು, ಅತ್ಯಂತ ನಿಧಾನಗತಿಯಲ್ಲಿ ಮೇಲಕ್ಕೆ ಬರುತ್ತಿದೆ. ಇಂತಹ ಸನ್ನಿವೇಶದಲ್ಲಿ ವೆಬ್ ಆಧಾರಿತ ಸಿಂಕ್ರೋನೈಜ್ಡ (Synchronised-Online) ಅಂದರೆ ಆನ್‌ಲೈನ್ ಮುಖಾಮುಖಿ ಬೋಧನೆ ಮತ್ತು ಅಸಿಂಕ್ರೋನೈಜ್ಡ (Asynchornised – Offline/ Recorded) ಅಂದರೆ ನೇರ ಪ್ರಸಾರವಲ್ಲದ ಅಂತರ್ಜಾಲದಲ್ಲಿ ಮುದ್ರಿತ ವಿದ್ಯುನ್ಮಾನಗಳ ಹಲವಾರು ಮಾದರಿಗಳನ್ನು ಅಳವಡಿಸುವ ಕಾರ್ಯನಿರ್ವಹಿಸುವ ಕೌಶಲ್ಯಗಳನ್ನು ಶಿಕ್ಷಕ–ವಿದ್ಯಾರ್ಥಿ ಸಮುದಾಯ ಹೊಂದಿದ್ದರೆ, ಎಲ್ಲ ವಲಯದ ಶೈಕ್ಷಣಿಕ ಚಟುವಟಿಕೆಗಳು ಹೆಚ್ಚಿನ ವ್ಯಾಪ್ತಿಯಲ್ಲಿ ಕುಂಠಿತಗೊಳ್ಳುತ್ತಿರಲಿಲ್ಲ. ನಮ್ಮ ವಿದ್ಯಾರ್ಥಿ ಸಮುದಾಯ ವಿಡಿಯೋ ಸಮ್ಮೇಳನ (Video Conferencing), ಧ್ವನಿ ಸಮ್ಮೇಳನ (Call Conferencing), ವಿಡಿಯೋ ಮುದ್ರಣ ಮತ್ತು ಸಂಕಲನ, ವರ್ಡ, ಸ್ಲೈಡಗಳು, ಪಿಡಿಎಫ್ ನಂತಹ ಕಡತಗಳ ತಯಾರಿಸುವಿಕೆ ದಾಖಲೆಗಳನ್ನು, ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟಿಂಗ್, ಶೇರಿಂಗ್ ಮತ್ತು ಪಬ್ಲಿಸಿಂಗ್ ಮಾಡುವ ಕಲೆ ಗೊತ್ತಿದ್ದರೂ, ಅವುಗಳನ್ನು ಶಿಕ್ಷಣ ಕ್ಷೇತ್ರದ ಚಟುವಟಿಕೆಗಳ ಎಲ್ಲ ಹಂತಗಳಲ್ಲಿ ರಚನಾತ್ಮಕವಾಗಿ (Structured), ಸಂಯೋಜಿತ ರೀತಿಯಲ್ಲಿ ಬಳಕೆ ಮಾಡುತ್ತಿಲ್ಲ. ಹೀಗಾಗಿ ಇಂದು ಸ್ಮಾರ್ಟ ಪೋನ್‌ಗಳು ಮತ್ತು ಗಣಕ ಯಂತ್ರಗಳ ಮೂಲಕ ಆಯಾ ವಿಷಯದ ಪಠ್ಯವನ್ನು ಮಿಥ್ಯ ವೇದಿಕೆಗಳ (Virtual Platforms) ನ್ನು ಸ್ಥಾಪಿಸಿ, ಬೋಧನೆ–ಕಲಿಕೆ ಮೌಲ್ಯಮಾಪನ ಕಾರ್ಯಗಳನ್ನು ಸುಲಲಿತ ಮಾಡಬೇಕಿದೆ. ಈ ನಿಟ್ಟಿನಲ್ಲಿ ಅತ್ಯಂತ ಸರಳವಾದ "ಗೂಗಲ್ ಕ್ಲಾಸ್‌ರೂಮ್" ಕಲಿಕಾ ನಿರ್ವಹಣಾ ವ್ಯವಸ್ಥೆಯ ವೈಶಿಷ್ಟಗಳು ಸೂಕ್ತವಾಗಿದ್ದು, ಪ್ರಪಂಚದ ಶಿಕ್ಷಣ ಕ್ಷೇತ್ರ ಎಲ್ಲ ಕಡೆಯಲ್ಲೂ ಬಳಕೆಯಾಗುತ್ತಿದ್ದು, ಡಿಜಿಟಲ್ ಇಂಡಿಯಾ, ಸ್ಕಿಲ್ ಇಂಡಿಯಾ ಮುಂತಾದ ಕಾರ್ಯಕ್ರಮಗಳನ್ನು ಯಶಸ್ವಿಯಾಗಿಸಲು ಪೂರಕವಾಗಿದೆ.*

*ಪ್ರಮುಖ ಪದಗಳು : ಸಿಂಕ್ರೋನೈಜ್ಡ, ಅಸಿಂಕ್ರೋನೈಜ್ಡ, ವಿಡಿಯೋ ಸಮ್ಮೇಳನ, ಮಿಥ್ಯ–ವೇದಿಕೆ, ಗೂಗಲ್ ಕ್ಲಾಸ್‌ರೂಮ್*

## ಹಿನ್ನೆಲೆ

"ವೆಬ್ ಆಧಾರಿತ ತಂತ್ರಜ್ಞಾನದ ಶ್ರೇಣಿಗಳ" ನವೀಕರಣದ ಮುಂದುವರೆಯುವಿಕೆಯು ಹಲವಾರು ತಂತ್ರಾಂಶಗಳು (ಅಪ್ಲಿಕೇಶನಗಳು) ನಮ್ಮ ಸ್ಮಾರ್ಟ ಪೋನ್‌ಗಳು, ಟ್ಯಾಬ್ಲೆಟ್‌ಗಳು ಮತ್ತು ಗಣಕ ಯಂತ್ರಗಳಲ್ಲಿ ಶ್ರೀಘ್ರವಾಗಿ ಸ್ಥಾಪಿತಗೊಳ್ಳುತ್ತಿವೆ. ಇಂದಿನ ನೆಟ್ಟಿಗರು (ಅಂತರ್ಜಾಲ ಬಳಕೆದಾರರು) ನವೀಕೃತ ಆ್ಯಪ್‌ಗಳನ್ನು ಶೀಘ್ರವಾಗಿ ಡೌನ್‌ಲೋಡ್ ಮಾಡಿಕೊಂಡು ಅವುಗಳ ಕಾರ್ಯ ನಿರ್ವಹಣೆಯನ್ನು ಕಲಿತು ತಮ್ಮ ಸಹವರ್ತಿಗಳಿಗೆ ಕೌಶಲ್ಯವನ್ನು ವರ್ಗಾಯಿಸುತ್ತಾರೆ. ಫೇಸ್‌ಬುಕ್ , ಯು–ಟೂಬ್, ವಾಟ್ಸಪ್, ಟೆಲಿಗ್ರಾಮ್ ನಂತಹ ಜನಪ್ರಿಯ ಸಾಮಾನ್ಯ ಸಾಮಾಜಿಕ ಜಾಲತಾಣಗಳಲ್ಲಿ ವಿಡಿಯೋ, ಸಂದೇಶಗಳು, ಪೋಟೋಗಳು, ಪಠ್ಯ, ಎನಿಮೇಶನಗಳು ಮುಂತಾದವುಗಳನ್ನು ಹರಿಬಿಡುವುದಕ್ಕಿಂತ ಮುಂಚೆ ಅವುಗಳನ್ನು ತಮ್ಮ ಆಶಯಕ್ಕೆ ತಕ್ಕಂತೆ ತಂತ್ರಾಂಶಗಳನ್ನು ಬಳಸಿಕೊಂಡು ಎಡಿಟ್ ಮಾಡುತ್ತಾರೆ. ಕೋವಿಡ್–19ರ ಸಾಂಕ್ರಾಮಿಕ ಅವಧಿಯಲ್ಲಿ ವೆಬ್ ವಿಡಿಯೋ ಕಾನ್ಪರಸ್ಸಿಂಗ್ ತಂತ್ರಾಂಶಗಳಾದ ಗೂಗಲ್ ಮೀಟ್, ಸಿಸ್ಕೊ–ವೆಬೆಕ್ಸ್, ಝೂಮ್, ಗೋ–ಟು–ಮೀಟಿಂಗ್, ಜಿಟ್ಸಿ, ಸ್ಕೈಪೀ ಮುಂತಾದವುಗಳ ಜೊತೆಗೆ ಸ್ವದೇಶಿಯ ರಿಲಯನ್ಸ್‌ನ ಜಿಯೋ ಮೀಟ್ ಮತ್ತು ಭಾರತಿ ಏರಟೆಲ್ ಬ್ಲೂಜೀನ್ಸ್ ಗಳನ್ನು ಬೋಧಕರು ಮತ್ತು ಕಲಿಕಾರ್ಥಿಗಳ ನೇರ ಪ್ರಸಾರದ ಮಿಥ್ಯ ಸಮುದಾಯ ಪರಿಸರದಲ್ಲಿ ಬಳಕೆ ಮಾಡುತ್ತಿದ್ದಾರೆ. ಇದರ ಜೊತೆಗೆ ವೆಬ್ ಶೇಖರಿತ ಮುದ್ರಿತ ಪಠ್ಯ ವಿಷಯಗಳ ರಚನೆಗಳಾದ ವಿಡಿಯೋಗಳು, ಎನಿಮೇಶನಗಳು, ಸ್ಲೈಡ್‌ಗಳು, ಪಠ್ಯ, ಕಡತಗಳು, ಚಿತ್ರಗಳು ಮತ್ತು ಇನ್ನಿತರ ದಾಖಲೆಗಳನ್ನು ಮುಂಚಿತವಾಗಿ ಅಭಿವೃದ್ಧಿಗೊಳಿಸಿ ವೆಬ್‌ನಲ್ಲಿ ಶೇಖರಿಸಿ, ಸಂಯೋಜಿಸಿ ಅಗತ್ಯವಿದ್ದಾಗ ಅವುಗಳನ್ನು ಪುನರಾವರ್ತಿಸಿ ಕಲಿಯಬಹುದು. ಇವುಗಳು ಮುದ್ರಿತ ಪ್ರಸಾರದ ಮಾದರಿಗಳಾಗಿದ್ದು, ಶೈಕ್ಷಣಿಕ ಕೋರ್ಸಗಳಿಗೆ ಅಳವಡಿಸಬಹುದು. ಇಂದು ಪ್ರಪಂಚದಾದ್ಯಂತ ಇಂತಹ ಪಠ್ಯದ ಶೈಕ್ಷಣಿಕ ಸಂಪನ್ಮೂಲಗಳನ್ನು ಅಂತರ್ಜಾಲದಲ್ಲಿ ನೆಲೆಗೊಳಿಸುವ "ಕಲಿಕಾ ನಿರ್ವಹಣಾ ವ್ಯವಸ್ಥೆ" (Learing Management System - LMS)ಗಳ "ಉಚಿತ" ಮತ್ತು "ಪಾವತಿ" ವಿಭಾಗಳ ಆಯ್ಕೆಗಳು ಮಾರುಕಟ್ಟೆಯಲ್ಲಿ ಲಭ್ಯವಿದೆ. ಶೈಕ್ಷಣಿಕ ಕ್ಷೇತ್ರದಲ್ಲಿ ಉಚಿತವಾಗಿ ಲಭ್ಯವಿರುವ ಪ್ರಮುಖ ಎಲ್.ಎಮ್.ಎಸ್.ಗಳೆಂದರೆ "ಗೂಗಲ್ ಕ್ಲಾಸ್‌ರೂಮ್" (Google Classroom), "ಮೂಡಲ್" (Moodle), "ಎಡ್‌ಮೂಡೋ" (Edmodo), "ಮೈಕ್ರೋಸಾಫ್ಟ್ ಟೀಮ್ಸ್" (Microsoft Teams), ಮುಂತಾದವುಗಳು. ಅದರಲ್ಲಿ ಜನಪ್ರಿಯ ಗೂಗಲ್ ಕ್ಲಾಸ್‌ರೂಮ್ ಸರಳವಾದ ಮಿಥ್ಯ ವರ್ಗಕೋಣೆಯ ಬೋಧನಾ ಕಲಿಕಾ ಪ್ರಕ್ರಿಯೆಗಳ ಜೊತೆಗೆ ದತ್ತಕಾರ್ಯಗಳ (Assignment) ನ್ನು ಮೌಲ್ಯಮಾಪಿಸಿ ದರ್ಜೆ/ಅಂಕ ನೀಡಲು ಅವಕಾಶವಿದೆ. ಹೀಗಾಗಿ ಇಂದು ಭಾರತೀಯ ಶಿಕ್ಷಣ ವ್ಯವಸ್ಥೆಯಲ್ಲಿ **'ಗೂಗಲ್ ಕ್ಲಾಸ್'**ರೂಮ್ ಚಿಕ್ಕ ಮಿಥ್ಯ ವರ್ಗಕೋಣೆಯ ವಿದ್ಯಾರ್ಥಿಗಳಿರುವ ವ್ಯವಸ್ಥೆಗೆ ಸೂಕ್ತವೆನಿಸಿದೆ. ಇತ್ತೀಚಿನ ರಾಷ್ಟ್ರೀಯ ಶಿಕ್ಷಣ ನೀತಿ–2020 (NEP-2020) ಕೂಡಾ ಅಂತರ್ಜಾಲ ಬೋಧನೆಗೆ ಹೆಚ್ಚಿನ ಪ್ರಾಶಸ್ತ್ಯತೆ ನೀಡಿದೆ. ಯು.ಜಿ.ಸಿ. ಮತ್ತು ಆಧೀನದ ಸಂಸ್ಥೆಗಳಾದ ಎಚ್.ಆರ್.ಡಿ.ಸಿ., ಟಿ.ಎಲ್.ಸಿ.,ತರಬೇತಿ ಸಂಸ್ಥೆಗಳು ಮತ್ತು ಪಿ.ಎಮ್.ಎಮ್.ಎಮ್.ಎನ್.ಎಮ್. ನಂತಹ ಬೋಧನಾ ಅಭಿವೃದ್ಧಿಪರ ಕಾರ್ಯಕ್ರಮಗಳ ಮೂಲಕ ಜಾರಿಗೊಳ್ಳುತ್ತವೆ. ಕೋವಿಡ್–19 ಲಾಕ್‌ಡೌನ್ ಸಂದರ್ಭಗಳಲ್ಲಿ ಆನ್‌ಲೈನ್ ವಿಡಿಯೋ ಕಾನ್ಪರಸ್ಸಿಂಗ್, ಅಂತರ್ಜಾಲ ವಿಡಿಯೋ, ಸ್ಲೈಡ್‌ಗಳು, ಶೀಟಗಳು, ವರ್ಡ, ಪಿ.ಡಿ.ಎಫ್. ಮುಂತಾದ ಡಿಜಿಟಲ್ ಮುದ್ರಿತ ಪಠ್ಯ ಮಾದರಿಗಳನ್ನು ಕಲಿಕಾ ನಿರ್ವಹಣಾ ವ್ಯವಸ್ಥೆಯಲ್ಲಿ ತರಗತಿ ವಿಷಯಕ್ಕೆ ಅನುಗುಣವಾಗಿ ತಯಾರಿಸಿ, ಸಂಯೋಜಿಸಲು ಆನ್‌ಲೈನ್ ಕಾರ್ಯಾಗಾರಗಳು, ಸಮ್ಮೇಳನಗಳು, ವೆಬಿನಾರ್‌ಗಳನ್ನು ವ್ಯವಸ್ಥೆಗೊಳಿಸಿ ಬೋಧಕ ಸಮುದಾಯದ ಪ್ರಾವಿಣ್ಯತೆಯನ್ನು ಹೆಚ್ಚಿಸಲು ಕಾರ್ಯ ಮಾಡುತ್ತಿದೆ.

## Google Classroom (ಗೂಗಲ್ ಕ್ಲಾಸ್‌ರೂಮ) ಖಾತೆ ಆರಂಭಿಸುವುದು ಹೇಗೆ ?

**ಹಂತ 1 :** ಗೂಗಲ್ ವರ್ಗಕೋಣೆಯ ಮುಖ ಪುಟ ತೆರೆಯಲು **"**https://classroom.google.com" ಈ ಲಿಂಕ್‌ನ್ನು ಸರ್ಚಎಂಜಿನ್ ಗಳಾದ ಗೂಗಲ್ ಕ್ರೋಮ್, ಫೈರ್‌ಪಾಕ್ಸ್ ಮತ್ತು ಮೈಕ್ರೋಸಾಫ್ಟ್ ಎಡ್ಜ್, ಇವುಗಳಲ್ಲಿ ಯಾವುದಾದರೂ ಒಂದರಲ್ಲಿ ಟೈಪ್ ಮಾಡಿದಾಗ ಮುಖಪುಟ ತೆರೆದುಕೊಳ್ಳುತ್ತದೆ.

**ಹಂತ 2 :** ವಿಂಡೋದ ಮೇಲ್ಭಾಗದ **"ಮೆನು ಬಾರ್"**ನಲ್ಲಿ **"ಎರಡು ಚಿಹ್ನೆಗಳು"** ಕಾಣಸಿಗುತ್ತವೆ. ಮೇಲ್ಭಾಗದ ಎಡ ಮೂಲೆಯಲ್ಲಿ "Main Menu" ಚಿಹ್ನೆ ಮತ್ತು ಮೇಲ್ಭಾಗದ ಬಲ ಮೂಲೆಯಲ್ಲಿ, ಖಾತೆದಾರರ ಚಿತ್ರದ ಎಡಭಾಗದಲ್ಲಿ **"**+**"** (ಸಂಕಲನ) ಚಿಹ್ನೆ ಗೋಚರಿಸುತ್ತಿದೆ. "Main Menu" ಚಿಹ್ನೆಯನ್ನು ಕ್ಲಿಕ್ ಮಾಡಿದಾಗ ಕೆಳಗಿನ ಮಾಹಿತಿ ತೆರೆಯುತ್ತದೆ.

I. **Classes :** ಇದು ವರ್ಗಕೋಣೆಯ ಪೋಲ್ಡರ್‌ಗಳ ಬಳಕೆದಾರರ ಸಂವಹನದ (User Interactive) ಭಾಗದಲ್ಲಿ ಕಾಣುತ್ತವೆ.

II. **Calendar :** ಇದು ನಿಯೋಜಿತ ದಿನಾಂಕಗಳ ವೇಳಾಪಟ್ಟಿ ತೋರಿಸುತ್ತದೆ.

III. **To review** ("Teaching" ಉಪ ಶಿರ್ಷಿಕೆಯ ಕೆಳಗೆ, ತೆರೆದ ವರ್ಗಕೋಣೆ ಬೋಧನಾ ವ್ಯವಹಾರಗಳನ್ನು **"**ಪರಿಶೀಲಿಸುವ**"** ಮತ್ತು **"**ಪರಿಶೀಲಿಸಬೇಕಾದ**"** ಮಾಹಿತಿ ಕೊಡುತ್ತದೆ.

